ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 8 ಗುರುವಾರ 2022

ಸಂಪುಟ: 43 | ಸಂಚಿಕೆ: 231 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಇಂದಿನಿಂದ ಬಹುರೂಪಿ ರಾಷ್ಟ್ರೀಯ ರಂಗೋತ್ಸವ



ಮೈಸೂರು, ಡಿ.7 (ಎಂಟಿವೈ)– ಮೈಸೂರು ರಂಗಾಯಣದ ವಾರ್ಷಿಕ ಮೆಗಾ ಇವೆಂಟ್ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ನಾಳೆ(ಡಿ.8)ಯಿಂದ ವಿಧ್ಯುಕ್ತವಾಗಿ ಆರಂಭವಾಗಲಿದ್ದು, ವಾರ ಕಾಲದ ರಂಗ ಉತ್ಸವಕ್ಕೆ ಸಕಲ ಸಿದ್ಧತೆ ಪೂರ್ಣಗೊಂಡಿದೆ. 'ಭಾರತೀಯತೆ' ಶೀರ್ಷಿಕೆಯಡಿ ಪ್ರಸಕ್ತ ಸಾಲಿನ ಬಹುರೂಪಿ ನಾಟಕೋತ್ಸವ ಆಯೋಜಿಸಲಾಗಿದ್ದು, ನಾಳೆ ಸಂಜೆ 5.30ಕ್ಕೆ ರಂಗಾಯಣದ ವನರಂಗದಲ್ಲಿ ಜನಪದೋತ್ಸವ ಕಾರ್ಯಕ್ರಮ ▶ 8ನೇ ಪುಟಕ್ಕೆ

ಭಾರತೀಯತೆ ಪ್ರತಿಬಿಂಬಿಸುವ ಬಹುರೂಪಿ

■ ಗಣೇಶ್ ಅಮೀನಗಡ


ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ತಮ್ಮ ಅಧಿಕಾರ ಅವಧಿಯ ಮೂರನೆಯ 'ಬಹುರೂಪಿ' ರಾಷ್ಟ್ರೀಯ ರಂಗೋತ್ಸವವನ್ನು ಮೈಸೂರಿನ ರಂಗಾಯಣದಲ್ಲಿ ಡಿಸೆಂಬರ್ 8ರಿಂದ 15ರವರೆಗೆ ಆಯೋಜಿಸಿದ್ದಾರೆ. ಬಹುಭಾಷಾ ನಾಟಕಗಳ ಪ್ರದರ್ಶನ, ರಾಷ್ಟ್ರೀಯ ವಿಚಾರ ಸಂಕಿರಣ, ಚಲನಚಿತ್ರೋತ್ಸವ, ಜಾನಪದೋತ್ಸವ, ಯಕ್ಷಗಾನ, ಪುಸ್ತಕ ಹಾಗೂ ಕರಕುಶಲ ಮೇಳ ಮತ್ತು ದೇಸಿ ಆಹಾರ ರಸದೌತಣ–ಇವು ಈ ಬಾರಿ 'ಬಹುರೂಪಿ'ಯ ಪ್ರಮುಖ ಕಾರ್ಯಕ್ರಮಗಳು. 'ಬಹುರೂಪಿ'ಯ ಅಂಗವಾಗಿ ಅವರೊಂದಿಗೆ ಹಿರಿಯ ಪತ್ರಕರ್ತರಾದ ಗಣೇಶ್ ಅಮೀನ ಗಡ ಅವರು 'ಮೈಸೂರು ಮಿತ್ರ' ನಿಗಾಗಿ ನಡೆಸಿದ ಕಿರು ಸಂದರ್ಶನವಿದು.

ಗಣೇಶ ಅಮೀನಗಡ: ನಿಮ್ಮ ಅವಧಿಯ ಮೂರನೆಯ 'ಬಹುರೂಪಿ' ಹೇಗಿದೆ?

ಅಡ್ಡಂಡ ಸಿ.ಕಾರ್ಯಪ್ಪ: ಹೌದು. ಮೊದಲನೆಯದು ಮಹಾತ್ಮ ಗಾಂಧೀಜಿಯ 150ನೇ ಜನ್ಮ ವರ್ಷದ ಅಂಗವಾಗಿ **'ಗಾಂಧಿಪಥ'** ವಿಷಯಾಧಾರಿತ **'ಬಹುರೂಪಿ'** ನಾಟಕೋತ್ಸವ ಹಮ್ಮಿಕೊಂಡಿದ್ದೆವು. ಎರಡನೆಯದು **'ತಾಯಿ'** ವಿಷಯಾಧಾರಿತವಾಗಿತ್ತು. ಈ ಬಾರಿ ಮೂರನೆಯದು **'ಭಾರತೀಯತೆ'** ಕುರಿತದ್ದಾಗಿದೆ.

ಗಣೇಶ: ನಿಮ್ಮ 'ಭಾರತೀಯತೆ' ಪರಿಕಲ್ಪನೆ ಕುರಿತು ಸ್ವಲ್ಪ ವಿವರಿಸ್ತಿರಾ?

ಕಾರ್ಯಪ್ಪ: ಭಾರತ ಎಂದರೆ ನೆಲವಲ್ಲ, ಭೂಪ್ರದೇಶವಲ್ಲ. ಜಗತ್ತಿನ ಯಾವ ರಾಷ್ಟ್ರವೂ ನನ್ನ ಹಾಗೆ ಪೂಜಿಸಲ್ಲ, ಆರಾಧಿಸಲ್ಲ. ಇದರ ಅಖಂಡತೆಯಲ್ಲಿ ಅನೇಕ ಭಾಷೆ, ಧರ್ಮ ಇದ್ದರೂ ಏಕತೆ ಸಾಧಿಸುತ್ತ ಬಂದಿದ್ದೇವೆ. ಆದರೆ ಈಚಿನ ವರ್ಷಗಳಲ್ಲಿ ಸಿದ್ಧಾಂತಗಳ ಆಧಾರದ ಮೇಲೆ ಒಗ್ಗಟ್ಟಾಗಿರ ಬೇಕೆಂದು ಎಲ್ಲಿದೆ ಎನ್ನುವ ಒಡಕು ಧ್ವನಿಗಳು ಹೆಚ್ಚುತ್ತಿವೆ. ದೇಶವನ್ನೇ ಛಿದ್ರಗೊಳಿಸುವ ಘಟನೆಗಳು ಸಹ ನಡೆಯುತ್ತಿವೆ. ಇಂಥ ಸಂದರ್ಭದಲ್ಲಿ ಏಕತೆ ಸಾಧಿಸುವುದು ನಮ್ಮ ಕರ್ತವ್ಯ ಆಗಬೇಕು. ನಮ್ಮ ಪರಂಪರೆ, ಇತಿಹಾಸ ಕುರಿತು ಬೆಳಕು ಚೆಲ್ಲುವಂತಾಗಬೇಕು. ಇದು ನಮ್ಮ ತಪೋಭೂಮಿ. ಇಲ್ಲಿ ಜ್ಞಾನಿಗಳು, ಸಂತರು ಇದ್ದರು ಮತ್ತು ಇದ್ದಾರೆ. ಇಂಥ ದಿವ್ಯ ಪರಂಪರೆಯ ದೇಶವಿದು. ಹೀಗಾಗಿ ಭಾರತೀಯ ತೆಯ ಪ್ರಸ್ತುತತೆ ಕುರಿತು ಯುವ ಜನರಿಗೆ ತಿಳಿಸುವ ಪ್ರಯತ್ನ ಈ ಉತ್ಸವ. ರಾಮಕೃಷ್ಣ ಪರಮಹಂಸರು, ಅರವಿಂದರು, ವಿವೇಕಾನಂದರು, ನಾರಾಯಣ ಗುರುಗಳು ಮೊದಲಾದ ದಿವ್ಯ ಪರಂಪರೆಯ ಸಂತರು ಇದ್ದರು. ರಾಷ್ಟ್ರ ನಿರ್ಮಾಣಕಾರರಾದ ತಿಲಕ್, ಗೋಖಲೆ, ವೀರ ಸಾವರ್ಕರ್, ಗಾಂಧೀಜಿ, ಅಂಬೇಡ್ಕರ್ ಇವರೆಲ್ಲರ ಶ್ರಮ ವ್ಯರ್ಥವಾಗಬಾರದು. ಮತ್ತೆ ಮತ್ತೆ ಅವರ ಆದರ್ಶಗಳನ್ನು ನೆನಪಿಸಿಕೊಳ್ಳುವಂತಾಗಬೇಕು. ಈ ಸದುದ್ದೇಶದಿಂದ ಈ ಉತ್ಸವ ಆಯೋಜಿಸಿದ್ದೇವೆ.



ಅಡ್ಡಂಡ ಸಿ.ಕಾರ್ಯಪ್ಪ


ಗಣೇಶ: 8ರಿಂದ ಉತ್ಸವ ಶುರುವಾಗಲಿದೆ. ಈ ಸಂಬಂಧ ಪ್ರಚಾರ ಕಾರ್ಯ ಹೇಗಿದೆ?

ಕಾರ್ಯಪ್ಪ: ಹೌದು. 8ರಂದು ಜಾನಪದ ಉತ್ಸವ ಉದ್ಘಾಟನೆ ಆಗಲಿದೆ. ಇದಕ್ಕೂ ಮೊದಲು 'ಮನೆ ಮನೆಗೆ ರಂಗಾಯಣ–ಮನ ಮನಕೆ ಬಹುರೂಪಿ' ಎಂದು ಮೈಸೂರಿನ ಪ್ರಥಮ ಪ್ರಜೆ ಅಂದರೆ ಮೇಯರ್ ಶಿವಕುಮಾರ್ ಅವರನ್ನು ಉತ್ಸವಕ್ಕೆ ಆಹ್ವಾನಿಸುವ ಮೂಲಕ ಮೈಸೂರಿನ ನಾಗರಿಕರನ್ನು ಕರೆದಿದ್ದೇವೆ. ಹೀಗೆಯೇ ಸಾಹಿತಿ ಪ್ರಧಾನ ಗುರುದತ್ತ, ಹೆಸರಾಂತ ನೃತ್ಯ ಕಲಾವಿದೆ ▶ 8ನೇ ಪುಟಕ್ಕೆ

60 ವರ್ಷ ಮೇಲ್ಪಟ್ಟವರಿಗೆ ಉಚಿತ ಕಣ್ಣಿನ ತಪಾಸಣೆ, ಕನ್ನಡಕ ನೀಡುವ ಯೋಜನೆ

ಜನವರಿಯಲ್ಲಿ ಜಾರಿ

ಕಿವಿಯ ಸಮಸ್ಯೆಗೂ ಶ್ರವಣ ಸಾಧನ ಅಳವಡಿಕೆಗೆ 500 ಕೋಟಿ ಯೋಜನೆ ಸಿದ್ಧ



ಬೆಂಗಳೂರು, ಡಿ.7(ಕೆಎಂಶಿ)–60 ವರ್ಷ ಮೇಲ್ಪಟ್ಟವರಿಗೆ ಕಣ್ಣಿನ ತಪಾಸಣೆ, ಚಿಕಿತ್ಸೆ, ಉಚಿತ ಕನ್ನಡಕ ನೀಡುವ ಯೋಜನೆ ಜನವರಿಯಲ್ಲಿ ಅನುಷ್ಠಾನಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದಾರೆ.

ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಿವಿಯ ಸಮಸ್ಯೆಗೆ ಕಾಕ್ಲಿಯರ್ ಇಂಪ್ಲಾಂಟ್ ಮಾಡಲು 500 ಕೋಟಿ ರೂ.ಗಳ ಯೋಜನೆ ರೂಪಿಸಿದ್ದೇವೆ. ನಮ್ಮ ಸರ್ಕಾರ ಅತ್ಯಂತ ಸೂಕ್ಷ್ಮ ವಿಚಾರಗಳ ಕಡೆಗೆ ಹೆಚ್ಚಿನ ಗಮನ ನೀಡಿದೆ. ಡಯಾಲಿಸಿಸ್ ಸೈಕಲ್ ಅನ್ನು 30 ಸಾವಿರದಿಂದ 60 ಸಾವಿರಕ್ಕೆ ಹೆಚ್ಚಿಸಲಾಗಿದೆ. ಕ್ಯಾನ್ಸರ್ ಚಿಕಿತ್ಸೆಗೆ 12 ಹೊಸ ಕೇಂದ್ರಗಳನ್ನು ತೆರೆದು, ಕೀಮೋಥೆರಪಿ ಸೈಕಲ್‌ಗಳನ್ನು ದುಪ್ಪಟ್ಟು ಮಾಡಲಾಗಿದೆ. ಸಾಮಾನ್ಯ ಆರೋಗ್ಯ ತಪಾಸಣೆಯನ್ನು ಪ್ರತಿ ತಾಲೂಕು ಹಾಗೂ ಜಿಲ್ಲೆಗಳಲ್ಲಿ ಕೈಗೊಳ್ಳಲು ಆದೇಶ ಹೊರಡಿಸಿದೆ. 100 ಪಿ.ಹೆಚ್.ಸಿ ಕೇಂದ್ರಗಳನ್ನು ಸಿ.ಹೆಚ್.ಸಿ ಕೇಂದ್ರಗಳಾಗಿ ತಲಾ 10 ಕೋಟಿ ರೂ.ಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗಿದೆ. ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿ ಹಾಗೂ ರೋಗಿಗಳಿಗೆ ಚಿಕಿತ್ಸೆ ನೀಡುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ ಎಂದರು.



ಜಗತ್ತಿನಲ್ಲಿ ಅತೀ ಹೆಚ್ಚು ಕಣ್ಣಿನ ರೋಗ, ಕುರುಡುತನ ಮಕ್ಕಳಿಗೆ ಬರುವುದು ಅಪೌಷ್ಟಿಕತೆಯಿಂದ. ಆದ್ದರಿಂದ ನಮ್ಮ ಸರ್ಕಾರ ಅಪೌಷ್ಟಿಕತೆ ನಿವಾರಣೆಗೆ ವಿಶೇಷ ಆಹಾರ ಹಾಗೂ ಔಷಧ ನೀಡುವ ಯೋಜನೆ ರೂಪಿಸಿದೆ. ಅಪೌಷ್ಟಿಕತೆಯಿಂದಾಗುವ ಕಣ್ಣಿನ ತೊಂದರೆ ನಿವಾರಣೆಗೆ ವಿಶೇಷ ಕಾರ್ಯಕ್ರಮ ಪ್ರಾರಂಭವಾಗಿದೆ. ಆರು ಜಿಲ್ಲೆಗಳಲ್ಲಿ ಅಪೌಷ್ಟಿಕತೆ ಹೆಚ್ಚಿರುವ ಅದರ ನಿವಾರಣೆಗೆ ವಿಶೇಷ ಯೋಜನೆ ರೂಪಿಸಲಾಗಿದೆ.

ಕೋವಿಡ್ ಅನ್ನು ಅತ್ಯಂತ ಯಶಸ್ವಿಯಾಗಿ ನಮ್ಮ ಸರ್ಕಾರ ನಿಭಾಯಿಸಿದೆ. ಸಿದ್ದಗಂಗಾ ಸ್ವಾಮೀಜಿಗಳು ಆಸ್ಪತ್ರೆಗೆ ಸ್ಥಳ ನೀಡಿ ಆಶೀರ್ವಾದ ಮಾಡಿದ್ದಾರೆ ಎಂದರು.

ಮಾನವ ದೇಹದಲ್ಲಿ ಹೃದಯದ ನಂತರ ಕಣ್ಣು ಪ್ರಮುಖವಾದುದು. ಕಣ್ಣಿನಿಂದ ಕೇವಲ ನೋಟವಷ್ಟೆ ಅಲ್ಲ, ಜ್ಞಾನವೂ ಪ್ರಾಪ್ತಿಯಾಗುತ್ತದೆ. ಕಣ್ಣಿಲ್ಲದಿದ್ದರೆ ಶಿಕ್ಷಣ, ಸಾಹಿತ್ಯ ಇರುತ್ತಿರಲಿಲ್ಲ. ಇವೆರಡೂ ಇರದಿದ್ದರೆ ಸುಸಂಸ್ಕೃತ ಸಮಾಜದ ನಿರ್ಮಾಣವೂ ಆಗುತ್ತಿರಲಿಲ್ಲ. ಕಣ್ಣಿನ ಚಟುವಟಿಕೆಗಳು ಬಹಳ ಸೂಕ್ಷ್ಮ. ವಯಸ್ಸಾದಂತೆ ಕಣ್ಣುಗಳಿಗೆ ಆಗುವ ತೊಂದರೆಯಿಂದ ಹಿಡಿದು ಹಲವಾರು ಸಂದರ್ಭಗಳಲ್ಲಿ ಕಣ್ಣಿಗೆ ಬರುವ ಆಪತ್ತುಗಳ ನಿವಾರಣೆ ಮಾಡುವ ತಂತ್ರಜ್ಞಾನ ಜಗತ್ತಿನಲ್ಲಿ ದೊಡ್ಡ ಮಟ್ಟದಲ್ಲಿ ಬೆಳೆದಿದೆ. ಹಿರಿಯ ನಾಗರಿಕರ ಕಣ್ಣಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರವೇ ಎಲ್ಲಾ ರೀತಿಯ ಪರೀಕ್ಷೆ ಮತ್ತು ಕನ್ನಡಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದರು. ಬಡವರಿಗೆ ಸುಲಭ ದರದಲ್ಲಿ ಚಿಕಿತ್ಸೆ ನೀಡುವ ಉದ್ದೇಶದಿಂದ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ▶ 8ನೇ ಪುಟಕ್ಕೆ



ವಿಜಯನಗರದ ಕೊಡವ ಸಮುದಾಯ ಭವನದಲ್ಲಿ ಮೈಸೂರು ಕೊಡವ ಸಮಾಜದ ವತಿಯಿಂದ ಕದಿರು ತೆಗೆದು ಹುತ್ತರಿ ಹಬ್ಬ ಆಚರಿಸಲಾಯಿತು. ಸಮಾಜದ ಅಧ್ಯಕ್ಷ ಮೇಚಂಡ ಶಶಿ ಪೊನ್ನಪ್ಪ, ಉಪಾಧ್ಯಕ್ಷ ಮಲಚಿರ ಪೊನ್ನಪ್ಪ, ಜಂಟಿ ಕಾರ್ಯದರ್ಶಿ ತಾರಾ ಪೊನ್ನಪ್ಪ, ಖಜಾಂಚಿ ಮಾಚಿಮಾಡ ನಾಣಯ್ಯ ಉಪಸ್ಥಿತರಿದ್ದರು. [ವರದಿ ಪುಟ–7]

ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಕಾರ್ಯತಂತ್ರ

ಜ.8, ಚಿತ್ರದುರ್ಗದಲ್ಲಿ ದಲಿತರ ಸಮಾವೇಶ

ಬೆಂಗಳೂರು, ಡಿ.7(ಕೆಎಂಶಿ)– ಮುಂಬರುವ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಪ್ರದೇಶ ಕಾಂಗ್ರೆಸ್ ದಲಿತ ಸಮಾವೇಶ ನಡೆಸಲು ಮುಂದಾಗಿದೆ.

ಜನವರಿ 8 ರಂದು ಚಿತ್ರದುರ್ಗದಲ್ಲಿ ದಲಿತರ ಬೃಹತ್ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಮಾವೇಶದ ಅಧ್ಯಕ್ಷತೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಹಿಸಿಕೊಳ್ಳಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೆಪಿಸಿಸಿ ಮಾಜಿ ಅಧ್ಯಕ್ಷ ಹಾಗೂ ಶಾಸಕ ಡಾ.ಜಿ.ಪರಮೇಶ್ವರ, ಕಾರ್ಯಕ್ರಮದಲ್ಲಿ ಖರ್ಗೆ ಅವರನ್ನು ಸನ್ಮಾನಿಸಲಾಗುವುದು. ರಾಹುಲ್ ಗಾಂಧಿ, ಪ್ರಿಯಾಂಕಾಗಾಂಧಿ ಇಲ್ಲವೇ ಸೋನಿಯಾ ಗಾಂಧಿ ಪೈಕಿ ಯಾರಾದರೊಬ್ಬರು ಭಾಗವಹಿಸುವ ನಿರೀಕ್ಷೆಯಿದೆ. ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್, ಎಂ.ಬಿ. ಪಾಟೀಲ ಭಾಗವಹಿಸಲಿದ್ದಾರೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ ನಾವೆಲ್ಲರೂ ಒಗ್ಗಟ್ಟಾಗಿ ಇದ್ದೇವೆ ಎಂದರು.

ಇಂದು ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಯ ಫಲಿತಾಂಶ

ಸಿಮ್ಲಾ, ಡಿ.7–ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಯ ಮತ ಎಣಿಕೆ ಕಾರ್ಯ ನಾಳೆ (ಡಿ.8) ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದ್ದು, ಮಧ್ಯಾಹ್ನದೊಳಗೆ ಫಲಿತಾಂಶ ಹೊರಬೀಳುವ ಸಾಧ್ಯತೆಯಿದೆ. ಮತ ಎಣಿಕೆಗಾಗಿ 10 ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಹಿಮಾಚಲ ಪ್ರದೇಶದಲ್ಲಿ ಒಟ್ಟು 68 ಸ್ಥಾನಗಳಿದ್ದು, ಆಡಳಿತದ ಚುಕ್ಕಾಣಿ ಹಿಡಿಯಲು 35 ಸ್ಥಾನಗಳ ಅವಶ್ಯಕತೆ ಇದೆ. 2018ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 44 ಸ್ಥಾನಗಳನ್ನು ಪಡೆದು, ಅಧಿಕಾರದ ಚುಕ್ಕಾಣಿ ಹಿಡಿದಿದ್ದರೆ, ▶ 8ನೇ ಪುಟಕ್ಕೆ

ಹುಣಸೂರಲ್ಲಿ ವಿಜೃಂಭಣೆಯ ಹನುಮೋತ್ಸವ

ಹನುಮನ ಪೋಸ್ಟರ್ ಹಾಕಿ ಶುಭ ಕೋರುವುದರ ಜೊತೆಗೆ ಮೆರವಣಿಗೆಯಲ್ಲಿ ಪಾಲ್ಗೊಂಡವರಿಗೆ ಫಲಾಹಾರ, ಮಜ್ಜಿಗೆ ನೀಡಿ ಉಪಚರಿಸಿದ ಮುಸ್ಲಿಂ ಬಾಂಧವರು



ಹುಣಸೂರು, ಡಿ. 7–ಹುಣಸೂರು ನಗರದಲ್ಲಿ ಬುಧವಾರ ಹನುಮೋತ್ಸವ ವಿಜೃಂಭಣೆಯಿಂದ ಅದ್ಧೂರಿಯಾಗಿ ಜರುಗಿತು. ನಾನಾ ಕಾರಣಗಳಿಂದ ಕೆಲ ವರ್ಷ ಸರಳವಾಗಿ ನಡೆದಿದ್ದ ಹನುಮೋತ್ಸವ ಇಂದು ಪಕ್ಷಾತೀತ ಹಾಗೂ ಧರ್ಮಾತೀತವಾಗಿ ಸೌಹಾರ್ದಯುತವಾಗಿ ಶಾಂತಿಯಿಂದ ನಡೆಯಿತು.

ಬೆಳಗ್ಗೆ 11 ಗಂಟೆಗೆ ಆರಂಭವಾದ ಹನುಮೋತ್ಸವದ ಶೋಭಾಯಾತ್ರೆ ಸಂಜೆ 6.30ರವರೆಗೂ ಯಾವುದೇ ರೀತಿಯ ಒಂದು ಸಣ್ಣ ಅಹಿತಕರ ಘಟನೆಗೆ ಎಡೆಯಾಗದಂತೆ ಶ್ರದ್ಧಾಭಕ್ತಿಯಿಂದ ನೆರವೇರಿತು. ಹುಣಸೂರಿನ ರಂಗನಾಥ ಬಡಾವಣೆಯಲ್ಲಿ ಹನುಮ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕ ಹೆಚ್.ಪಿ. ಮಂಜುನಾಥ್, ಗಾವಡಗೆರೆ ಗುರುಲಿಂಗದೇವರ ಮಠದ ನಟರಾಜ ಸ್ವಾಮೀಜಿ, ನಗರಸಭೆ ಆಯುಕ್ತೆ ಮಾನಸ ಸೇರಿದಂತೆ ಅನೇಕ ಗಣ್ಯರು ಚಾಲನೆ ನೀಡಿದರು. ಮೆರವಣಿಗೆಯು ರಂಗನಾಥ ಬಡಾವಣೆಯಿಂದ ಕಲ್ಕುಣಿಕೆ, ಹಳೇ ಸೇತುವೆ, ಸಂವಿಧಾನ ವೃತ್ತ, ಕೋಟೆ ಸರ್ಕಲ್, ಜೆಎಲ್‌ಬಿ ರಸ್ತೆ, ಲಕ್ಷ್ಮೀ ವಿಲಾಸ ವೃತ್ತ, ಬಜಾರ್ ರಸ್ತೆ, ಅಕ್ಷಯ ಭಂಡಾರ್ ವೃತ್ತ ಹೊಸ ಬಸ್ ನಿಲ್ದಾಣ, ಕಲ್ಪತರು ವೃತ್ತದ ಮಾರ್ಗವಾಗಿ ಸಂಜೆ 6.30ರ ಸುಮಾರಿಗೆ ಮಂಜುನಾಥಸ್ವಾಮಿ ದೇವಸ್ಥಾನ ತಲುಪಿತು. ಮೆರವಣಿಗೆಯುದ್ದಕ್ಕೂ ಹನುಮ ಭಕ್ತರು ಹನುಮಂತನಿಗೆ ಪೂಜೆ ಸಲ್ಲಿಸಿದರು. 'ಜೈ ಹನುಮಾ' ಘೋಷಣೆ ಮುಗಿಲು ಮುಟ್ಟಿತು. ಜಾನಪದ ತಂಡಗಳು, ಚಂಡೆ ಮೇಳ, ನಗಾರಿ, ಡೊಳ್ಳು ಕುಣಿತ ಹಾಗೂ ಬಿಳಿಗಿರಿರಂಗನಬೆಟ್ಟದಿಂದ ಆಗಮಿಸಿದ್ದ ಕಾಡು ಕುರುಬರ ಜನಪದ ನೃತ್ಯ ಮೆರವಣಿಗೆಗೆ ಮೆರಗು ನೀಡಿತು.

▶ ಪೂರ್ಣ ಸಚಿತ್ರ ವರದಿ ಪುಟ–9

ಮದರ್‌ಹುಡ್ ಆಸ್ಪತ್ರೆಯಲ್ಲಿ ಪ್ರಿಮೆಚುರ್ ಬೇಬಿಗೆ ಯಶಸ್ವಿ ಚಿಕಿತ್ಸೆ



ಮೈಸೂರು, ಡಿ. 7– ಗರ್ಭಧಾರಣೆಯ 28 ವಾರಗಳಲ್ಲಿ ಹೆರಿಗೆಯಾದ ಪ್ರಿಮೆಚುರ್ ಬೇಬಿಗೆ ಯಾದವಗಿರಿಯಲ್ಲಿರುವ ಮದರ್‌ಹುಡ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಯಶಸ್ವಿ ಚಿಕಿತ್ಸೆ ನೀಡಲಾಯಿತು. ನಗರದಲ್ಲಿ ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವ್ಯವಸ್ಥಾಪಕರು ಮಾತನಾಡಿ, ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ದಂಪತಿಗೆ ಖಾಸಗಿ ಆಸ್ಪತ್ರೆಯಲ್ಲಿ ಮಗು ಜನಿಸಿದ್ದು, ಅಲ್ಲಿ ಮಗುವನ್ನು ರಕ್ಷಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಸಾರಿಗೆ ತಂಡದಿಂದ ನಮ್ಮ ಆಸ್ಪತ್ರೆಗೆ ಕರೆತರಲಾಯಿತು.

ಗರ್ಭಧಾರಣೆಯ 28 ವಾರಗಳಲ್ಲಿ ಹೆರಿಗೆಯಾದ ಪ್ರಿಮೆಚುರ್ ಶಿಶುವನ್ನು ನಮ್ಮ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ ದಾಖಲಿಸಿಕೊಂಡು ಯಶಸ್ವಿಯಾಗಿ ಚಿಕಿತ್ಸೆ ನೀಡಲಾಯಿತು. ಯಶಸ್ವಿ ಚಿಕಿತ್ಸೆ ನಂತರ ಮಗುವನ್ನು ನಾಲ್ಕು ವಾರಗಳ ತನಕ ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ ವೀಕ್ಷಣೆಯಲ್ಲಿಟ್ಟು, ಬಳಿಕ ಯಾವುದೇ ತೊಂದರೆಗಳಿಲ್ಲದೆ ಇರುವುದನ್ನು ಖಚಿತಪಡಿಸಿಕೊಂಡು, ಡಿಸ್‌ಚಾರ್ಜ್ ಮಾಡಲಾಯಿತು.

ಆಸ್ಪತ್ರೆಯಲ್ಲಿ ಮಗುವಿನ ವಾಸ್ತವ್ಯದ ವೇಳೆ ಮಗುವಿನ ಸುರಕ್ಷತೆ ಖಾತರಿಪಡಿಸಿಕೊಳ್ಳುವ ಸಲುವಾಗಿ ಆಸ್ಪತ್ರೆಯ ತಜ್ಞರು ಅಗತ್ಯವಿರುವ ಎಲ್ಲಾ ಚಿಕಿತ್ಸೆಯನ್ನು ಕಲ್ಪಿಸಿದರು ಎಂದರು. ಗೋಷ್ಠಿಯಲ್ಲಿ ಮದರ್‌ಹುಡ್ ಆಸ್ಪತ್ರೆಯ ನವಜಾತಶಾಸ್ತ್ರಜ್ಞರು ಮತ್ತು ಶಿಶುತಜ್ಞ ವೈದ್ಯರಾದ ಡಾ.ಸುಹೇಮ್ ಅಫ್ಸರ್, ಡಾ.ಬಿ.ಚೇತನ್, ಆಸ್ಪತ್ರೆಯ ಫೆಸಿಲಿಟಿ ಡೈರೆಕ್ಟರ್ ಬಿ.ಜೆ.ಸಂದೀಪ್ ಪಟೇಲ್, ಮಗುವಿನ ಪೋಷಕರಾದ ಸುಲ್ತಾನಾ ಬಾನು, ಸರ್ದಾರ್‌ಖಾನ್ ಇದ್ದರು.

ಹಣ ದುಪ್ಪಟ್ಟು ಮಾಡಿಕೊಡುವ ಆಮಿಷ ತೋರಿ ಮಾಜಿ ಯೋಧನ ಪತ್ನಿಯಿಂದ 3 ಲಕ್ಷ ರೂ. ಸುಲಿಗೆ

ಮೈಸೂರು, ಡಿ. 7– ಕ್ರಿಪ್ಟೋ ಟ್ರೇಡರ್ಸ್‌ನಲ್ಲಿ ಹೂಡಿಕೆ ಮಾಡಿದರೆ ಹಣ ದುಪ್ಪಟ್ಟಾಗುತ್ತದೆ ಎಂದು ನಂಬಿಸಿ ಮಾಜಿ ಯೋಧನ ಪತ್ನಿಯ ಖಾತೆಯಿಂದ ಮೂರು ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಕ್ರಿಪ್ಟೋ ಟ್ರೇಡರ್ಸ್ ವಿರುದ್ಧ ಪ್ರಕರಣ ದಾಖಲು

ಮೈಸೂರು ತಾಲೂಕು ಹಂಚ್ಯಾ ಗ್ರಾಮದ ಮಾಜಿ ಸೈನಿಕ ದಿವಂಗತ ಮಹದೇವಪ್ಪ ಎಂಬುವರ ಪತ್ನಿ ಶ್ರೀಮತಿ ಲತಾ(37) ಹಣ ಕಳೆದುಕೊಂಡವರಾಗಿದ್ದು, ಕಳೆದ 3 ತಿಂಗಳ ಹಿಂದೆ ಅವರ ಪತಿ ಮಹದೇವಪ್ಪ ಅನಾರೋಗ್ಯದಿಂದ ನಿಧನ ಹೊಂದಿದ್ದರು. ಅವರ ವಿಮೆ ಹಣ 5 ಲಕ್ಷ ರೂ. ಬ್ಯಾಂಕ್ ಖಾತೆಗೆ ಜಮೆ ಆಗಿತ್ತು.

ಲತಾ ಅವರ ಪುತ್ರ ನವೀನ್‌ಕುಮಾರ್ ಇನ್‌ಸ್ಟಾಗ್ರಾಂ ಖಾತೆ ಹೊಂದಿದ್ದು, ಅದರಲ್ಲಿ ರಿಚ್‌ನೆಸ್ ಕ್ರಿಪ್ಟೋ ಟ್ರೇಡರ್ ಎಂಬ ಪ್ರೊಫೈಲ್‌ನಲ್ಲಿ ಹಣ ಹೂಡಿಕೆ ಬಗ್ಗೆ ಕಂಡು ಬಂದಿದೆ. ಅದನ್ನು ಗಮನಿಸಿದ ನವೀನ್‌ಕುಮಾರ್ ಸದರಿ ಇನ್‌ಸ್ಟಾಗ್ರಾಂ ಖಾತೆಯಲ್ಲಿನ ಜೆಸ್ಸಿಕಾ ಮರಿಯಾ ಎಂಬಾಕೆಯೊಂದಿಗೆ ಅ.18ರಂದು ಚಾಟ್ ಮಾಡಿದಾಗ ಆಕೆ ಕ್ರಿಪ್ಟೋ ಟ್ರೇಡರ್ಸ್‌ನಲ್ಲಿ 10 ಸಾವಿರ ರೂ. ಹೂಡಿಕೆ ಮಾಡಿದರೆ 1.30 ಲಕ್ಷ ಬರುತ್ತದೆ ಎಂದು ನಂಬಿಕೆ ಹುಟ್ಟಿಸಿದ್ದಾಳೆ. ಇದನ್ನು ನಂಬಿದ ನವೀನ್‌ಕುಮಾರ್, ಅವರ ತಂದೆ ದಿವಂಗತ ಮಹದೇವಪ್ಪ ಅವರ ಖಾತೆಗೆ ಲಿಂಕ್ ಆಗಿದ್ದ ಫೋನ್ ಪೇ ನಂಬರ್‌ನಿಂದ 3,00,890 ರೂ.ಗಳನ್ನು ಹಂತ ಹಂತವಾಗಿ ವರ್ಗಾವಣೆ ಮಾಡಿದ್ದಾನೆ.

ನವೀನ್‌ಕುಮಾರ್ ತನ್ನ ತಾಯಿಗೂ ತಿಳಿಯದೇ ಹಣ ವರ್ಗಾವಣೆ ಮಾಡಿದ್ದು, ಅ.29ರಂದು ಬೆಳಗ್ಗೆ ಮೊಬೈಲ್‌ನಲ್ಲಿ ಮೆಸೇಜ್ ಗಮನಿಸಿದಾಗ ಹಿಂದಿನ ದಿನ 40 ಸಾವಿರ ರೂ. ಕಡಿತಗೊಂಡಿರುವುದು ಕಂಡುಬಂದಿದೆ. ತಕ್ಷಣವೇ ಅವರು ಬ್ಯಾಂಕ್‌ಗೆ ತೆರಳಿ ಉಳಿದ ಹಣವನ್ನು ಡ್ರಾ ಮಾಡಿಕೊಂಡಿದ್ದಲ್ಲದೇ, ಮಗನನ್ನು ವಿಚಾರಿಸಲಾಗಿ, ಆತ ಕ್ರಿಪ್ಟೋ ಟ್ರೇಡರ್ಸ್‌ನಲ್ಲಿ ಹಣ ಹೂಡಿಕೆ ಮಾಡಿರುವ ವಿಚಾರ ತಿಳಿದುಬಂದಿದೆ. ಅಂದಿನಿಂದಲೂ ಜೆಸ್ಸಿಕಾ ಮರಿಯಾ ಅವರನ್ನು ಹಣ ಹಿಂತಿರುಗಿಸುವಂತೆ ಕೇಳುತ್ತಿದ್ದರೂ ಕೂಡ ಆಕೆ ಹಣವನ್ನು ವಾಪಸ್ ವರ್ಗಾವಣೆ ಮಾಡದೇ ವಂಚಿಸಿದ್ದಾಳೆ ಎಂದು ಲತಾ ಅವರು ಮೇ 5ರಂದು ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಮೈಸೂರು ತಾಲೂಕಿನ ಹೊಸಹುಂಡಿ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಎಂ.ನಾಗರಾಜು, ರಘು, ಸಿ.ಸಂಜೀವ್ ಕುಮಾರ್, ಎನ್.ರವಿಕುಮಾರ್, ಎನ್.ರಮೇಶ್, ಮಂಚಯ್ಯ, ಕೆ.ತಿಮ್ಮೇಗೌಡ, ವಿಜಯ, ಪ್ರಮೀಳ, ಸಿ.ಮಂಜುನಾಥ ಹಾಗೂ ಅವಿರೋಧವಾಗಿ ಆಯ್ಕೆಯಾದ ಬಿ.ಬಸಪ್ಪ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಚುನಾವಣಾಧಿಕಾರಿ ಬಿ.ರಾಜು, ಸಂಘದ ಕಾರ್ಯದರ್ಶಿ ಸಂತೋಷ್, ಹೊಸಹುಂಡಿ ಗ್ರಾಮಸ್ಥರು ಇದ್ದರು.

ಮೈಸೂರು ಮೆಡಿಕಲ್ ಕಾಲೇಜು ಸಿಎಓ ಕೆ.ಆರ್.ರಕ್ಷಿತ್ ಅಧಿಕಾರ ಸ್ವೀಕಾರ



ಮೈಸೂರು, ಡಿ.7 (ಆರ್‌ಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC & RI) ಮುಖ್ಯ ಆಡಳಿತಾಧಿಕಾರಿಯಾಗಿ ಕೆಎಎಸ್ ಅಧಿಕಾರಿ ಕೆ.ಆರ್.ರಕ್ಷಿತ್ ಅಧಿಕಾರ ವಹಿಸಿಕೊಂಡಿದ್ದಾರೆ.

ಪ್ರಭಾರ ಮುಖ್ಯ ಆಡಳಿತಾಧಿಕಾರಿ, ಮುಡಾ ಕಾರ್ಯದರ್ಶಿ ವೆಂಕಟರಾಜು ಅವರು ರಕ್ಷಿತ್ ಅವರಿಗೆ ಅಧಿಕಾರ ಹಸ್ತಾಂತರಿಸಿ, ಶುಭ ಕೋರಿದರು.

ಬ್ಯಾಂಕಿನಲ್ಲೇ ನಿವೃತ್ತ ರೈಲ್ವೆ ಅಧಿಕಾರಿ ಹೃದಯಾಘಾತದಿಂದ ಸಾವು

ಮೈಸೂರು, ಡಿ.7– ಬ್ಯಾಂಕಿನಲ್ಲಿ ಪೆನ್ಷನ್ ತರಲು ಹೋಗಿದ್ದ ನಿವೃತ್ತ ರೈಲ್ವೆ ಅಧಿಕಾರಿಯೊಬ್ಬರು ತೀವ್ರ ಹೃದಯಾಘಾತದಿಂದ ಅಲ್ಲೇ ಕುಸಿದು ಸಾವನ್ನಪ್ಪಿರುವ ಘಟನೆ ಬುಧವಾರ ಬೆಳಗ್ಗೆ ಮೈಸೂರಿನ ಜಯನಗರದಲ್ಲಿ ಸಂಭವಿಸಿದೆ.



ಮೈಸೂರಿನ ಕುವೆಂಪುನಗರದ ಐಶ್ವರ್ಯ ಲೇಔಟ್ ನಿವಾಸಿ, ವಾಲ್ಮೀಕಿ ಸಮಾಜದ ಟ್ರಸ್ಟಿ ಮತ್ತು ನೈರುತ್ಯ ರೈಲ್ವೆಯ ನಿವೃತ್ತ ಸೂಪರಿಂಟೆಂಡೆಂಟ್ ಬಿ.ಜಿ.ರಾಮದಾಸ್ ನಾಯಕ್ (90) ಸಾವನ್ನಪ್ಪಿದವರು. ಪ್ರತಿ ತಿಂಗಳಿನಂತೆ ಇಂದು ಬೆಳಗ್ಗೆ ಜಯನಗರದ ಎಸ್‌ಬಿಐ ಶಾಖೆಗೆ ಪೆನ್ಷನ್ ಡ್ರಾ ಮಾಡಲು ರಾಮದಾಸ್ ನಾಯಕ್ ಅವರು ತೆರಳಿದ್ದ ವೇಳೆ ಏಕಾಏಕಿ ಎದೆ ನೋವು ಕಾಣಿಸಿಕೊಂಡು ಕುಸಿದು ಬಿದ್ದರು. ತಕ್ಷಣ ಬ್ಯಾಂಕಿನ ಮ್ಯಾನೇಜರ್ ತಮ್ಮ ಕಾರಿನಲ್ಲೇ ಸಮೀಪದ ಅಪೋಲೋ ಆಸ್ಪತ್ರೆಗೆ ಕರೆದೊಯ್ದರಾದರೂ, ಅಷ್ಟರಲ್ಲಿ ಅವರು ಸಾವನ್ನಪ್ಪಿದರೆನ್ನಲಾಗಿದೆ. ದಿವಂಗತರು ಪತ್ನಿ ಕೆಂಪಮ್ಮ, ರೈಲ್ವೆ ಇಲಾಖೆ ಸೀನಿಯರ್ ಸೆಕ್ಷನ್ ಇಂಜಿನಿಯರ್ ಮತ್ತು ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರೂ ಆದ ಎಂ.ಆರ್.ಚಂದ್ರಶೇಖರ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಮತ್ತು ಅಪಾರ ಬಂಧುವರ್ಗ ಅಗಲಿದ್ದಾರೆ. ನಾಳೆ (ಗುರುವಾರ) ಬೆಳಗ್ಗೆ 10.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಕೃತಿಚೌರ್ಯ ತಡೆಗಟ್ಟುವಿಕೆ: ಗುಣಾತ್ಮಕ ಮಹಾಪ್ರಬಂಧದ ರಚನೆಯತ್ತ ಮೊದಲ ಹೆಜ್ಜೆ' ಸಂಶೋಧಕರಿಗೆ ಕಾರ್ಯಾಗಾರ

ಬೋಧನೆಗೆ ನೀಡಿದಷ್ಟೇ ಆಸಕ್ತಿ ಸಂಶೋಧನೆಗೂ ನೀಡಿ

ಎರಡನ್ನೂ ಜೊತೆಯಲ್ಲೇ ಕೊಂಡೊಯ್ಯಲು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ ಸಲಹೆ

ಮೈಸೂರು,ಡಿ.7(ಆರ್‌ಕೆಬಿ)– ಬೋಧನೆಗೆ ನೀಡಿದಷ್ಟೇ ಆಸಕ್ತಿಯನ್ನು ಸಂಶೋಧನೆಗೂ ನೀಡಬೇಕು. ಅವೆರಡನ್ನೂ ಜೊತೆ ಜೊತೆಗೆ ಕೊಂಡೊಯ್ಯಬೇಕು ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿ ಎಎಂಆರ್‌ಸಿ ಸಭಾಂಗಣದಲ್ಲಿ ಸಿಎಸ್‌ಐಆರ್–ಯುಜಿಸಿ ತರಬೇತಿ ಕೇಂದ್ರ, ಆಂತರಿಕ ಗುಣಮಟ್ಟ ಖಾತರಿ ಘಟಕ(ಐಕ್ಯುಎಸಿ) ಹಾಗೂ ಮೈಸೂರು ವಿವಿ ಸಂಶೋಧಕರ ಸಂಘವು 'ಕೃತಿಚೌರ್ಯ ತಡೆಗಟ್ಟುವಿಕೆ: ಗುಣಾತ್ಮಕ ಮಹಾಪ್ರಬಂಧದ ರಚನೆಯತ್ತ ಮೊದಲ ಹೆಜ್ಜೆ' ಕುರಿತು ಸಂಶೋಧಕರಿಗಾಗಿ ಆಯೋಜಿಸಿದ್ದ ಉಚಿತ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಮೈಸೂರು ವಿವಿಯಲ್ಲಿ ಸಂಶೋಧನೆಗಳು ಹೆಚ್ಚು ನಡೆದಿದ್ದರಿಂದಲೇ ನ್ಯಾಕ್ ಮಾನ್ಯತೆ ದೊರೆಯಲು ಸಾಧ್ಯವಾಯಿತು. ಇತರೆ ವಿಶ್ವವಿದ್ಯಾನಿಲಯಗಳಿಗೆ ಹೋಲಿಸಿದರೆ ಮೈಸೂರು ವಿವಿಯಲ್ಲಿ ಸಂಶೋಧನೆ ಹೆಚ್ಚಾಗಿದೆ. ಇನ್ನೂ ಹೆಚ್ಚು ಪ್ರೋತ್ಸಾಹಿಸಬೇಕು. ಯುವ ಜನರ ಸಂಶೋಧನೆಗೆ ಹೆಚ್ಚು ಒಳಪಡಿಸಿಕೊಂಡು, ನಮ್ಮಲ್ಲಿರುವ ಪ್ರತಿಭೆ ಮತ್ತು ಬುದ್ಧಿಮತ್ತೆಯನ್ನು ಬಳಸಿಕೊಂಡು ಸರ್ಕಾರ ಮತ್ತು ವಿವಿಯಿಂದ ಹೆಚ್ಚು ಪ್ರೋತ್ಸಾಹ ಸಿಕ್ಕಿದರೆ ಸಂಶೋಧನೆಗಳು ಹೆಚ್ಚಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಂಶೋಧಕರು ತಮ್ಮ ಸಂಶೋಧನೆಯನ್ನು ಪ್ರಕಟಿಸಬೇಕು. ಆಗಲೇ ಗುರುತಿಸಲ್ಪಡಲು ಸಾಧ್ಯ. ಆದರೆ ಅದಕ್ಕೆ ಸಂಶೋಧಕರು ಹಿಂದೇಟು ಹಾಕಿದರೆ, ಅದು ಕೃತಿಚೌರ್ಯ ಎನ್ನಿಸುತ್ತದೆ. ಹಾಗಾಗಿ ಆನ್‌ಲೈನ್‌ನಲ್ಲಿ ಹಾಕಿದರೆ ಅದು ಕೃತಿಚೌರ್ಯ ಎಂದು ಹೇಳಲು ಸಾಧ್ಯವಾಗದು. ಹೊಸ ಹೊಸ ವಿಚಾರಗಳ ಬಗ್ಗೆ ಸಂಶೋಧನೆ ಮಾಡಿದರೆ ನಿಮಗೂ ಸಮಾಜದಲ್ಲಿ ಗೌರವ ಸಿಗುತ್ತದೆ ಎಂದು ಸಂಶೋಧಕರಿಗೆ ಸಲಹೆ ನೀಡಿದರು.

ಮೊದಲ ಗೋಷ್ಠಿಯಲ್ಲಿ 'ಪರಿಣಾಮಕಾರಿ ಸಂಶೋಧನಾ ಲೇಖನ ರಚನೆ; ನೆನಪಿನಲ್ಲಿಡಬೇಕಾದ ಅಂಶಗಳು' ಕುರಿತು ವಿಶ್ರಾಂತ ಸಮಾಜಶಾಸ್ತ್ರ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ, ಎರಡನೇ ಗೋಷ್ಠಿಯಲ್ಲಿ 'ಪಿಹೆಚ್.ಡಿ ಮಹಾಪ್ರಬಂಧದಲ್ಲಿ ವಿಶ್ವಾಸಾರ್ಹತೆ ಹಾಗೂ ಗುಣಾತ್ಮಕತೆಯನ್ನು ಸಾಧಿಸುವುದು ಹೇಗೆ?' ವಿಷಯದ ಬಗ್ಗೆ ವಿಶ್ರಾಂತ ಸಮಾಜ ಕಾರ್ಯ ಪ್ರಾಧ್ಯಾಪಕ ಪ್ರೊ.ಟಿ.ಬಿ.ಬಿ.ಬಿ. ಎಸ್.ವಿ.ರಮಣಯ್ಯ, 'ಸಂಶೋಧನೆಯಲ್ಲಿ ನೈತಿಕತೆ ಮತ್ತು ಕೃತಿಚೌರ್ಯ ತಡೆಗಟ್ಟುವಿಕೆ' ಕುರಿತು ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ.ಸಿ.ಪಿ.ರಾಮಶೇಷ್ ವಿಚಾರ ಮಂಡಿಸಿದರು.

ಮೈಸೂರು ವಿವಿ ಕುಲಪತಿ ಪ್ರೊ.ಹೆಚ್. ರಾಜಶೇಖರ್ ಅಧ್ಯಕ್ಷತೆ ವಹಿಸಿದ್ದರು. ಐಎಸ್‌ಎಸ್‌ಎ ಹಿರಿಯ ವಿಜ್ಞಾನಿ ಹಾಗೂ ದೆಹಲಿ ವಿವಿ ಸಸ್ಯಶಾಸ್ತ್ರ ವಿಭಾಗದ ಮಾಜಿ ಅಧ್ಯಕ್ಷ ಪ್ರೊ.ಕೆ.ಆರ್.ಶಿವಣ್ಣ, ಕಲಾ ನಿಕಾಯದ ಡೀನ್ ಪ್ರೊ.ಮುಜಾಫರ್ ಹೆಚ್. ಅಸಾದಿ, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನ್ ಪ್ರೊ.ಹೆಚ್.ಟಿ.ಬಸವರಾಜಪ್ಪ, ಕಾನೂನು ನಿಕಾಯ ಡೀನ್ ಪ್ರೊ.ಟಿ.ಆರ್. ಮಾರುತಿ, ಶಿಕ್ಷಣ ನಿಕಾಯದ ಡೀನ್ ಪ್ರೊ. ಎಸ್.ಮದಿಅಳಗನ್, ಮೈಸೂರು ವಿವಿ ಐಕ್ಯುಎಸಿ ನಿರ್ದೇಶಕ ಪ್ರೊ.ಕೆ.ಎನ್. ಅಮೃತೇಶ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಎಎಂಆರ್‌ಸಿ ಸಭಾಂಗಣದಲ್ಲಿ ಸಿಎಸ್‌ಐಆರ್–ಯುಜಿಸಿ ತರಬೇತಿ ಕೇಂದ್ರ, ಆಂತರಿಕ ಗುಣಮಟ್ಟ ಖಾತರಿ ಘಟಕ(ಐಕ್ಯುಎಸಿ) ಹಾಗೂ ವಿವಿ ಸಂಶೋಧಕರ ಸಂಘವು 'ಕೃತಿಚೌರ್ಯ ತಡೆಗಟ್ಟುವಿಕೆ: ಗುಣಾತ್ಮಕ ಮಹಾಪ್ರಬಂಧದ ರಚನೆಯತ್ತ ಮೊದಲ ಹೆಜ್ಜೆ' ಕುರಿತು ಸಂಶೋಧಕರಿಗಾಗಿ ಆಯೋಜಿಸಿದ್ದ ಉಚಿತ ಕಾರ್ಯಾಗಾರಕ್ಕೆ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಚಾಲನೆ ನೀಡಿದರು.

> 25 ವರ್ಷದಿಂದ ಯಾವುದೇ ಸಂಶೋಧನಾ ಚಟುವಟಿಕೆಯಲ್ಲಿ ಇಲ್ಲದಿದ್ದ ಚೈನಾ ಇಂದು ಸಂಶೋಧನೆಯಲ್ಲಿ ಬಹಳಷ್ಟು ಬೆಳವಣಿಗೆ ಕಂಡಿದೆ. ನಮ್ಮ ಬುದ್ಧಿಮತ್ತೆ ಚೈನಾಗಿಂತಲೂ ಉತ್ತಮವಾಗಿದೆ. ನಮ್ಮಲ್ಲಿರುವ ಸಾಮರ್ಥ್ಯ ಬಳಸಿಕೊಳ್ಳಬೇಕು. ಶಿಕ್ಷಕರು ಯುವಕರಿಗೆ ಪ್ರೋತ್ಸಾಹ ನೀಡಬೇಕು. **–ಪ್ರೊ.ಕೆ.ಎಸ್.ರಂಗಪ್ಪ**

ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ ಸ್ಕೂಟರ್ ಕಳವು

ಮೈಸೂರು,ಡಿ.7–ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ ಸ್ಕೂಟರ್ ಕಳವು ಮಾಡಿರುವ ಪ್ರಕರಣ ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ನಡೆದಿದೆ. ಹೆಬ್ಬಾಳ್‌ನಲ್ಲಿರುವ ವಾಸ್ಸಾಲ್ ಪ್ಯಾಕಿಂಗ್ ಕಂಪನಿಯಲ್ಲಿ ಅಕೌಂಟೆಂಟ್ ಆಗಿರುವ ಶ್ರೀಮತಿ ತೇಜಸ್ವಿನಿ (32) ಅವರು ಮಹದೇಶ್ವರ ಬಡಾವಣೆಯಲ್ಲಿ ವಾಸವಿದ್ದು, ಡಿಸೆಂಬರ್ 4ರಂದು ಮಧ್ಯಾಹ್ನ 2.15ರಲ್ಲಿ ಶಾಪಿಂಗ್ ಮಾಡಲು ಕಾಳಿದಾಸ ರಸ್ತೆಗೆ ಹೋಗಿ ತಮ್ಮ ಹೋಂಡಾ ಆಕ್ಟೀವಾ (ಕೆಎ 09–ಇವೈ 3376)ವನ್ನು ಅಲ್ಲಿನ ಕರ್ನಾಟಕ ಬ್ಯಾಂಕ್ ಹತ್ತಿರ ನಿಲ್ಲಿಸಿ ಶಾಪಿಂಗ್ ಮುಗಿಸಿಕೊಂಡು ಸಂಜೆ 4 ಗಂಟೆಗೆ ಹಿಂತಿರುಗುವಷ್ಟರಲ್ಲಿ ಅವರ ಸ್ಕೂಟರ್ ಅನ್ನು ಕಳವು ಮಾಡಲಾಗಿದೆ. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರ್ಜಿ ಆಹ್ವಾನ

ಮೈಸೂರು: ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಂಸ್ಥೆ ವತಿಯಿಂದ ಮೂಲಭೂತ ಸೌಕರ್ಯ ಮತ್ತು ಸ್ವ-ಸಾಮರ್ಥ್ಯ ಹೊಂದಿರುವ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. sirdmysuru.kamataka.gov.in ನಲ್ಲಿ ಅರ್ಜಿ ಪಡೆದು ಡಿ.20ರೊಳಗಾಗಿ ನಿರ್ದೇಶಕರು, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಇವರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಗೃಹಿಣಿಯ ಮಾಂಗಲ್ಯ ಸರ ಕಳವು

ಮೈಸೂರು,ಡಿ.7–ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಹೋದ ಘಟನೆ ಮೈಸೂರಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ ನಡೆದಿದೆ. ಕುವೆಂಪುನಗರ ಅನಿಕೇತನ ನಿವಾಸಿ ಛಾಯಾ(38) ಎಂಬುವರು ಸರ ಕಳೆದುಕೊಂಡವರಾಗಿದ್ದು, ಇವರು ಡಿಸೆಂಬರ್ 5ರಂದು ರಾತ್ರಿ 9.20ರ ಸುಮಾರಿನಲ್ಲಿ ಟಿವಿಎಸ್ ವಿಗೋ ಸ್ಕೂಟರ್‌ನಲ್ಲಿ (ಕೆಎ 09–ಇವಿ 5439) ವಿಜಯ ಬ್ಯಾಂಕ್ ಸರ್ಕಲ್ ಮತ್ತು ಕವಿತಾ ಬೇಕರಿ ನಡುವೆ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ ತೆರಳುತ್ತಿದ್ದಾಗ, ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಅವರ ಕತ್ತಿನಲ್ಲಿದ್ದ 40 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಆಲನಹಳ್ಳಿ ಗ್ರಾಪಂ ವ್ಯಾಪ್ತಿಯ ಮುಖಂಡ ಗೋವಿಂದರಾಜು ನೇತೃತ್ವದಲ್ಲಿ ಗ್ರಾಪಂ ಮಾಜಿ ಸದಸ್ಯ ರಾಜು, ವಿನಯ್ ಮತ್ತು ಸ್ನೇಹಿತರು ಎಸ್.ಮಾದೇಗೌಡರಿಗೆ ಹುಟ್ಟುಹಬ್ಬದ ಶುಭ ಕೋರಿದರು. ಬಲಚಿತ್ರದಲ್ಲಿ ಮಾದೇಗೌಡ ಅಭಿಮಾನಿ ಬಳಗದ ಎಂಪ್ರೋ ಕಾಂತರಾಜು, 36ನೇ ವಾರ್ಡಿನ ಅಧ್ಯಕ್ಷ ಸಿ.ಮಹೇಶ್, ಶಂಕರ ಇನ್ನಿತರರು ಎಚ್.ಡಿ.ದೇವೇಗೌಡರ ವೃತ್ತದ ಬಳಿ ಅದ್ಧೂರಿಯಾಗಿ ಸನ್ಮಾನಿಸಿ, ಶುಭ ಹಾರೈಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.12.2022 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022 ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ : ರೋಹಿಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ವಿಷ್ಣುಸಹಸ್ರನಾಮ, ಶ್ರೀ ಪಂಚಮುಖಿ ಆಂಜನೇಯ ಸ್ವಾಮಿಯವರಿಗೆ ನಿತ್ಯಾರಾಧನೆ, ಗಂಧದ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ:** ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆ, ಅಧ್ಯಕ್ಷತೆ: ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ. ಹೆಚ್.ರಾಜಶೇಖರ್, ಉದ್ಘಾಟನೆ: ಚಲನಚಿತ್ರ ಹಿನ್ನೆಲೆ ಗಾಯಕಿ ಡಾ. ಪ್ರಿಯದರ್ಶಿನಿ, ಮುಖ್ಯ ಅತಿಥಿಗಳು: ಚಿತ್ರ ನಟ ಧರ್ಮ ಕೀರ್ತಿರಾಜ್, ಉಪಸ್ಥಿತರು: ಸಂಗೀತ ನಿರ್ದೇಶಕ ಮಹೇಶ್ ಮಹದೇವ್, ಚಲನಚಿತ್ರ ನಟ ಮಂಜು ಮಿಲನ್, ಸ್ಥಳ: ಮಾನಸಗಂಗೋತ್ರಿಯ ಮಾನವಿಕ ಸಭಾಂಗಣ, ಬೆಳಗ್ಗೆ 10.30ಕ್ಕೆ



■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಕೇಂದ್ರ :** ಮೈಬಿಲ್ಡ್ ವಸ್ತುಪ್ರದರ್ಶನ, ಉದ್ಘಾಟನೆ : ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಶ್ರೀ ಸ್ವಾಮಿ ಯುಕ್ತೇಶಾನಂದ ಸ್ವಾಮೀಜಿ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಹನುಮ ಜಯಂತಿ ಹಾಗೂ ದತ್ತ ಜಯಂತಿ ಪ್ರಯುಕ್ತ ದತ್ತಾತ್ರೇಯ ಜಯಂತಿ– ಪೂರ್ಣಿಮಾ, ಬೆಳಗ್ಗೆ 7ಕ್ಕೆ ಪವಮಾನ ಮತ್ತು ದತ್ತಾತ್ರೇಯ ವಜ್ರ ಮಂತ್ರ ಹೋಮ, ಬೆಳಗ್ಗೆ 9ಕ್ಕೆ ಶ್ರೀ ಚಕ್ರಪೂಜೆ ಮತ್ತು ಇತರೆ ಪೂಜೆ ಮೂಲ ವಿರಾಟ್ ದತ್ತಾತ್ರೇಯ ಸ್ವಾಮಿಗೆ, 10 ಗಂಟೆಗೆ ಶ್ರೀ ಸ್ವಾಮಿಗೆ ಭಕ್ತಾದಿಗಳಿಂದ ಸಾಮೂಹಿಕ ತೈಲಾಭಿಷೇಕ, ಬೆಳಗ್ಗೆ 11ಕ್ಕೆ ಕೊಚ್ಚಿ ಆಶ್ರಮ ಭಜನಾ ತಂಡದಿಂದ ದತ್ತಾತ್ರೇಯ ನಾಮ ಸಂಕೀರ್ತನೆ ಟಿ.ಆರ್.ಸೇತುರಾಮನ್ ನೇತೃತ್ವದಲ್ಲಿ ಅನಘ ವ್ರತ, ಸಂಜೆ 6ಕ್ಕೆ ಸಪ್ತರ್ಷಿ ಸರೋವರದಲ್ಲಿ ದತ್ತಾತ್ರೇಯ ಸ್ವಾಮಿಗೆ ತೆಪ್ಪೋತ್ಸವ ಸಂಜೆ 7 ಗಂಟೆಗೆ ನಾದ ಮಂಟಪದಲ್ಲಿ ದತ್ತಾತ್ರೇಯ ಸ್ವಾಮಿಗೆ ಕಾಕಡಾರತಿ ಕಾರ್ಯಕ್ರಮ, ಸ್ಥಳ: ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.



■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** 88ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಡಾ. ಬೆ.ನಾ. ವಿಜಯೇಂದ್ರಾಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ ಪ್ರವಚನ, ಸ್ಥಳ: ಟ್ರಸ್ಟ್ ಆವರಣ, ಶ್ರೀ ಗೀತಾ ಮಂದಿರ ರಸ್ತೆ, ಅಶೋಕ ರಸ್ತೆ.

■ **ಶ್ರೀ ಸದ್ಗುರು ಸೇವಾ ಮಂಡಲ :** 5ನೇ ವರ್ಷದ ಶ್ರೀ ದತ್ತಾತ್ರೇಯ ಜಯಂತಿ ಸಪ್ತಾಹ, ಬೆಳಗ್ಗೆ 7 ಗಂಟೆಗೆ ಶ್ರೀಯವರಿಗೆ ರುದ್ರಾಭಿಷೇಕ, ಸರ್ವಾಲಂಕಾರ, ಶ್ರೀ ಗುರುಚರಿತ್ರೆ ಪಾರಾಯಣ, ಸರ್ವದೇವತಾ ಮಹಾಭಿಷೇಕ, ಶ್ರೀ ಮಹಗಣಪತಿ ಹೋಮ, ಶ್ರೀ ದತ್ತ ಹೋಮ, ಶ್ರೀ ಮಹಾಲಕ್ಷ್ಮಿ ಹೋಮ, ಶ್ರೀ ಸುಬ್ರಮಣ್ಯ ಹೋಮ, ಶ್ರೀ ನವಗ್ರಹ ಹೋಮ, ಶ್ರೀ ಮೃತ್ಯುಂಜಯ ಹೋಮ, ಶ್ರೀ ಸುದರ್ಶನ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಶ್ರೀ ಚಕ್ರಪೂಜೆ, ಲಕ್ಷಾರ್ಚನೆ, ಶ್ರೀ ದತ್ತ ಭಜನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ ಪಕ್ಕ, ಹೊಸ ಸಯ್ಯಾಜಿರಾವ್ ರಸ್ತೆ.

■ **ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಯೂನಿಸೆಫ್, ಹೈದರಾಬಾದ್:** ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆ ಕುರಿತು ಕಾರ್ಯಾಗಾರದ ಸಮಾರೋಪ ಸಮಾರಂಭ, ಉಪಸ್ಥಿತರು : ಮೈಸೂರು ವಿಶ್ವವಿದ್ಯಾನಿಲಯ ಪ್ರಭಾರ ಕುಲಪತಿ ಪ್ರೊ. ಹೆಚ್. ರಾಜಶೇಖರ್, ಮೈಸೂರು ಜಿಲ್ಲಾ ತಹಸೀಲ್ದಾರ್ ಬಿ.ಎನ್. ಗಿರೀಶ್, ಪ್ರೊಸನ್ ಸೇನ್ ಪ್ರೊ. ಎಂ.ಎಸ್.ಸಪ್ನ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ್ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಮತ್ತೂರು ಕುಮಾರಸ್ವಾಮಿ, ಜಯಂತಿ ಆರ್. ಭಟ್, ವ್ಯಾಖ್ಯಾನ– ಮೈಸೂರು ಕೃಷ್ಣಮೂರ್ತಿ, 8.30 ವೃತ್ತಿ ಮಾರ್ಗದರ್ಶನ, 10.00 ದೇವು ಚೌಧುರಿ–ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ 'ಭಾಷೆ ಬೇರೆ, ಭಾವ ಒಂದೇ' ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಎಂ.ಎಸ್. ಲಕ್ಷ್ಮೀಶ, ಎ.ಎಸ್.ನಾಗಲಕ್ಷ್ಮಿ, ಡಾ. ಶಿಲ್ಪಾ ಹೆಗ್ಡೆ, 3.00 ಶಾಸ್ತ್ರೀಯ ಹಾಗೂ ಸಿನೆಮಾ ಸಂಗೀತದಲ್ಲಿ ಮೃದಂಗದ ಪಾತ್ರ ಭಾಗವಹಿಸುವವರು ಖ್ಯಾತ ಹಿನ್ನೆಲೆ ಗಾಯಕರಾದ ವಿಜಯ್ ಪ್ರಕಾಶ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ಶಶಿರೇಖಾ ರಾಜು, 5.30 ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ತೋಟಗಾರಿಕೆ ಬೆಳೆಗಳ ನಿರ್ವಹಣೆಯಲ್ಲಿನ ಅನುಭವ ಕುರಿತು ಕೆ.ಎಂ. ರಾಜು ಅವರೊಡನೆ ಸಂದರ್ಶನ, 9.30 ಗಣಪತಿ ಭಟ್–ಗಾಯನ, 10.00 ಜನಪದಗೀತೆ–ಮಹದೇವಯ್ಯ ಮತ್ತು ತಂಡ, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪ್ರಾತಃಸ್ಮರಣಂ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಗೋಕುಲಂ, ಸಂಜೆ 6ಕ್ಕೆ

■ **ದಸರಾ ವಸ್ತುಪ್ರದರ್ಶನ :** ಸಂಜೆ 6.30 ರಿಂದ ರಾಮಕೃಷ್ಣನಗರದ ವಿಜಯಲಕ್ಷ್ಮಿ ಅವರಿಂದ ಭಜನೆ, 7 ರಿಂದ ವಿದ್ಯಾರಣ್ಯಪುರಂನ ಎಂ.ಎನ್. ಸುಧಾರಾಣಿ ಅವರಿಂದ ಸುಗಮ ಸಂಗೀತ, ರಾತ್ರಿ 8 ರಿಂದ ರಜನಿಕಾಂತ್ ಕಲಾತಂಡದವರಿಂದ ಆರ್ಕೇಸ್ಟ್ರಾ, ಸ್ಥಳ: ಪಿ. ಕಾಳಿಂಗರಾವ್ ಕಲಾ ಮಂಟಪ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ನಾಗಾನಂದ ದತ್ತಾತ್ರೇಯ ಮಠ :** ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 47ನೇ ವರ್ಷದ ಸಪ್ತಾಹ, ಕಳಸ ಸ್ಥಾಪನೆ, ಗಣಪತಿ ಪೂಜೆ, ವರುಣ ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ, ದತ್ತ ಸಹಸ್ರನಾಮ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11 ರಿಂದ ಭಜನೆ, ಶ್ರೀ ದತ್ತಾತ್ರೇಯ ಉತ್ಸವ, ಚಿದಂಬರ ಪೂಜೆ, ಮ. 1.30ಕ್ಕೆ ಮಹಾಮಂಗಳಾರತಿ, ಶ್ರೀಯವರಿಂದ ಪ್ರವಚನ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಮಠದ ಆವರಣ, ಬೆಲವತ್ತ ಗ್ರಾಮ.



■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು ವಿಶ್ವವಿದ್ಯಾನಿಲಯ :** ಮೈ ನ್ಯೂಟ್ರಿಕಾನ್–2022, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಗೌರವ ಅತಿಥಿಗಳು : ಜೆಎಸ್‌ಎಸ್ ಮತ್ತು ಎಂಸಿ ಪ್ರಿನ್ಸಿಪಾಲ್ ಡಾ. ಹೆಚ್. ಬಸವನಗೌಡಪ್ಪ, ಅಧ್ಯಕ್ಷತೆ: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ. ಸುರೀಂದರ್ ಸಿಂಗ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಶಿವರಾತ್ರೀಶ್ವರನಗರ, ಬೆಳಗ್ಗೆ 11.30ಕ್ಕೆ.



■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಉಪಸ್ಥಿತರು : ಕೈಮಗ್ಗ ಮತ್ತು ಜವಳಿ ಇಲಾಖೆ ಸಚಿವ ಶಂಕರ ಬ. ಪಾಟೀಲ ಮುನೇನಕೊಪ್ಪ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಸಂಜೆ 4ಕ್ಕೆ.

■ **ತನುಮನ ಸಂಸ್ಥೆ :** ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಉದ್ಘಾಟನೆ : ಪತ್ರಕರ್ತ ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು : ಆರ್. ಮದೇವಪ್ಪ, ಹರಿಶಂಕರ್, ಎಂ. ಪುರುಷೋತ್ತಮ್, ಎಸ್.ಎಂ. ಚರಣ್, ತಿಮ್ಮಯ್ಯ, ಲಯನ್ ಎಂ. ವಿಜಯಕುಮಾರ್, ಉತ್ತನಹಳ್ಳಿ ರಂಗಸ್ವಾಮಿ, ಮಧು, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಸಂಜೆ 5.30ಕ್ಕೆ.


ಬಿಡುಗಲು ಗ್ರಾಮದಲ್ಲಿಂದು


■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಪಡುವಲು ಶ್ರೀ ವಿರಕ್ತ ಮಠ, ಸರಗೂರು ತಾಲೂಕು ಶರಣ ಸಾಹಿತ್ಯ ಪರಿಷತ್ತು :** ದತ್ತಿ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಪಡುವಲು ಶ್ರೀ ವಿರಕ್ತ ಮಠದ ಶ್ರೀ ಮಹದೇವ ಸ್ವಾಮೀಜಿ, ಉದ್ಘಾಟನೆ : ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ದೇವರಾಜು ಪಿ. ಚಿಕ್ಕಳ್ಳಿ ಅವರಿಂದ ಶರಣರ ಕಾಯಕ ದಾಸೋಹ ತತ್ವ ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಮಾಲಂಗಿ ಸುರೇಶ್, ಸರಗೂರು ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ. ಗುರುಸ್ವಾಮಿ, ಸ್ಥಳ: ಪಡುವಲು ಶ್ರೀ ವಿರಕ್ತ ಮಠ, ಬಿಡುಗಲು ಗ್ರಾಮ, ಬೆಳಗ್ಗೆ 11.30ಕ್ಕೆ.

ಮೈಸೂರು ಮಿತ್ರ


ಅಡೆತಡೆಗಳೆಲ್ಲಾ ನಿವಾರಣೆಯಾದವು: ವಿವೇಕ ಸ್ಮಾರಕ ನಿರ್ಮಾಣಕ್ಕೆ ಮೈಸೂರು ಮಹಾಜನತೆ ಸಹಕರಿಸಿ

ಶ್ರೀ ರಾಮಕೃಷ್ಣ ಮಹಾಸಂಘದ ಆಪ್ತ ಭಕ್ತರ ಮನವಿ


ಡಾ.ಪ್ರಭುಪ್ರಸಾದ್


ಸಿಪಿಕೆ


ಎಸ್.ಎನ್.ಚಕ್ರವರ್ತಿ


ಡಿ.ಮಾದೇಗೌಡ



ಮೈಸೂರು,ಡಿ.7–ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ–ವಿವೇಕ ಸ್ಮಾರಕಕ್ಕಿದ್ದ ಅಡೆತಡೆಗಳು ನಿವಾರಣೆಯಾಗಿದ್ದು, ಈ ಮಹತ್ಕಾರ್ಯ ಸಾಕಾರಗೊಳ್ಳಲು ಮೈಸೂರಿನ ಮಹಾಜನತೆ ಬೆಂಬಲ ನೀಡಬೇಕೆಂದು ರಾಮಕೃಷ್ಣ ಮಹಾಸಂಘದ ಆಪ್ತ ಭಕ್ತರು ಮನವಿ ಮಾಡಿದ್ದಾರೆ.

ಈ ಕುರಿತು ಜಂಟಿ ಪತ್ರಿಕಾ ಪ್ರಕಟಣೆ ನೀಡಿರುವ ರಾಮಕೃಷ್ಣ ಮಹಾಸಂಘದ ಆಪ್ತ ಭಕ್ತರಾದ ಡಾ.ಪ್ರಭುಪ್ರಸಾದ್, ಡಾ. ಸಿಪಿಕೆ, ಎಸ್.ಎನ್.ಚಕ್ರವರ್ತಿ, ಮಾದೇಗೌಡ ಅವರು, ವಿವೇಕ ಸ್ಮಾರಕ ನಿರ್ಮಾಣ ವಿರುದ್ಧ ಕೆಲವರು 2022ರ ಜುಲೈ 25ರಂದು ಹೂಡಿದ್ದ ದಾವೆಯನ್ನು ಮೈಸೂರಿನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯವು ದಾವೆ ಆಧಾರರಹಿತ ಹಾಗೂ ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಲಾಗಿದೆ ಎಂದು ಘೋಷಿಸಿ ಅರ್ಜಿದಾರರಿಗೆ 1000 ರೂ. ದಂಡ ವಿಧಿಸಿ, ದಾವೆ ಯನ್ನು ವಜಾಗೊಳಿಸಿದೆ. ನಿರಂಜನ ಮಠದ ಆಸ್ತಿಗೆ ಸಂಬಂಧಿಸಿದಂತೆ 2013ರ ಜನವರಿ 9ರಂದು ಕರ್ನಾಟಕ ಸರ್ಕಾರ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿ ಟಿ.ಎಸ್.ಲೋಕೇಶ್ ಎಂಬುವರು 2021ರ ಜು.16ರಂದು ಸಲ್ಲಿಸಿದ್ದ ರಿಟ್ ಅರ್ಜಿಯನ್ನು 2022ರ ನ.14ರಂದು ಹೈಕೋರ್ಟ್ ವಜಾಗೊಳಿಸಿದೆ ಎಂದು ತಿಳಿಸಿದ್ದಾರೆ.

ರಾಮಕೃಷ್ಣ ಮಹಾಸಂಘವು ರಾಜ್ಯ, ದೇಶ–ವಿದೇಶಗಳಲ್ಲಿ ಅಪಾರ ಭಕ್ತ ಬಳಗವನ್ನು ಹೊಂದಿದೆ. ಕರ್ನಾಟಕದಲ್ಲಿ ಆಶ್ರಮವು ಎಲ್ಲಾ ಸಮುದಾಯಗಳಿಗೆ ಸೇರಿದ ಲಕ್ಷಾಂತರ ಭಕ್ತರನ್ನು ಹೊಂದಿದ್ದು, ಮೈಸೂರು ಆಶ್ರಮವು ಕಳೆದ 97 ವರ್ಷಗಳಿಂದ ಸಮಾಜದಲ್ಲಿ ಉನ್ನತ ಮೌಲ್ಯಗಳನ್ನು ಬಿತ್ತಿ, ಬೆಳೆಸುತ್ತಿದೆ. ಶ್ರೀ ರಾಮಕೃಷ್ಣ ಆಶ್ರಮವು ಸರ್ವಜನ ಹಿತವನ್ನು ಬಯಸಿ, ಸೇವೆ ಸಲ್ಲಿಸುವ ಸಂಸ್ಥೆಯಾಗಿದ್ದು, ಕರ್ನಾಟಕದ ಎಲ್ಲಾ ಸಮುದಾಯಗಳ ವಿಶೇಷವಾಗಿ ವೀರಶೈವ ಸಂಪ್ರದಾಯದ ಎಲ್ಲಾ ಸಂತರ, ಶರಣರ, ಸಾಹಿತಿಗಳ ನಿಕಟ ಸಂಪರ್ಕವನ್ನು ಹಲವು ವರ್ಷಗಳಿಂದ ಹೊಂದಿದೆ. ಅಲ್ಲದೇ, ಮೈಸೂರಿನ ರಾಮಕೃಷ್ಣ ಆಶ್ರಮವು ಸುಮಾರು 25 ವರ್ಷಗಳಿಂದ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸುವ ಜೊತೆಗೆ ಆಶ್ರಮದ ದೇವಸ್ಥಾನದಲ್ಲಿ ಬಸವೇಶ್ವರರಿಗೆ ಪೂಜೆ ಸಲ್ಲಿಸಲಾಗುತ್ತಿದೆ. ಶರಣರ ವಚನಗಳನ್ನು ಸಂಧ್ಯಾ ಪ್ರಾರ್ಥನೆ ಸಮಯದಲ್ಲಿ ಹಾಡಲಾಗುತ್ತಿದೆ. ಶರಣರ ಜೀವನ ಮತ್ತು ಸಂದೇಶಗಳ ಪುಸ್ತಕಗಳನ್ನು ಆಶ್ರಮ ಪ್ರಕಟಿಸಿದೆ ಎಂದರು.

ರಾಮಕೃಷ್ಣ ಮಹಾಸಂಘದ ಸನ್ಯಾಸಿ ಮತ್ತು ಆಪ್ತ ಭಕ್ತರಲ್ಲಿ ಹಲವಾರು ವೀರಶೈವರಿದ್ದಾರೆ. ರಾಮಕೃಷ್ಣ ಆಶ್ರಮವು ಹಲವಾರು ವೀರಶೈವ ಮಠಗಳು ಮತ್ತು ಸಂತರೊಂದಿಗೆ ಅನೇಕ ದಶಕಗಳಿಂದ ಅವಿನಾಭಾವ ಸಂಬಂಧ ಹೊಂದಿದೆ ಎಂದಿರುವ ಅವರು, ಯುವ ಜನತೆ ಅಭಿವೃದ್ಧಿಗೆ ಸಹಕಾರಿಯಾಗುವ ಸ್ವಾಮಿ ವಿವೇಕಾನಂದರ ಸಾಂಸ್ಕೃತಿಕ ಯುವ ಕೇಂದ್ರದ ನಿರ್ಮಾಣಕ್ಕೆ 8–10 ವರ್ಷಗಳಿಂದಲೂ ಸಾಕಷ್ಟು ವಿಳಂಬವಾಗಿದೆ. ಹೀಗಾಗಿ ಈಗಲಾದರೂ ನ್ಯಾಯಾಲಯದ ತೀರ್ಪನ್ನು ಆಧರಿಸಿ ವಿಶ್ವ ಮಾನ್ಯ ಸ್ವಾಮಿ ವಿವೇಕಾನಂದರಿಗೆ ಗೌರವ ಸಮರ್ಪಿಸುವ ಗುರುತರ ಜವಾಬ್ದಾರಿಯನ್ನು ದೇಶವು ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸುತ್ತಿರುವ ಸ್ಮರಣೀಯ ಸಂದರ್ಭದಲ್ಲಿ ಸರ್ಕಾರ ನೆರವೇರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸರ್ಕಾರ ಈಗಾಗಲೇ ವಿವೇಕ ಸ್ಮಾರಕ ಕಟ್ಟಡದ ಭಾಗಶಃ ನಿರ್ಮಾಣಕ್ಕೆ ಅನುಕೂಲ ಮಾಡಿಕೊಟ್ಟಿರುವುದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ ಎಂದಿರುವ ರಾಮಕೃಷ್ಣ ಮಹಾ ಸಂಘದ ಆಪ್ತ ಭಕ್ತರು, ಈ ಯೋಜನೆ ಯನ್ನು ಪರಿಪೂರ್ಣಗೊಳಿಸಲು ಉಳಿದ ಎಲ್ಲಾ ಅನುಕೂಲತೆಗಳನ್ನು ಪೂರೈಸಿಕೊಡಬೇಕೆಂದು ಸರ್ಕಾರವನ್ನು ವಿನಂತಿಸಿದ್ದಾರೆ.

ಮಂಚೇಗೌಡನಕೊಪ್ಪಲಲ್ಲಿ ಶ್ರೀ ವರಸಿದ್ಧಿ ವಿನಾಯಕ, ನವಗ್ರಹ ಪ್ರತಿಷ್ಠಾಪನೆ

ಆದಿಚುಂಚನಗಿರಿ ಶ್ರೀಗಳಿಂದ ಉದ್ಘಾಟನೆ



ಮೈಸೂರು,ಡಿ.7–ಮಂಚೇಗೌಡನಕೊಪ್ಪಲಿನ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿ, ನವಗ್ರಹ ಪ್ರತಿಷ್ಠಾಪನಾ ಮಹೋತ್ಸವ, ಶ್ರೀರಾಮಮಂದಿರ ಪೂಜೆ, ಶ್ರೀ ವರಸಿದ್ಧಿ ವಿನಾಯಕ ದೇವರ ಗೋಪುರ ಪೂಜಾ ಮಹೋತ್ಸವಕ್ಕೆ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮೀಜಿ ಚಾಲನೆ ನೀಡಿದರು.

ನಗರದ ಮಂಚೇಗೌಡನಕೊಪ್ಪಲಿನಲ್ಲಿ ಆಯೋಜಿಸಿದ್ದ ಮಹೋತ್ಸವದಲ್ಲಿ ಪೂರ್ಣಕುಂಭ ಸ್ವಾಗತದೊಂದಿಗೆ ಸ್ವಾಮೀಜಿಗಳು ಧಾರ್ಮಿಕ ಕಾರ್ಯವನ್ನು ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ನಮ್ಮಲ್ಲಿರುವ ದೈವತ್ವ ಗುಣದ ಮೂಲಕ ಉತ್ತಮ ಸಂಸ್ಕಾರವನ್ನು ಅಳವಡಿಸಿಕೊಳ್ಳಬೇಕು. ಪಡೆದ ಶಿಕ್ಷಣ ಉನ್ನತ ಮಟ್ಟಕ್ಕೆ ಕೊಂಡೊಯ್ದರೆ, ಧರ್ಮ ನಮ್ಮನ್ನು ಸಂಸ್ಕಾರವಂತರನ್ನಾಗಿಸುತ್ತದೆ ಎಂದು ಹೇಳಿದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥಸ್ವಾಮೀಜಿ, ಶಾಸಕ ಎಲ್.ನಾಗೇಂದ್ರ, ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಮಾಜಿ ಶಾಸಕ ವಾಸು, ಕಾಂಗ್ರೆಸ್ ಮುಖಂಡ ಕೊಪ್ಪಲು ಹರೀಶ್‌ಗೌಡ, ಕವೀಶ್‌ಗೌಡ, ನಗರಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಮಂಚೇಗೌಡನಕೊಪ್ಪಲಿನ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಿ.ರಾಮಚಂದ್ರು, ಉಪಾಧ್ಯಕ್ಷ ಸಿ.ಮಂಜುನಾಥ್, ಕಾರ್ಯದರ್ಶಿ ರವಿ ಮಂಚೇಗೌಡನಕೊಪ್ಪಲು ಇನ್ನಿತರರು ಉಪಸ್ಥಿತರಿದ್ದರು.



ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಪರಿನಿರ್ವಾಣ ದಿನದ ಅಂಗವಾಗಿ ಕುರ್ಗಳ್ಳಿಯ ಬಿಇಎಂಎಲ್‌ನಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಶಾಸಕ ಜಿ.ಟಿ.ದೇವೇಗೌಡರು ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್ ಗೌಡ, ಮುಖಂಡರಾದ ಕುರ್ಗಳ್ಳಿ ಮಹದೇವು, ಬೆಳವಾಡಿ ಶಿವಮೂರ್ತಿ, ನಂಜುಂಡೇಗೌಡ, ರಾಮಣ್ಣ ಸೇರಿದಂತೆ ಬೆಮೆಲ್ ನೌಕರರು ಉಪಸ್ಥಿತರಿದ್ದರು.

ಬನ್ನಿಮಂಟಪದಲ್ಲಿ ಪ್ಲಾಸ್ಟಿಕ್, ಕೆಮಿಕಲ್ ವಸ್ತುಗಳ ಶೇಖರಿಸಿದ್ದ ಗೋಡೌನ್‌ಗೆ ಬೆಂಕಿ

ಮೈಸೂರು, ಡಿ.7(ಎಂಕೆ)– ನಗರ ಬನ್ನಿಮಂಟಪದಲ್ಲಿರುವ(ಹೋಟೆಲ್ ಗ್ರ್ಯಾಂಡ್ ಮರ್ಕ್ಯೂರಿ ಹಿಂಭಾಗ) ಪ್ಲಾಸ್ಟಿಕ್ ಹಾಗೂ ಕೆಮಿಕಲ್ ವಸ್ತುಗಳಿಂದ ತುಂಬಿದ್ದ ಗೋಡೌನ್‌ಗಳು ಹೊತ್ತಿ ಉರಿದ ಘಟನೆ ಬುಧವಾರ ಸಂಜೆ ನಡೆದಿದೆ.



ಇಮ್ರಾನ್ ಹಾಗೂ ಅಭಿಷೇಕ್ ಎಂಬುವರಿಗೆ ಸೇರಿದ ಗೋಡೌನ್‌ಗಳು ಎನ್ನಲಾಗಿದ್ದು, ಒಂದೇ ಕಟ್ಟಡದಲ್ಲಿ ಪ್ರತ್ಯೇಕವಾಗಿ ಹಳೆಯ ಪ್ಲಾಸ್ಟಿಕ್ ಪದಾರ್ಥಗಳನ್ನು ಹಾಗೂ ಕೆಮಿಕಲ್ ವಸ್ತುಗಳನ್ನು ಸಂಗ್ರಹಿಸಿಡಲಾಗಿತ್ತು. ಸಂಜೆ 5 ಗಂಟೆ ಸುಮಾರಿಗೆ ಗೋಡೌನ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕೆಲ ನಿಮಿಷಗಳಲ್ಲಿಯೇ ದೊಡ್ಡ ಪ್ರಮಾಣದಲ್ಲಿ ಬೆಂಕಿ ಆವರಿಸಿಕೊಂಡಿದೆ. ಕೂಡಲೇ ಎಚ್ಚೆತ್ತ ಅಕ್ಕ–ಪಕ್ಕದ ನಿವಾಸಿಗಳು ಬನ್ನಿಮಂಟಪ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಬಳಿಕ ಸ್ಥಳಕ್ಕಾಗಮಿಸಿದ ಬನ್ನಿಮಂಟಪ, ಸರಸ್ವತಿಪುರಂ ಹಾಗೂ ಹೆಬ್ಬಾಳ ಅಗ್ನಿಶಾಮಕ ಠಾಣೆ ಸಿಬ್ಬಂದಿ ಸತತ ಸುಮಾರು 6 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದ್ದಾರೆ. ಮುಖ್ಯ ಅಗ್ನಿ ಶಾಮಕ ಅಧಿಕಾರಿ(ಸಿಎಫ್‌ಓ) ಜಯರಾಮಯ್ಯ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ (ಆರ್‌ಎಫ್‌ಓ) ನವೀನ್‌ಕುಮಾರ್, ಡಿಎಫ್‌ಓ (ಜಿಲ್ಲಾ ಅಗ್ನಿಶಾಮಕ)ಗಳಾದ ರಾಜು, ಚಂದನ್, ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಇನ್ಸ್‌ಸ್ಪೆಕ್ಟರ್ ಎಸ್.ನಾಗರಾಜು, ಹೆಬ್ಬಾಳ ಠಾಣೆ ಇನ್ಸ್‌ಸ್ಪೆಕ್ಟರ್ ವೆಂಕಟೇಶ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ನಿಧನ



ಶ್ರೀಮತಿ ಮುತ್ತಮ್ಮ

ಮೈಸೂರು ಸಿಟಿ, ಉದಯಗಿರಿಯ ಟೆಲಿಕಾಂ ಕಾಲೋನಿ ನಿವಾಸಿ ಮತ್ತು ಲೇಟ್ ರಂಗದಾಸಯ್ಯ (ಸೀನಪ್ಪ) ಅವರ ಪತ್ನಿ ಶ್ರೀಮತಿ ಮುತ್ತಮ್ಮ (80) ಬುಧವಾರ ಅನಾರೋಗ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಮಕ್ಕಳಾದ ಗೋವಿಂದರಾಜು, ಕಮಲಾ ನಾರಾಯಣಸ್ವಾಮಿ, ಸೂರ್ಯ ನಾರಾಯಣ್, ಚಂಚಲಾಕ್ಷಿ, ಕೃಷ್ಣಮೂರ್ತಿ, ಸೊಸೆಯಂದಿರಾದ ಲೋಕೇಶ್ವರಿ, ರೇಖಾ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 2 ಗಂಟೆಗೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಲಿದೆ.

ಯೋಧರ ಆರೋಗ್ಯ ದೃಷ್ಟಿಯಿಂದ ತಾಜಾ ಆಹಾರ ಪೂರೈಕೆಗೆ ಡಿಎಫ್‌ಆರ್‌ಎಲ್‌ಗೆ ಡಿಆರ್‌ಡಿಓ ಮಹಾ ನಿರ್ದೇಶಕರ ಸಲಹೆ

'ವಿವಿಧ ಭೂ ಪ್ರದೇಶದಲ್ಲಿ ರಕ್ಷಣಾ ಪಡೆಗಳ ಸುಸ್ಥಿರತೆಗಾಗಿ ಭವಿಷ್ಯದ ಕಾರ್ಯತಂತ್ರಗಳು' ರಾಷ್ಟ್ರೀಯ ಸಮ್ಮೇಳನ





ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿರುವ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಡಿಆರ್‌ಡಿಓ ಮಹಾ ನಿರ್ದೇಶಕ(ಜೀವವಿಜ್ಞಾನ) ಡಾ.ಉಪೇಂದ್ರಕುಮಾರ್ ಸಿಂಗ್ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿರುವ ನೌಕಾಸೇನೆ ಅಧಿಕಾರಿಗಳನ್ನು ಕಾಣಬಹುದು.

ಮೈಸೂರು, ಡಿ.7(ಎಂಕೆ)– ಸೇನೆಯಲ್ಲಿ ಕರ್ತವ್ಯ ನಿರ್ವಹಿಸುವ ಯೋಧರ ಆರೋಗ್ಯದ ದೃಷ್ಟಿಯಿಂದ ತಾಜಾ ಹಾಗೂ ಬಿಸಿಯಾಗಿರುವಂತಹ ಆಹಾರ ಪದಾರ್ಥಗಳನ್ನು ಪೂರೈಸುವುದು ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ(ಡಿಎಫ್‌ಆರ್‌ಎಲ್) ಕಾರ್ಯೋನ್ಮುಖಗೊಳ್ಳಬೇಕಾಗಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಓ) ಮಹಾ ನಿರ್ದೇಶಕ(ಜೀವವಿಜ್ಞಾನ) ಡಾ.ಉಪೇಂದ್ರ ಕುಮಾರ್ ಸಿಂಗ್ ಹೇಳಿದರು.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ರಕ್ಷಣಾ ಸಚಿವಾಲಯ, ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (ಡಿಎಫ್‌ಆರ್‌ಎಲ್) ಮೈಸೂರು ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ಸಂಯುಕ್ತಾಶ್ರಯದಲ್ಲಿ 'ವಿವಿಧ ಭೂ ಪ್ರದೇಶದಲ್ಲಿ ರಕ್ಷಣಾ ಪಡೆಗಳ ಸುಸ್ಥಿರತೆಗಾಗಿ ಭವಿಷ್ಯದ ಕಾರ್ಯತಂತ್ರಗಳು' ಶೀರ್ಷಿಕೆಯಡಿ ಆಯೋಜಿಸಿರುವ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೈಗಾರಿಕೆಗಳೊಂದಿಗೆ ಕೈ ಜೋಡಿಸಿ ಸೈನಿಕರ ಸೇವಾ ನಿರತ ಸ್ಥಳಗಳಿಗೆ ತಾಜಾ ಆಹಾರ ಪೂರೈಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು.

ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯದಿಂದ ತಯಾರಾದ ಆಹಾರ ಪದಾರ್ಥಗಳಿಗೆ ಇಸ್ರೋ ಸಂಸ್ಥೆ ಬೇಡಿಕೆಯಿಂದ ಹೊಸ ಮಾರುಕಟ್ಟೆಯೂ ದೊರೆತಂತಾಗಿದೆ. ಡಿಆರ್‌ಡಿಓ ಜೊತೆಗೆ ಹೊರಗಿನ ಮಾರುಕಟ್ಟೆಗಳಲ್ಲಿಯೂ ಡಿಎಫ್‌ಆರ್‌ಎಲ್‌ನ ಆಹಾರ ಪದಾರ್ಥಗಳಿಗೆ ಬೇಡಿಕೆ ಇದ್ದು, ಹೊಸ ಹೊಸ ಸಂಶೋಧನೆ ಮೂಲಕ ಆಹಾರ ಪದಾರ್ಥ ಪೂರೈಕೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ತಿಳಿಸಿದರು.

ಭೂಸೇನೆ, ವಾಯುಸೇನೆ ಹಾಗೂ ನೌಕಾಸೇನೆಯಲ್ಲಿ ಸೇವೆ ಸಲ್ಲಿಸುವವರಿಗೆ ಅನುಕೂಲಕ್ಕೆ ತಕ್ಕಂತೆ ಆಹಾರ ನೀಡುವುದು ಮುಖ್ಯವಾಗಿದೆ. ನೀಡುವ ಆಹಾರ ನೋಡುವುದಕ್ಕೆ ಸುಂದರವಾಗಿದ್ದರೆ ಸಾಲದು, ರುಚಿ–ಶುಚಿಯಾಗಿರುವುದಲ್ಲದೆ ಪೋಷಕಾಂಶದಿಂದ ಕೂಡಿರಬೇಕು. ಆಹಾರ ಪದಾರ್ಥಗಳೆಂದು ಬಳಸುವ ಎಲ್ಲಾ ಬಗೆಯ ಬೆಳೆಗಳ ಬಳಕೆ ಮಾಡಿಕೊಳ್ಳುವುದರಿಂದ ಸಾಕಷ್ಟು ಅನುಕೂಲವಾಗಲಿದೆ ಎಂದು ಸಲಹೆ ನೀಡಿದರು.

ತಂತ್ರಜ್ಞಾನ ಅಭಿವೃದ್ಧಿಗೆ ಕೇಂದ್ರ ಸರ್ಕಾರ ದೊಡ್ಡಮಟ್ಟದಲ್ಲಿ ಅನುದಾನ ನೀಡುತ್ತಿದೆ. ಇದರ ಲಾಭ ಪಡೆದುಕೊಳ್ಳುವ ಖಾಸಗಿ ಆಹಾರ ಪದಾರ್ಥ ತಯಾರಿಕಾ ಸಂಸ್ಥೆಗಳು, ಡಿಎಫ್‌ಆರ್‌ಎಲ್ ಜೊತೆಗೂಡಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಬೇಕು ಎಂದು ತಿಳಿಸಿದ ಅವರು, ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನದ ಯಶಸ್ಸಿಗೆ ಶುಭ ಕೋರಿದರು.

ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯದ ನಿರ್ದೇಶಕ ಡಾ.ಅನಿಲ್ ದತ್ ಸೆಮ್ವಾಲ್ ಮಾತನಾಡಿ, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ಹೊಸ ಆಹಾರ ಉತ್ಪನ್ನಗಳು, ಸುಧಾರಿತ ಪೌಷ್ಟಿಕಾಂಶ ನೀಡುತ್ತಿರುವ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ ರೈತರಿಗೆ ಉತ್ತಮ ಆದಾಯವನ್ನು ನೀಡಲು ಸನ್ನದ್ಧವಾಗಿದೆ. ಎಂದರು.

ವಿವಿಧ ಭೂ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೈನಿಕರಿಗೆ ಈಗ ನೀಡುತ್ತಿರುವ ಮೀಲ್ಸ್(ರೆಡಿ ಟು ಈಟ್) ಪಡಿತರವನ್ನು ಮಿಲಿಟರಿ ಪೌಷ್ಟಿಕಾಂಶದ ಅವಶ್ಯಕತೆಗಳಿಗೆ ಅನುಗುಣವಾಗಿ ದೀರ್ಘ ಕಾಲದವರೆಗೆ ಕೆಡದಂತೆ ತಯಾರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಇದೇ ವೇಳೆ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯದೊಂದಿಗೆ ತಯಾರಿಸಿದ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತು.

ನೌಕಾಪಡೆ ಕೇಂದ್ರ ಕಚೇರಿಯ ಪ್ರಧಾನ ನಿರ್ದೇಶಕ(ಸಿ ಅಂಡ್ ವಿ) ಕಮಾಂಡರ್ ಮನೋಜ್ ಶರ್ಮ, ಇಸ್ರೋ ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರದ ನಿರ್ದೇಶಕ ಡಾ. ಆರ್.ಉಮಾಮಹೇಶ್ವರನ್, ಡಿಆರ್‌ಡಿಓ ಮುಖ್ಯಸ್ಥ ಡಾ.ಸಮೀರ್ ವಿ.ಕಾಮತ್, ಡಿಎಫ್‌ಆರ್‌ಎಲ್ ವಿಜ್ಞಾನಿಗಳಾದ ಡಾ.ಕುಮಾರ್, ಡಾ.ಸಜೀವ್‌ಕುಮಾರ್ ಮತ್ತಿತರರಿದ್ದರು.

ಆಹಾರ ಪದಾರ್ಥಗಳು, ಗೃಹೋಪಯೋಗಿ ವಸ್ತುಗಳ ಮಳಿಗೆ ಉದ್ಘಾಟನೆ...



ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (ಡಿಎಫ್‌ಆರ್‌ಎಲ್) ಹಾಗೂ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಸಂಶೋಧಿಸಿ ತಯಾರಿಸಿದ ಆಹಾರ ಪದಾರ್ಥಗಳು ಹಾಗೂ ಗೃಹೋಪಯೋಗಿ ಪದಾರ್ಥಗಳ ಮಳಿಗೆಗಳನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಓ) ಮಹಾ ನಿರ್ದೇಶಕ(ಜೀವ ವಿಜ್ಞಾನ) ಡಾ.ಉಪೇಂದ್ರಕುಮಾರ್‌ಸಿಂಗ್ ಉದ್ಘಾಟಿಸಿದರು. ಸುಮಾರು 8 ಮಳಿಗೆಗಳಲ್ಲಿ 1 ವರ್ಷದವರೆಗೆ ಇಟ್ಟುಕೊಂಡು ಬಳಸಬಹುದಾದ ಆಹಾರ ಪದಾರ್ಥಗಳು, ಗೃಹ ಬಳಕೆ ವಸ್ತುಗಳು, ಹಾಲಿನ ಪದಾರ್ಥಗಳು, ವಿವಿಧ ಬಗೆಯ ಬಿಸ್ಕಟ್‌ಗಳ ಪ್ರದರ್ಶನ ಮತ್ತು ಮಾರಾಟ ಜೊತೆಗೆ ಮಾಹಿತಿಯನ್ನು ನೀಡಲಾಗುತ್ತಿದೆ.

ಅಂತರ್ಜಾಲಕ್ಕೆ ಅಂಟಿಕೊಳ್ಳದೇ ವಿಶ್ವಾಸಾರ್ಹ ಪುಸ್ತಕ ಪರಾಮರ್ಶಿಸಿ

ಪಿಸಿ, ಪಿಎಸ್‌ಐ ಪರೀಕ್ಷಾ ತರಬೇತಿ ಶಿಬಿರ ಉದ್ಘಾಟನೆ: ಶಿಬಿರಾರ್ಥಿಗಳಿಗೆ ಲೋಕಾಯುಕ್ತ ಎಸ್‌ಪಿ ವಿ.ಜೆ. ಸಜೀತ್ ಕಿವಿಮಾತು



ಮೈಸೂರು, ಡಿ.7(ಪಿಎಂ)–ಅಂತರ್ಜಾಲದ ಮಾಹಿತಿಗಳಿಗೇ ಅಂಟಿಕೊಳ್ಳದೇ ವಿಶ್ವಾಸಾರ್ಹ ಪುಸ್ತಕಗಳ ಪರಾಮರ್ಶೆ ಮಾಡಬೇಕು ಎಂದು ಲೋಕಾಯುಕ್ತ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ.ಸಜೀತ್ ತಿಳಿಸಿದರು.

ಮೈಸೂರಿನ ಲಕ್ಷ್ಮೀಪುರಂನ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಹಮ್ಮಿಕೊಂಡಿರುವ ಪೊಲೀಸ್ ಪೇದೆ (ಪಿಸಿ) ಮತ್ತು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ಪಿಎಸ್‌ಐ) ಪರೀಕ್ಷೆಯ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಪರೀಕ್ಷೆಗೆ ಪೂರ್ವಸಿದ್ಧತೆ ಅಗತ್ಯ. ಆಸಕ್ತಿಯಿಂದ ಅಧ್ಯಯನದಲ್ಲಿ ತೊಡಗಬೇಕು. ಅಂತರ್ಜಾಲದ ಮಾಹಿತಿಯನ್ನೇ ನಂಬುವ ಬದಲು ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವಾಸಾರ್ಹ ಪುಸ್ತಕಗಳನ್ನು ಪರಾಮರ್ಶಿಸಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ವಿಶ್ವಾಸಾರ್ಹ ಮೂಲಗಳಿಂದ ವಿಷಯಕ್ಕೆ ಸಂಬಂಧಿಸಿದ ಅನುಮಾನಗಳನ್ನು ದೂರ ಮಾಡಿಕೊಳ್ಳಬೇಕು. ಸಮಯದ ಮಿತಿ ಹಾಕಿಕೊಂಡು ಪ್ರಶ್ನೆ ರೂಪಿಸಿ, ಅದಕ್ಕೆ ಉತ್ತರ ಬರೆಯಬೇಕು. ನೀವು ಕೊಟ್ಟ ಉತ್ತರ ಸರಿ ಇದೆಯೋ ಅಥವಾ ಇಲ್ಲವೋ ಎಂದು ಪರಿಶೀಲಿಸಿಕೊಳ್ಳುವ ಪರಿಪಾಠ ಬೆಳೆಸಿಕೊಳ್ಳಬೇಕು. ಇದರಿಂದ ಖಚಿತವಾಗುತ್ತಾ ಹೋಗುತ್ತೀರಿ. ಆ ನಂತರ ಗೊಂದಲ ಇರುವ ವಿಷಯಕ್ಕೆ ಕೊನೆಯಲ್ಲಿ ಹೆಚ್ಚು ಒತ್ತು ಕೊಟ್ಟರೆ ಅದನ್ನು ಸರಿಪಡಿಕೊಳ್ಳಬಹುದು ಎಂದು ಕಿವಿಮಾತು ಹೇಳಿದರು.

ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ. ರಂಗಸ್ವಾಮಿ ಮಾತನಾಡಿ, ಪದವಿ ಪಡೆದ ವಿಷಯಗಳನ್ನೇ ಅಲ್ಲದೆ ಇತರ ಮೂಲಗಳಿಂದ ವಿಷಯ ಸಂಗ್ರಹಿಸಿದಾಗ ತಯಾರಿ ಸುಲಭವಾಗುತ್ತದೆ. ಜೊತೆಗೆ ತರಬೇತಿ ಸಮಯದಲ್ಲಿ ಶಿಸ್ತು ಮತ್ತು ಸಮಯಪ್ರಜ್ಞೆ ಅತ್ಯಂತ ಅವಶ್ಯಕ. ನಾನು ಗೆದ್ದೇ ಗೆಲ್ಲುತ್ತೇನೆ ಎಂಬ ವಿಶ್ವಾಸ ಬೆಳೆಸಿಕೊಂಡು ಪರಿಶ್ರಮ ಹಾಕಬೇಕು ಎಂದರು.


ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ನಾಗಮಲ್ಲೇಶ್ ಮಾತನಾಡಿದರು. ರಾಜ್ಯ ಸಹಕಾರ ಮಾರುಕಟ್ಟೆ ನಿಗಮದ ನಿರ್ದೇಶಕ ವೈ.ಎನ್.ಶಂಕರೇಗೌಡ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಡಾ.ಎಸ್. ನಾಗಾಚಾರಿ, ಡಾ.ಉಮೇಶ್ ಬೇವಿನಹಳ್ಳಿ, ಪ್ರೊ.ವಿ.ಜಯಪ್ರಕಾಶ್, ಸಿ.ಕೆ.ಕಿರಣ್ ಕೌಶಿಕ್, ಕೆ.ವೈ.ನಾಗೇಂದ್ರ, ಹೆಚ್.ಬಾಲಕೃಷ್ಣ, ಜೈನಹಳ್ಳಿ ಸತ್ಯನಾರಾಯಣಗೌಡ ಮತ್ತಿತರರು ಹಾಜರಿದ್ದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಡಿ.7– ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಬಸವ ಬೆಳಗು, ವಿದೇಶ ವಿದ್ಯಾವಿಕಾಸ, ಜೀವಜಲ, ಸ್ವಸಹಾಯ ಸಂಘಗಳಿಗೆ ಉತ್ತೇಜನ ಮತ್ತು ಕಾಯಕಕಿರಣ ಯೋಜನೆಗಳಿಗೆ ಸಾಲ ಹಾಗೂ ಸಹಾಯಧನ ಸೌಲಭ್ಯ ಪಡೆಯಲು ಅರ್ಜಿಗಳನ್ನು ಆಹ್ವಾನಿಸಿದ್ದು, ಡಿ.15ರವರೆಗೆ ವಿಸ್ತರಿಸಲಾಗಿದೆ. ಅರ್ಹರಿಗೆ ಹತ್ತಿರದ ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ನಾಗರಿಕ ಸೇವಾ ಕೇಂದ್ರಗಳಲ್ಲಿ ದಾಖಲೆಗಳೊಂದಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಈ ಯೋಜನೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ https://kvldcl.karnataka.gov.inನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ:080–22865522 ಅಥವಾ ಮೈಸೂರು ಜಿಲ್ಲಾ ಕಚೇರಿ ದೂರವಾಣಿ ಸಂಖ್ಯೆ:0821–2341194 ಅನ್ನು ಸಂಪರ್ಕಿಸಬಹುದು.

'ಕೊರೊನಾದ ಸೆರಗು ಹಿಡಿದು' ಸೇರಿ 3 ಕೃತಿಗಳ ಬಿಡುಗಡೆ

ಕೋವಿಡ್ ನಿಯಂತ್ರಣ ಕುರಿತಂತೆ ವಿಮರ್ಶಾ ಮಾಧ್ಯಮ ವ್ಯವಸ್ಥೆ ಜೊತೆಗೆ ರಾಜೀಯಾಗದೇ ವಾಸ್ತವಾಂಶ ಬಿತ್ತರಿಸಿತು; ಪ್ರೊ.ಮುಜಾಫರ್ ಅಸಾದಿ



ಡಾ.ಡಿ.ಸಿ.ನಂಜುಂಡ ಅವರ ಮೂರು ಕೃತಿಗಳು ಬುಧವಾರ ಬಿಡುಗಡೆಗೊಂಡವು.

ಮೈಸೂರು,ಡಿ.7(ಪಿಎಂ)–ಮೈಸೂರು ವಿವಿ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಡಾ.ಡಿ.ಸಿ. ನಂಜುಂಡ ಅವರ ಮೂರು ಕೃತಿಗಳು ಬುಧವಾರ ಬಿಡುಗಡೆಗೊಂಡವು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅಂತರ್ಗತ ಬೆಳವಣಿಗೆ ಮತ್ತು ಅಭಿವೃದ್ಧಿ ಸಂಶೋಧನಾ ಕೇಂದ್ರದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ.ಡಿ.ಸಿ.ನಂಜುಂಡ ಅವರ 'ವರ್ತಮಾನದ ನಿಟ್ಟುಸಿರು', 'ಸ್ವಾದಸ್ತಿ' ಮತ್ತು 'ಕೊರೊನಾದ ಸೆರಗು ಹಿಡಿದು' ಎಂಬ ಮೂರು ಕೃತಿಗಳನ್ನು ಮೈಸೂರು ವಿವಿ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸಾದಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಕೋವಿಡ್ ನಮ್ಮ ದೇಶದ ಆರ್ಥಿಕತೆ ಮೇಲೆ ದುಷ್ಪರಿಣಾಮ ಉಂಟು ಮಾಡಿತು. ಜನಸಾಮಾನ್ಯರ ಬದುಕು ಸೇರಿದಂತೆ ಮಧ್ಯಮ, ಸಣ್ಣ ಕೈಗಾರಿಕೆಗಳ ವಹಿವಾಟಿನ ಮೇಲೂ ವ್ಯತಿರಿಕ್ತ ಪರಿಣಾಮಕ್ಕೆ ಕಾರಣವಾಯಿತು. ಕೋವಿಡ್ ನಿಯಂತ್ರಣದಲ್ಲಿ ಪ್ರಭುತ್ವ ವಿಫಲವಾಯಿತೇ? ಎಂಬ ಪ್ರಶ್ನೆ ಎದುರಾಗುತ್ತದೆ. ಕಾರಣ ಕೋವಿಡ್ ಸಾವು–ನೋವು ಕುರಿತಂತೆ ಮಾಧ್ಯಮ ಹಾಗೂ ಬೇರೆ ಎನ್‌ಜಿಓಗಳು ನೀಡಿದ ದತ್ತಾಂಶಕ್ಕೂ, ಸರ್ಕಾರದ ದತ್ತಾಂಶಕ್ಕೂ ಅಜಗಜಾಂತರ ವ್ಯತ್ಯಾಸ ಕಂಡು ಬಂದಿತು ಎಂದು ಹೇಳಿದರು.

ಪತ್ರಿಕಾ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮ ಕೋವಿಡ್ ಕರಾಳಮುಖವನ್ನು ಅನಾವರಣ ಮಾಡಿದವು. ಅದರಲ್ಲೂ ವಿಮರ್ಶಾ ಮಾಧ್ಯಮ ಯಾವತ್ತೂ ಕೂಡ ವ್ಯವಸ್ಥೆಯೊಂದಿಗೆ ರಾಜೀ ಮಾಡಿಕೊಳ್ಳದೇ ವಾಸ್ತವಾಂಶದ ಮೇಲೆ ಬೆಳಕು ಚೆಲ್ಲಿತು. ಕೋವಿಡ್‌ಗೆ ಬಲಿಯಾದವರ ನಿಖರ ಸಂಖ್ಯೆ ಸೇರಿದಂತೆ ಹಲವು ಮಹತ್ತರ ಅಂಶಗಳನ್ನು ಇದು ಬಿತ್ತರಿಸಿತು. ಜೊತೆಗೆ ಸುಪ್ರಿಂಕೋರ್ಟ್ ಮತ್ತು ಹೈಕೋರ್ಟ್ ಪ್ರಭುತ್ವದ ಮೇಲೆ ಬೀಸಿದ ಚಾಟಿ ಏಟು ಸರ್ಕಾರ ಎಚ್ಚೆತ್ತುಕೊಳ್ಳಲು ಕಾರಣವಾಯಿತು ಎಂದು ಪ್ರೊ.ಮುಜಾಫರ್ ಅಸಾದಿ ಅಭಿಪ್ರಾಯಪಟ್ಟರು.

ಮಂಡ್ಯ ಸ್ನಾತಕೋತ್ತರ ಕೇಂದ್ರದ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ.ಜಿ.ಪ್ರೇಮ್ ಕುಮಾರ್ ಮಾತನಾಡಿ, 'ಸ್ವಾದಸ್ತಿ' ಮತ್ತು 'ವರ್ತಮಾನದ ನಿಟ್ಟುಸಿರು' ಕೃತಿಗಳಲ್ಲಿ ಡಾ.ನಂಜುಂಡ ನಮ್ಮ ಸಮಾಜದಲ್ಲಿ ಮುಂದುವರೆಯುತ್ತಿರುವ ಅಸಮಾನತೆ ಮೇಲೆ ಬೆಳಕು ಚೆಲ್ಲಿದ್ದಾರೆ. ವೈಜ್ಞಾನಿಕ ಮತ್ತು ವಾಸ್ತವಿಕ ಅಂಶಗಳ ಆಧಾರದಲ್ಲಿ ಈ ಕೃತಿಗಳನ್ನು ಅವರು ರಚನೆ ಮಾಡಿದ್ದಾರೆ ಎಂದು ತಿಳಿಸಿದರು. ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಧ್ಯಾಪಕ ಪಿ.ಶಿವಕುಮಾರ್, ಪತ್ರಕರ್ತ ವೀರಭದ್ರಪ್ಪ ಬಿಸ್ಲಳ್ಳಿ, ಕೃತಿ ಕರ್ತೃ ಡಾ.ಡಿ.ಸಿ.ನಂಜುಂಡ ಹಾಜರಿದ್ದರು.

ಡಾ.ಡಿ.ಸಿ.ನಂಜುಂಡ ಅವರು ಇಂತಹ ವಿಷಯಗಳನ್ನು 'ಕೊರೊನಾದ ಸೆರಗು ಹಿಡಿದು' ಕೃತಿಯಲ್ಲಿ ಸೂಕ್ಷ್ಮ ಮತ್ತು ಗಂಭೀರವಾಗಿ ಚರ್ಚಿಸಿದ್ದಾರೆ. ಕೋವಿಡ್ ನಿಯಂತ್ರಣ ಸಂಬಂಧ ವಸ್ತುಸ್ಥಿತಿ ಮೇಲೆ ಬೆಳಕು ಚೆಲ್ಲಿದ್ದಾರೆ. ಕೋವಿಡ್ ದಿಢೀರ್ ಎದುರಾದ ಸೋಂಕು. ಅದರೊಟ್ಟಿಗೆ ಬಂದ ಸಮಸ್ಯೆಗಳೇನು? ಎಷ್ಟರ ಮಟ್ಟಿಗೆ ಪರಿಹಾರ ಕಂಡುಕೊಳ್ಳಲಾಯಿತು ಎಂಬುದನ್ನು ಕೃತಿಯಲ್ಲಿ ಚಿತ್ರಿಸಿದ್ದಾರೆ. ಈ ಪುಸ್ತಕಕ್ಕೆ ಪ್ರಚಾರ ದೊರೆಯಬೇಕು. ಸಮಾಜ ಕಾರ್ಯ ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ ಈ ಪುಸ್ತಕ ಹೆಚ್ಚು ಉಪಯುಕ್ತ. **–ಪ್ರೊ.ಮುಜಾಫರ್ ಅಸಾದಿ**

ನಕ್ಕರೆ ಅದೇ ಸ್ವರ್ಗ

ಪ್ರಯಾಣಿಕ : ಚಿಲ್ಲರೆಯನ್ನೇ ಕೊಡಲಿಲ್ಲ. ಅದಕ್ಕಾಗಿ 50 ರೂ. ಕೊಟ್ಟು ಆಟೋ ಮಾಡ್ಕೊಂಡು ನಿಮ್ಮ ಬಸ್ ಹಿಡಿದದ್ದಾಯಿತು.

ಕಂಡಕ್ಟರ್ : ಆಯ್ತು ಚಿಲ್ಲರೆ ಎಷ್ಟು ಕೊಡಬೇಕು?

ಪ್ರಯಾಣಿಕ : 3 ರೂಪಾಯಿ!

ಮೈಸೂರು ಮಿತ್ರ

ಗುರುವಾರ, 8 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ದುಃಖಿತರಾಗಿದ್ದರೂ ತಮಗಿಂತ ಹೆಚ್ಚು ದುಃಖಿತರಾದವರನ್ನು ನೋಡಿಯಾದರೂ ಬದುಕು ಸಾಗಿಸಬೇಕು. –ನೀತಿಸಾರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡುಗೆ ಯಾಕೆ ಹಿಂಗೆ ಅಂದ್ರೆ ಕೋಣೆ ಕಿರಿದಾಗಿತ್ತು ಅಂದ್ಲಂತೆ

ನಿಮ್ಮ ಪತ್ರಗಳು

ಚಿರತೆಯ ಆತಂಕದಿಂದ ಜನರನ್ನು ತಪ್ಪಿಸಿ

ಮಾನ್ಯರೆ,

ರಾಜ್ಯದ ಹಲವೆಡೆ ಚಿರತೆ ಹಾವಳಿ ಈಗಾಗಲೇ ಜನರಲ್ಲಿ ಆತಂಕವನ್ನು ಸೃಷ್ಟಿ ಮಾಡಿದೆ. ಇದು ಕೇವಲ ಆತಂಕವಷ್ಟೇ ಆಗಿರದೆ ಮಕ್ಕಳು, ವೃದ್ಧರು ಎನ್ನದೆ ಜನರು ಚಿರತೆಯ ದಾಳಿಗೆ ಬಲಿಯಾಗುತ್ತಿದ್ದಾರೆ. ಇವುಗಳ ಭಯದಿಂದಾಗಿ ಹಳ್ಳಿಗಳಲ್ಲಿ, ಅದರಲ್ಲೂ ಕಾಡುಗಳಿಗೆ ಹತ್ತಿರವಿರುವ ಪ್ರದೇಶದ ಜನರು ಪ್ರಾಣ ಭಯದಿಂದ ತಮ್ಮ ದಿನನಿತ್ಯದ ಕಾರ್ಯ ಚಟುವಟಿಕೆಗಳನ್ನೇ ನಿಲ್ಲಿಸಿ ಬಿಟ್ಟಿದ್ದಾರೆ. ರೈತರು ಜಮೀನುಗಳಿಗೆ ಹೋಗಿ ವ್ಯವಸಾಯ ಮಾಡುವುದನ್ನು ಸಹ ನಿಲ್ಲಿಸಿದ್ದಾರೆ. ಹಾಗೂ ಜನರು ಕೂಲಿಗೂ ಸಹ ಹೋಗದೆ ಮನೆಯಲ್ಲಿಯೇ ಉಳಿದು ಜೀವನ ನಡೆಸಲು ಕಷ್ಟಪಡುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಜನರು ಆರ್ಥಿಕವಾಗಿ ಒಂದೊತ್ತಿನ ಊಟಕ್ಕೂ ಸಹ ಕಷ್ಟಪಾಡುವಂತಾಗುವುದು ಖಚಿತ. ಅಲ್ಲದೆ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಸಹ ಹಿಂಜರಿಯುತ್ತಿದ್ದಾರೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿದೆ. ಹಾಗಾಗಿ ಸರ್ಕಾರವು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಆದಷ್ಟು ಬೇಗ ಚಿರತೆಯನ್ನು ಹಿಡಿದು, ಕಾಡಿಗೆ ಕೊಂಡೊಯ್ದು ಬಿಡುವುದೊಂದಿಗೆ ಆತಂಕದಿಂದ ಮುಕ್ತಿ ಕೊಡಬೇಕಾಗಿ ವಿನಂತಿಸುತ್ತೇನೆ.

–ಐಶ್ವರ್ಯ, ಚಟ್ನಹಳ್ಳಿ, ಮೈಸೂರು.

ಅಂತರರಾಷ್ಟ್ರೀಯ ಫೆಲೋಶಿಪ್‌ಗೆ ಪ್ರೊ. ಕೆ.ಎಸ್. ರಂಗಪ್ಪ ಅಭಿನಂದನಾರ್ಹರು

ಮಾನ್ಯರೆ,



ಯುನೆಸ್ಕೋ ಅಂಗ ಸಂಸ್ಥೆಯಾದ ದಿ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸ್‌ನ (TWAS) ಈ ಸಾಲಿನ ಫೆಲೋಶಿಪ್‌ಗೆ ಪ್ರೊ. ಕೆ.ಎಸ್. ರಂಗಪ್ಪ ಭಾಜನರಾಗಿರುವುದು ತುಂಬಾ ಸಂತಸದ ಸಂಗತಿ. TWAS ಸಂಸ್ಥೆಯ ಅಧ್ಯಕ್ಷರಾದ ಪ್ರೊ ಹೆಚ್.ಎ. ಮಹಮ್ಮದ್ ಹಸನ್ ಅವರು ಪ್ರೊ ಕೆ ಎಸ್ ರಂಗಪ್ಪ ಅವರಿಗೆ ಬರೆದಿರುವ ಪತ್ರದಲ್ಲಿ ವಿಜ್ಞಾನಕ್ಕೆ ನಿಮ್ಮ ಅತ್ಯುತ್ತಮ ಕೊಡುಗೆ ಮತ್ತು ಅಭಿವೃದ್ಧಿಶೀಲ ಜಗತ್ತಿನಲ್ಲಿ ಅದರ ಪ್ರಚಾರಕ್ಕೆ ಸ್ಪಷ್ಟವಾದ ಮನ್ನಣೆ ದೊರೆತಿದೆ. ನಮ್ಮ ಸದಸ್ಯರಲ್ಲಿ ನಿಮ್ಮನ್ನು ಹೊಂದಲು ಹೆಮ್ಮೆ ಪಡುತ್ತೇವೆ. ವಿಜ್ಞಾನಿಗಳಾದ ಸಿ.ಎನ್.ಆರ್. ರಾವ್ ಮತ್ತು ಗೋವರ್ಧನ್ ಮೆಹ್ತಾ ಅವರ ನಂತರ ಬಹಳ ವರ್ಷಗಳ ಬಳಿಕ ಪ್ರೊ ಕೆ.ಎಸ್.ರಂಗಪ್ಪ ಅವರಿಗೆ ಫೆಲೋಶಿಪ್ ದೊರೆತಿರುವುದು ಅವರು ಪ್ರಾಧ್ಯಾಪಕರೂ, ಕುಲಪತಿಗಳಾಗಿದ್ದ ಮೈಸೂರು ವಿವಿಗೆ ದೊರೆತ ಮತ್ತೊಂದು ಗರಿಮೆ ಮತ್ತು ಮುಕುಟದಂತೆ. ಇದರಿಂದಾಗಿ ಮೈಸೂರಿನ ಯುವ ವಿಜ್ಞಾನಿಗಳ ಉನ್ನತ ಅಧ್ಯಯನಕ್ಕೆ ವಿವಿಧೆಡೆ ಕಳುಹಿಸಲು ಶಿಫಾರಸ್ಸು ಮಾಡಲು ಅವಕಾಶ ಲಭಿಸಿದೆ ಎಂಬುದು ಸಂತಸದ ಸಂಗತಿ. 2022 ಸಾಲಿನ ಫೆಲೋಶಿಪ್ ಪಡೆದ ಏಕೈಕ ಭಾರತದವರಾಗಿ, ಅದರಲ್ಲೂ ಕರ್ನಾಟಕದ ಮೈಸೂರಿನವರಾಗಿರುವುದು ನಮಗೆ ಹೆಮ್ಮೆಯ ಸಂಗತಿ ಮತ್ತು ಶ್ರೀಯುತರು ಇದಕ್ಕೆ ಅಭಿನಂದನಾರ್ಹರು.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.

ಮುರುಘ ಶ್ರೀಗಳ ಪ್ರಕರಣ ಸಿಬಿಐಗೆ ವಹಿಸಲಿ

ಮಾನ್ಯರೆ,

ಮಂತ್ರಿಯೊಬ್ಬರು ಮುರುಘಾ ಮಠದ ಸ್ವಾಮೀಜಿ ವಿರುದ್ಧದ ಮಕ್ಕಳ ಲೈಂಗಿಕ ಹಗರಣದ ವಿಷಯದಲ್ಲಿ ತಮ್ಮನ್ನು ಸುಮ್ಮನಿರಲು ರಾಜ್ಯ ಸರ್ಕಾರದ ಪ್ರಭಾವಿ ಮಂತ್ರಿಯೊಬ್ಬರು ತಮಗೆ 3 ಕೋಟಿ ರೂಪಾಯಿಗಳ ಆಮಿಷ ಒಡ್ಡಿದ್ದರು. ಆದರೆ ನಾವು ಆಮಿಷಕ್ಕೆ ಬಲಿಯಾಗದೇ ಸಂತ್ರಸ್ತ ಬಾಲಕಿಯರ ಪರ ನಿಂತಿದ್ದೇವೆ ಎಂದು ಒಡನಾಡಿ ಸಂಸ್ಥೆಯ ನಿರ್ದೇಶಕ ಪರಶು ಅವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ನಡೆದ ಬಹಿರಂಗ ಸಮಾರಂಭದಲ್ಲಿ ಹೇಳಿದ್ದಾರೆ.

ಮಾನ್ಯ ಪರಶು ಅವರೇ ದಯವಿಟ್ಟು ಆ ಘನತೆವೆತ್ತ ಮಂತ್ರಿಯ ಹೆಸರನ್ನು ಬಹಿರಂಗಪಡಿಸಿ. ಆ ಮಂತ್ರಿಯ ಹೆಸರನ್ನು ಹೇಳಲು ಭಯವೇ? ಅಷ್ಟೇ ಅಲ್ಲ, 3 ರಿಂದ 16 ವರ್ಷದ ಹೆಣ್ಣು ಮಕ್ಕಳ ಮೇಲೆ ಸತತ 25 ವರ್ಷಗಳಿಂದಲೂ ಸ್ವಾಮೀಜಿ ಲೈಂಗಿಕ ಕಿರುಕುಳ ನೀಡುತ್ತಿದ್ದರು ಎಂಬ ಆಘಾತಕಾರಿ ವಿಷಯವನ್ನು ಬಹಿರಂಗಪಡಿಸಿದ್ದೀರಿ. ಇದರ ಸತ್ಯ–ಸತ್ಯಾತೆ ನ್ಯಾಯಾಂಗ ತನಿಖೆಯಾಗಲಿ. ಸರ್ಕಾರ ಈ ಕೂಡಲೇ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಿ. ಈ ಮಠದ ಮತ್ತು ಸ್ವಾಮೀಜಿಯ ಬಂಡವಾಳ ಇಡೀ ದೇಶಕ್ಕೆ ತಿಳಿಯಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು.

ಮಾಲಿನ್ಯ ನಿಯಂತ್ರಣಕ್ಕೆ ಕಡಿವಾಣ ಅಗತ್ಯ



ಮಾನ್ಯರೆ,

ದೆಹಲಿಯಲ್ಲಿ ಪ್ರಾಣವಾಯು ವಿಷ ವಾಯುವಾಗಿ ಬದಲಾಗುತ್ತಿದೆ. ರಾಜಧಾನಿಯ ಜನರನ್ನು ಈ ಮಾಲಿನ್ಯ ಉಸಿರುಗಟ್ಟಿಸುತ್ತಿದೆ. ಇಲ್ಲಿ ಮಾಲಿನ್ಯ ಪ್ರಮಾಣ ದಿನದಿಂದ ದಿನಕ್ಕೆ ಏರುಗತಿಯತ್ತ ಸಾಗುತ್ತಿದೆ. ಈ ಮೂಲಕ ಜನರನ್ನು ಈ ಗಾಳಿ ಗೋಳೊಯ್ದು ಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಈ ಮಾಲಿನ್ಯದಿಂದ ಮಕ್ಕಳು ಮತ್ತು ವೃದ್ಧರು ಹೆಚ್ಚು ಬಾಧಿತರಾಗಿದ್ದಾರೆ. ಕೆಲ ಹೃದಯ ಸಂಬಂಧಿ ಕಾಯಿಲೆ ಉಳ್ಳವರು ಉಸಿರಾಡಲು ತೊಂದರೆ ಅನುಭವಿಸುತ್ತಿದ್ದಾರೆ. ಮುಂದಿನ ಕೆಲವು ವಾರಗಳವರೆಗೆ ದೆಹಲಿಯ ಗಾಳಿ ಇನ್ನಷ್ಟು ವಿಷವಾಗಿ ಬದಲಾಗುವ ಸಾಧ್ಯತೆ ಮತ್ತಷ್ಟು ಹೆಚ್ಚು ಎಂಬ ತಜ್ಞರ ಎಚ್ಚರಿಕೆ, ಜನರ ಆರೋಗ್ಯ ಮತ್ತಷ್ಟು ವಿಷಮಿಸುವ ಸಾಧ್ಯತೆ ಬಹಳಷ್ಟಾಗಬಹುದೆಂಬ ಆತಂಕ ಗಾಬರಿ ತರುವ ವಿಚಾರವಾಗಿದೆ. ಈ ವಿಷಕಾರಿ ಗಾಳಿ ಅಥವಾ ವಾಯುಮಾಲಿನ್ಯ ಕುಸಿತ ಕಾಣಿಸಿಕೊಳ್ಳುತ್ತಿರುವುದು ಜನರಲ್ಲಿ ಹಲವು ರೋಗಗಳಿಗೆ ಕಾರಣವಾಗಿವೆ. ಉಸಿರಾಡಲು ಶುದ್ಧ ಗಾಳಿ ಸೇವನೆ ಸಿಗದಿರುವುದಕ್ಕೆಮನುಷ್ಯನ ಶ್ವಾಸಕೋಶದ ಮೇಲೆ ನೇರವಾಗಿ ವೈರಾಣಗಳು ದಾಳಿ ಇಡುತ್ತಿವೆ. ಶೀತ, ಜ್ವರ, ಕೆಮ್ಮು ಪ್ರತಿ ಮನೆಯ ಬಾಗಿಲು ತಟ್ಟುತ್ತಿದೆ. ಅಲ್ಲದೆ ಈ ವಿಷಕಾರಿ ಗಾಳಿ ಮಕ್ಕಳ ಮೇಲೆ ಪ್ರಭಾವ ಬೀರುತ್ತಿರುವುದು ದೆಹಲಿಗರನ್ನು ಹೈರಣಾಗಿಸಿದೆ.

ಇದಕ್ಕೆಲ್ಲಾ ಕಾರಣ ದೇಶದೆಲ್ಲೆಡೆಯಿಂದ ಬರುವ ವಲಸಿಗರಿಂದಾಗಿ ದೆಹಲಿ ಇಂದು ಕಲುಷಿತ ಮಹಾನಗರವಾಗಿ ಮಾರ್ಪಾಡಾಗುತ್ತಿದೆ. ಅಲ್ಲದೆ ದೆಹಲಿ ಸುತ್ತಮುತ್ತಲಿರುವ ಪ್ರದೇಶಗಳಲ್ಲಿ ರೈತರು ಕೃಷಿ ಕೊಳೆ ವಸ್ತುಗಳನ್ನು ಸುಡುತ್ತಿರುವುದೇ ಮಾಲಿನ್ಯಕ್ಕೆ ಮತ್ತೊಂದು ಕಾರಣವಾಗಿದೆ. ಇದರ ಜೊತೆಗೆ ದೆಹಲಿಯಲ್ಲಿ ವಾಹನಗಳ ದಟ್ಟಣೆ ದಿನೇ ದಿನೆ ತುಂಬಾನೇ ಹೆಚ್ಚಾಗುತ್ತಲೇ ಇದೆ. ಭಾರೀ ಆರೋಗ್ಯ ಸಮಸ್ಯೆಗಳನ್ನು ತಂದಿಟ್ಟಿರುವ ವಾಯುಮಾಲಿನ್ಯ ನಿಯಂತ್ರಣಕ್ಕೆ ಹೈಡ್ರೋಜನ್ ಆಧಾರಿತ ಇಂಧನ ತಂತ್ರಜ್ಞಾನದ ಪರಿಹಾರ ಸೂತ್ರ ಕಂಡುಕೊಳ್ಳುವುದು ಅವಶ್ಯಕವಾಗಿದೆ. ಅಲ್ಲದೇ ದೆಹಲಿ ಮಹಾನಗರದ ಇಂದಿನ ಪರಿಸ್ಥಿತಿಯ ವಿಕೋಪತೆಯನ್ನು ದೇಶದ ಉಳಿದ ನಗರಗಳು ಅರಿತು ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಈಗಿನಿಂದಲೇ ತೆಗೆದುಕೊಳ್ಳುವುದು ತುರ್ತು ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಸಮ ಸಮಾಜ ನಿರ್ಮಾಣ ಕನಸಾ...!?

ಸಮ ಸಮಾಜ ನಿರ್ಮಾಣದ ಹೋರಾಟದಲ್ಲಿ ಈ ವಾರಕ್ಕೆ ವಿಶೇಷ ಮಹತ್ವವಿದೆ. ಡಿಸೆಂಬರ್ ಆರು(6) ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣದ ದಿನ. ಡಿಸೆಂಬರ್ ಹತ್ತನೇ(10) ತಾರೀಖು ನಮ್ಮ ಸಂವಿಧಾನ ಅತ್ಯಂತ ಪ್ರಾಶಸ್ತ್ಯವನ್ನಿತ್ತಿರುವ ಮಾನವ ಹಕ್ಕುಗಳ ಸ್ಥಾಪನೆಗಾಗಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ (ಜನರಲ್ ಅಸೆಂಬ್ಲಿ)–1948ರಲ್ಲಿ ಮಾನವ ಹಕ್ಕುಗಳ ರಕ್ಷಣೆಗಾಗಿ ಸಾರ್ವತ್ರಿಕ ಘೋಷಣೆಯನ್ನು ಅಂಗೀಕರಿಸಿದ ದಿನ. ಈ ವರ್ಷದ ಮಾನವ ಹಕ್ಕುಗಳ ದಿನಕ್ಕೆ ಇರುವ ಮತ್ತೊಂದು ವೈಶಿಷ್ಟ್ಯವೆಂದರೆ ಈ ದಿನಕ್ಕೆ 75 ವರ್ಷ ತುಂಬಿರುವುದು. ಮಾನವ ಹಕ್ಕುಗಳ ರಕ್ಷಣೆ ಎಂದರೆ ಮಾನವ ಸಮಾಜದಲ್ಲಿರುವ ಎಲ್ಲ ಜನ ಸಮುದಾಯಗಳ ಮೂಲಭೂತ ಹಕ್ಕುಗಳನ್ನು ಗುರುತಿಸಿ, ಗೌರವಿಸುವ ಸಾಮಾಜಿಕ–ಸಾಂಸ್ಕೃತಿಕ ಪರಿಸರದ ನಿರ್ಮಾಣ. ಇದನ್ನೇ ನಾವು ಬಹುತ್ವ ಎನ್ನುವುದು. ಸಮಾಜ ಸಮರೂಪವಾದ ಒಂದು ವ್ಯವಸ್ಥೆಯಲ್ಲ. ಅಲ್ಲಿ ನಾವು ಕಾಣುವುದು ವೈವಿಧ್ಯತೆಯನ್ನು. ಸಮಾಜದ ಎಲ್ಲ ಪ್ರಜೆಗಳಿಗೂ ಸಮಾನ ಅವಕಾಶಗಳನ್ನು ಪಡೆಯುವ, ಅವುಗಳನ್ನು ವಾಸ್ತವದಲ್ಲಿ ಅನುಭವಿಸುವ ಹಕ್ಕು ಇರಬೇಕು ಎಂಬುದೇ ಸಂವಿಧಾನದ ಆಶಯ.


ಭಾರತದ ಸಂವಿಧಾನದ ಪ್ರಸ್ತಾವನೆ ಆರಂಭವಾಗುವುದೇ 'ಭಾರತೀಯ ಜನತೆಯಾದ ನಾವು' ಎಂಬ ವಾಕ್ಯದಿಂದ. 'ನಾವು...' ಎನ್ನುವ ಪದದಲ್ಲೇ ಬಹುತ್ವದ ಕಲ್ಪನೆ ಅಡಕವಾಗಿದೆ. ಅದು ಭಾರತೀಯ ಸಮಾಜದ ಬಹು ಜನಸಮುದಾಯಗಳನ್ನು ಸೂಚಿಸುವ ಪರಿಕಲ್ಪನೆ. ವಿಭಿನ್ನ ಧರ್ಮ– ಜಾತಿ–ವರ್ಗ– ಲಿಂಗ– ಭಾಷೆ– ಪ್ರಾಂತ್ಯಗಳೊಡನೆ ಗುರುತಿಸಿಕೊಂಡ, ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಗಳನ್ನು ಹೊಂದಿರುವ ಈ ಎಲ್ಲ ಜನರಿಗೆ ಸಮಾನ ಹಕ್ಕುಗಳನ್ನು ನೀಡಿ, ಅದನ್ನು ಅನುಭವಿಸಲು ಯಾವುದೇ ಅಡ್ಡಿ– ಆತಂಕಗಳು ಬಾರದಂತಹ ಸುರಕ್ಷಿತ ಬದುಕನ್ನು ನೀಡುವುದು ನಮ್ಮ ಸಂವಿಧಾನ ನಮಗೆ ನೀಡಿರುವ ಹಕ್ಕು.

ಸುರಕ್ಷಿತ ಬದುಕಿನ ಆಧಾರವೇ ಮಾನವ ಹಕ್ಕುಗಳು. ಈ ಬಾರಿಯ ಮಾನವ ಹಕ್ಕುಗಳ ದಿನಾಚರಣೆಯ ಘೋಷ ವಾಕ್ಯ–'ಘನತೆ, ಸ್ವಾತಂತ್ರ್ಯ ಮತ್ತು ಎಲ್ಲರಿಗೂ ನ್ಯಾಯ'. ಆದರೆ ನನ್ನ ದೃಷ್ಟಿಯಲ್ಲಿ ಈ ಮೂರು ಆಶಯಗಳೂ ಸಾರ್ವಕಾಲಿಕವಾದುವು. ಸಾಮಾನ್ಯವಾಗಿ ನಾವು ಜೀವನ ಮತ್ತು ಸ್ವಾತಂತ್ರ್ಯದ ಹಕ್ಕು, ದಾಸ್ಯ ಮತ್ತು ಹಿಂಸೆಯಿಂದ ಮುಕ್ತಿ, ಅಭಿವ್ಯಕ್ತಿ ಸ್ವಾತಂತ್ರ್ಯ, ಕೆಲಸ ಮಾಡುವ ಮತ್ತು ಶಿಕ್ಷಣ ಪಡೆಯುವ ಹಕ್ಕು ಮತ್ತು ತಾರತಮ್ಯ ರಹಿತ ಬದುಕು–ಇವುಗಳನ್ನು ಮೂಲಭೂತ ಮಾನವ ಹಕ್ಕುಗಳೆಂದು ಪರಿಗಣಿಸಿದರೂ ಅವುಗಳ ವ್ಯಾಪ್ತಿ ವಿಸ್ತೃತವಾಗುತ್ತಲೇ ಇದೆ. ಇದೇ ಬಹುತ್ವದ ಲಕ್ಷಣ. ಸಮಾಜ ಬದಲಾಗುತ್ತ ಹೋದ ಹಾಗೆಲ್ಲ ಹಕ್ಕುಗಳಿಗೆ ಹೊಸ– ಹೊಸ ಆಯಾಮಗಳು ಬರುತ್ತವೆ, ಅವುಗಳನ್ನು ಸ್ವೀಕರಿಸಿ ಸಮಾನತೆಯ ತತ್ವಾಚರಣೆಗಳಿಗೆ ಬದ್ಧವಾದ ಬದುಕನ್ನು ನಡೆಸಲು ಅವಕಾಶ ಕಲ್ಪಿಸುವುದೇ ನಮ್ಮ ಸಂವಿಧಾನದ ಆಶಯ.

> ಭಾರತದ ಸಂವಿಧಾನದ ಪ್ರಸ್ತಾವನೆ ಆರಂಭವಾಗುವುದೇ 'ಭಾರತೀಯ ಜನತೆಯಾದ ನಾವು' ಎಂಬ ವಾಕ್ಯದಿಂದ. 'ನಾವು...' ಎನ್ನುವ ಪದದಲ್ಲೇ ಬಹುತ್ವದ ಕಲ್ಪನೆ ಅಡಕವಾಗಿದೆ. ಅದು ಭಾರತೀಯ ಸಮಾಜದ ಬಹು ಜನಸಮುದಾಯಗಳನ್ನು ಸೂಚಿಸುವ ಪರಿಕಲ್ಪನೆ. ವಿಭಿನ್ನ ಧರ್ಮ– ಜಾತಿ–ವರ್ಗ– ಲಿಂಗ– ಭಾಷೆ– ಪ್ರಾಂತ್ಯಗಳೊಡನೆ ಗುರುತಿಸಿಕೊಂಡ, ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಗಳನ್ನು ಹೊಂದಿರುವ ಈ ಎಲ್ಲ ಜನರಿಗೆ ಸಮಾನ ಹಕ್ಕುಗಳನ್ನು ನೀಡಿ, ಅದನ್ನು ಅನುಭವಿಸಲು ಯಾವುದೇ ಅಡ್ಡಿ–ಆತಂಕಗಳು ಬಾರದಂತಹ ಸುರಕ್ಷಿತ ಬದುಕನ್ನು ನೀಡುವುದು ನಮ್ಮ ಸಂವಿಧಾನ ನಮಗೆ ನೀಡಿರುವ ಹಕ್ಕು.

ಬಹು ಗುಂಪುಗಳು ಹಾಗೂ ಬಹು ಸಂಸ್ಕೃತಿಗಳು–ಇವೆರಡೂ ಭಾರತೀಯ ಸಮಾಜದ ಮೂಲ ಲಕ್ಷಣಗಳು. ಆದರೆ ಶತಮಾನಗಳಿಂದ ಈ ಸಮಾಜದಲ್ಲಿ ಅವಕಾಶ ಮತ್ತು ಅಧಿಕಾರಗಳೆರಡೂ ಜಾತಿ ಶ್ರೇಣಿಯಲ್ಲಿ ಮೇಲಿನ ಸ್ತರಗಳಲ್ಲಿ ಇರಿಸಲ್ಪಟ್ಟ ಜಾತಿಗಳು, ಭೂ ಮಾಲೀಕರು ಮತ್ತು ಅಕ್ಷರ ಸಂಸ್ಕೃತಿಯನ್ನು ಕರಗತ ಮಾಡಿಕೊಳ್ಳಲು ಅವಕಾಶ ಪಡೆದವರು–ಇವರ ಸ್ವತ್ತಾಗಿವೆ. ಆದ್ದರಿಂದ ಸಮಾನತೆ ಮತ್ತು ಸ್ವಾತಂತ್ರ್ಯ–ಇವೆರಡನ್ನೂ ಇಂದಿಗೂ ಸಾಧಿಸಲಾಗಿಲ್ಲ. ಸಂವಿಧಾನ ಅಂಗೀಕಾರವಾಗುವ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು, ಪ್ರಜಾಪ್ರಭುತ್ವವನ್ನು, ರಾಜಕೀಯ ಆಯಾಮದಿಂದ ಮಾತ್ರ ನೋಡುವುದನ್ನು ಬಿಟ್ಟು ಸಾಮಾಜಿಕ ಸಮತೆಯನ್ನು ಸಾಧಿಸುವ ದೃಷ್ಟಿಕೋನದಿಂದ ನೋಡಿದಾಗ ಮಾತ್ರ ಅದಕ್ಕೆ ಅರ್ಥ ಬರುವುದು ಎಂದು ಹೇಳಿದ ಮಾತುಗಳು ಮಾನವ ಹಕ್ಕುಗಳ ಚರ್ಚೆಗೆ ಆಧಾರ ವಾಗಬೇಕೇ ಹೊರತು ದೇಶದ ಸಾಧನೆಯನ್ನು ಕೇವಲ ಆರ್ಥಿಕ ನೆಲೆಗಟ್ಟಿನಲ್ಲಿ ವೈಭವೀಕರಿಸುವ ಚೌಕಟ್ಟಿನಲ್ಲಿ ಅಲ್ಲ ಎಂಬುದನ್ನು ಎಲ್ಲರೂ ಎಲ್ಲಿಯವರೆಗೂ ಮನಗಾಣುವುದಿಲ್ಲವೋ ಅಲ್ಲಿಯವರೆಗೂ ಸ್ವಾತಂತ್ರ್ಯ–ಸಮಾನತೆಗಳ ವ್ಯಾಖ್ಯಾನ ಖಾಲಿ ಎನ್ನಿಸುತ್ತದೆ.

ಇಂದು ನಾವು ಬದುಕುತ್ತಿರುವುದು ಬಹು ಶ್ರೇಣಿಗಳಲ್ಲಿ ವಿಭಜಿತವಾಗಿರುವ ಸಮಾಜದಲ್ಲಿ. ಸಂವಿಧಾನ ಸಮಾನ ಅವಕಾಶಗಳನ್ನು ಎಲ್ಲರಿಗೂ ನೀಡಿದ್ದರೂ ಈ ಸಮಾಜದ ಬೇರುಗಳಲ್ಲಿ ಸುತ್ತಿಕೊಂಡಿರುವ ಜಾತಿ, ವರ್ಗ ಮತ್ತು ಲಿಂಗ ಆಧಾರಿತ ಪೂರ್ವಾಗ್ರಹಗಳು ಹಾಗೂ ತಾರತಮ್ಯವನ್ನು ಪೋಷಿಸಿಕೊಂಡು ಬರುತ್ತಿರುವ ಮೌಲ್ಯಾಚರಣೆಗಳು ಸಮಾನತೆಯನ್ನು ಸಮಾನ ರೀತಿಗಳಲ್ಲಿ ಬಳಸಿಕೊಳ್ಳಲು ಅಡ್ಡಿಗಳನ್ನು ಒಡ್ಡುತ್ತಿವೆ. 'ಸಮಾನತೆಯ ಪಂದ್ಯ ನಡೆಯುತ್ತಿರುವುದು ಅಸಮಾನರ ನಡುವೆ' ಎಂದು ಸಮಾಜಶಾಸ್ತ್ರಜ್ಞರು ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು.



ಜಾಗತೀಕರಣದ ಯುಗ ಆರಂಭವಾದಾಗಿನಿಂದ ಭಾರತ ಮತ್ತು ಅಭಿವೃದ್ಧಿಯನ್ನು ಹೊಂದಿದ ದೇಶಗಳ ನಡುವೆ ಇದ್ದ ಅಸಮಾನತೆ ಕಡಿಮೆಯಾಗುತ್ತಿದ್ದು ದೇಶ ಆರ್ಥಿಕ ಪ್ರಗತಿಯ ಪಥದಲ್ಲಿ ವೇಗವಾಗಿ ಸಾಗುತ್ತಿದೆ ಎನ್ನುವುದು ಎಷ್ಟು ಸತ್ಯವೋ, ದೇಶದ ಒಳಗೆ ಉಳ್ಳವರ ಮತ್ತು ಸಮಾಜದ ಅನುಕೂಲಗಳಿಂದ ವಂಚಿತರಾದವರ ನಡುವಣ ಅಂತರಗಳೂ ಹೆಚ್ಚುತ್ತಿವೆ ಎನ್ನುವುದೂ ಅಷ್ಟೇ ಸತ್ಯ. ಸಾಮಾಜಿಕ ಜವಾಬ್ದಾರಿಗಳು ಸಾರ್ವಜನಿಕ ವಲಯದಿಂದ ಖಾಸಗಿ ವಲಯಕ್ಕೆ ವರ್ಗಾವಣೆಯಾಗುತ್ತಾ ಹೋಗುತ್ತಿದ್ದು ಸಮಾಜದ ತಳ ಸ್ತರಗಳಲ್ಲಿರುವ ವರ್ಗಗಳು ಇದರ ಪರಿಣಾಮವನ್ನು ಅತ್ಯಂತ ತೀವ್ರವಾಗಿ ಎದುರಿಸುತ್ತಿವೆ. ಕಳೆದ ಎರಡು ದಶಕಗಳಲ್ಲಿ ಬೆಳೆಯುತ್ತಿರುವ ಮೇಲ್–ಮಧ್ಯಮ ವರ್ಗ ಮತ್ತು ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಪಸರಿಸುತ್ತಿರುವ ಬಂಡವಾಳ ಶಾಹಿ ವಲಯ ಸಾಮಾಜಿಕ ಬದಲಾವಣೆಯ ಬಹು ಪಾಲು ಅನುಕೂಲಗಳನ್ನು ಪಡೆಯುತ್ತಿವೆ.

ನಮ್ಮದು ಬಹು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಸಮಾಜವಾದ್ದರಿಂದ ಸಂಸ್ಕೃತಿ ಎನ್ನುವ ಪದವನ್ನು ಬಳಸುವಾಗಲೂ ಬಹು ಎಚ್ಚರಿಕೆಯಿಂದ ಇರಬೇಕು. ಸಾಮಾನ್ಯವಾಗಿ ಸಂಸ್ಕೃತಿ ಎನ್ನುವ ಭಾವನೆಯನ್ನು ಅದು ಏಕರೂಪಿಯಾದುದೇನೋ ಎನ್ನುವಂತೆ ಬಿಂಬಿಸಲಾಗುತ್ತದೆ. ಆದರೆ ಅದು ಅನೇಕ ಸಂದರ್ಭಗಳಲ್ಲಿ ಸಮಾಜದ ಅನುಕೂಲಗಳನ್ನು ಪಡೆದ, ಸಾರ್ವಜನಿಕ ಗೋಚರತೆಯಿರುವ ವರ್ಗಗಳ ಜೀವನ ಶೈಲಿ, ನಂಬಿಕೆಗಳು, ಆಚರಣೆಗಳು ಭಾಷಾ ಶೈಲಿ ಮುಂತಾದುವನ್ನು ಬಿಂಬಿಸುತ್ತದೆ. ಆದರೆ ಬಹುತ್ವದ ಪರಿಕಲ್ಪನೆಯಲ್ಲಿ ಅನೇಕ ಸಂಸ್ಕೃತಿಗಳು ಸೇರಿವೆ. ಅವುಗಳತ್ತಲೂ ಗಮನ ಹರಿಸಬೇಕಾದ್ದು ಅವಶ್ಯ. ಏಕೆಂದರೆ ಮುಖ್ಯವಾಹಿನಿ ಸಂಸ್ಕೃತಿ ಎಂದು ಬಿಂಬಿಸಲ್ಪಡುವ ಸಂಸ್ಕೃತಿಯಲ್ಲಿ ಉಪ ಸಂಸ್ಕೃತಿಗಳ ಎಳೆಗಳೂ ಸೇರಿವೆ, ಎನ್ನುವುದನ್ನು ಮನಗಾಣಬೇಕು. ವಿಶೇಷವಾಗಿ ಸಮಾಜ ವಿಜ್ಞಾನಗಳು ಈ ವಿಷಯದತ್ತ ಗಮನಹರಿಸಬೇಕಾಗಿದೆ.

ಭಾರತೀಯ ಸಂವಿಧಾನ ನಮ್ಮ ಸಮಾಜದ ಬಹುತ್ವ ಗುಣವನ್ನು ರಕ್ಷಿಸಲು ಎಷ್ಟು ಮಹತ್ವವನ್ನು ನೀಡಿದೆಯೋ ಮಾನವ ಹಕ್ಕುಗಳ ರಕ್ಷಣೆಗೂ ಅಷ್ಟೇ ಪ್ರಾಶಸ್ತ್ಯವನ್ನು ನೀಡಿದೆ. ಆದರೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವೇ ನೀಡಿರುವ ಅಂಕಿ–ಅಂಶಗಳ ಪ್ರಕಾರ 2020–2021ರಲ್ಲಿ ಸುಮಾರು 75,000 ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳು ದಾಖಲಾಗಿದ್ದರೆ, 2021–2022ರ ಆರಂಭದಲ್ಲಿಯೇ 1,00,000ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಸಂವಿಧಾನದ ಆಶಯಗಳಾದ ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತ್ವದ ಭಾವನೆಗಳಿಗೆ ಧಕ್ಕೆಯುಂಟು ಮಾಡುವಂಥ ಘಟನೆಗಳು ನಿರಂತರವಾಗಿ ಆಗಾಗ್ಗೆ–ಅಲ್ಲಲ್ಲಿ ನಡೆಯುತ್ತಲೇ ಇವೆ. ಜಾತಿಯ ಹೆಸರಿನಲ್ಲಿ ನಡೆಯುತ್ತಿರುವ ಕೊಲೆ ಮತ್ತು ವೈಯಕ್ತಿಕ ಅಥವಾ ಸಾರ್ವಜನಿಕ ಸಂಪನ್ಮೂಲಗಳ ನಾಶ; ಅಸ್ಪೃಶ್ಯತೆಯಂಥ ಹೀನ ಪದ್ಧತಿಯನ್ನು ಇಂದಿಗೂ ಅನೇಕ ಕಡೆಗಳಲ್ಲಿ ಆಚರಿಸಿಕೊಂಡು ಬರುತ್ತಿರುವುದು; ಮಕ್ಕಳ ಮತ್ತು ಮಹಿಳೆಯರ ಸಾಗಾಣಿಕೆ; ಹಿರಿಯ ನಾಗರಿಕರು ಮತ್ತು ಲೈಂಗಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು; ಅಂತರ್ಜಾತಿ ವಿವಾಹವಾದರು ಎಂಬ ಕಾರಣಕ್ಕಾಗಿ ಸ್ವತಃ ಪೋಷಕರಿಂದಲೇ ನಡೆಯುವ ಹತ್ಯೆಗಳು; ಬಾಲ ಕಾರ್ಮಿಕ ಪದ್ಧತಿಯ ಮುಂದುವರೆ ಯುವಿಕೆ –ಇವೇ ಮುಂತಾದ ಮಾನವ ಹಕ್ಕುಗಳ ಉಲ್ಲಂಘನೆಗಳು ಸ್ವಾತಂತ್ರ್ಯದ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತಿವೆ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಹಾಗೂ ಕುಟುಂಬದಿಂದ ಹಿಡಿದು ಸಮಾಜದ ಎಲ್ಲ ಸಂಸ್ಥೆಗಳಲ್ಲಿ ಹೋರಾಟದ ಹಾದಿಯನ್ನು ಆಯ್ಕೆ ಮಾಡಿಕೊಳ್ಳುವವರಿಗಿಂತ ಹೊಂದಾಣಿಕೆಯ ಮಾರ್ಗವನ್ನು ಅನುಸರಿಸುವವರಿಗೇ ಅವಕಾಶಗಳ ಲಭ್ಯತೆ–ಇವು ಕೂಡ ಮಾನವ ಹಕ್ಕುಗಳ ಉಲ್ಲಂಘನೆಯ ಮತ್ತೊಂದು ಮುಖ. ಭ್ರಷ್ಟಾಚಾರವಂತೂ ಎಷ್ಟು ಜನರ ಮಾನವ ಹಕ್ಕುಗಳಿಗೆ ಅಡ್ಡಿ ಮಾಡಿದೆಯೋ ಎಣಿಕೆ ಮಾಡಲು ಸಾಧ್ಯವೇ ಆಗದಂಥ ಪರಿಸ್ಥಿತಿಯನ್ನು ನಮ್ಮ ಸಮಾಜ ತಲುಪುತ್ತಿದೆ.

ಸಂವಿಧಾನ, ಮಾನವ ಹಕ್ಕುಗಳು ಮತ್ತು ಬಹುತ್ವ ತತ್ವದ ರಕ್ಷಣೆ–ಇವು ಮೂರೂ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುವಂಥ ವ್ಯವಸ್ಥೆಗಳು. ಇವುಗಳ ಸ್ಮರಣೆ ಹಾಗೂ ಆಚರಣೆ ಯಾವುದೇ ಒಂದು ದಿನಕ್ಕೆ ಸೀಮಿತವಾಗದೆ ದೇಶದ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ–ರಾಜಕೀಯ ಬದುಕಿನಲ್ಲಿ ಅಂತರ್ಗತವಾದಾಗ ಮಾತ್ರ ಸಮ ಸಮಾಜದ ನಿರ್ಮಾಣದ ಕನಸಿನ ಪಥದಲ್ಲಿ ಬಹು ದೂರ ಸಾಗಲು ಸಾಧ್ಯವಾಗುಬಹುದೇನೋ.

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪದವೀಧರ ದಿನಾಚರಣೆ

ಕಾಲೇಜಿನ 656 ವಿದ್ಯಾರ್ಥಿಗಳಿಗೆ ನಾನಾ ಪದವಿ ಪ್ರದಾನ

- ಪ್ರಸ್ತುತ ಕಾಲಮಾನದಲ್ಲಿ ಮಹಿಳೆಯರ ಸಾಧನೆಗೆ ಸಾಕಷ್ಟು ಮಾರ್ಗಗಳಿವೆ
- ವಿದ್ಯೆ ಮನುಷ್ಯನಿಗೆ ವಿಕಾಸ, ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ
- ಖ್ಯಾತ ಸಾಹಿತಿ ಡಾ.ದೊಡ್ಡರಂಗೇಗೌಡರಿಂದ ವಿದ್ಯಾರ್ಥಿಗಳಿಗೆ ಕಿವಿಮಾತು



ಮೈಸೂರು, ಡಿ.7(ಎಂಟಿವೈ)–ಮೈಸೂರು ಸರಸ್ವತಿ ಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ 14ನೇ ಪದವೀಧರರ ದಿನಾಚರಣೆಯಲ್ಲಿ 89 ಸ್ನಾತಕೋತ್ತರ ಹಾಗೂ 567 ಪದವಿ ಸೇರಿದಂತೆ 656 ಮಂದಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು.

ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣ ದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾಹಿತಿ ಡಾ.ದೊಡ್ಡರಂಗೇಗೌಡರು ವಿದ್ಯಾರ್ಥಿನಿಯರಿಗೆ ವಿವಿಧ ಪದವಿ ಪ್ರದಾನ ಮಾಡಿ, ಪ್ರಶಸ್ತಿ ವಿಜೇತರಿಗೆ ಪದಕ ಹಾಗೂ ಪ್ರಮಾಣಪತ್ರ ವಿತರಿಸಿದರು. ಇದೇ ವೇಳೆ ಸಾಹಿತಿ ಡಾ.ದೊಡ್ಡರಂಗೇಗೌಡರು ಮಾತನಾಡಿ, ಸ್ವಾತಂತ್ರ್ಯಪೂರ್ವ ದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣದ ಹಕ್ಕು ಇರಲಿಲ್ಲ. ಹಲವು ಕಟ್ಟುಪಾಡುಗಳಿಂದ ಹೆಣ್ಣು ಮಕ್ಕಳು ತತ್ತರಿಸಿದ್ದರು. ಇಂತಹ ಸಂದರ್ಭದಲ್ಲಿ ಸಮಾಜ ಸುಧಾರಕರಾದ ರಾಜಾರಾಮ್ ಮೋಹನ್‌ರಾಯ್ ಹೆಣ್ಣು ಮಕ್ಕಳಿಗೆ ಪಾಠ ಹೇಳಿಕೊಡಲು ಹೋಗಿದ್ದಾಗ, ಅವರ ಮೇಲೆ ಸಗಣಿ ನೀರನ್ನು ಹಾಕುತ್ತಿ ದ್ದರು. ಇದಾದ ಬಳಿಕ ಸಮಾಜ ಸುಧಾರಕ ಈಶ್ವರಚಂದ್ರ ವಿದ್ಯಾಸಾಗರ್ ಪಾಠ ಹೇಳಿಕೊಡಲು ಶಾಲೆಗೆ ಹೋಗುವ ಸಂದರ್ಭದಲ್ಲಿ ಮುಳ್ಳನ್ನು ಹಾದಿಗೆ ಸುರಿಯುತ್ತಿದ್ದರು. ಆಗಿನ ಕಾಲಕ್ಕೆ ಹೋಲಿಸಿದರೆ ಇಂದಿನ ಕಾಲದ ನಾರಿಯರಿಗೆ ಸಾಕಷ್ಟು ಅವಕಾಶವಿದೆ. ಸಾಧನೆ ಮಾಡಲು ನಾನಾ ಮಾರ್ಗ ವಿದೆ. ಹಾಗಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ಮಹಿಳೆಯರನ್ನು ಇಂದು ಕಾಣುತ್ತಿದ್ದೇವೆ ಎಂದರು.

ಪ್ರಾಚೀನ ರಾಷ್ಟ್ರವಾಗಿರುವ ಭರತಖಂಡದಲ್ಲಿ 5 ಸಾವಿರ ವರ್ಷ ದಿಂದಲೂ ಮಾನವ ಕಾಲ ಕಾಲಕ್ಕೆ ಭೌಧಿಕವಾಗಿ ಏಳಿಗೆ ಸಾಧಿಸುತ್ತಾ ಬಂದಿದ್ದಾನೆ. ಬೌಧಿಕ ರೂಪಾಂತರಕ್ಕೆ ಪೌಷ್ಟಿಕ ಆಹಾರ, ತಿಳುವಳಿಕೆ ಹಾಗೂ ಮಾನಸಿಕ ಮಾರ್ಪಾಡು ಮುಖ್ಯ. ಹಲವು ಸಂಗತಿಗಳನ್ನು ನೆರೆ ಹೊರೆಯ ಜನರಿಂದ ನೋಡಿ ಕಲಿಯಬೇಕು. ಮತ್ತೆ ಹಲವು ವಿಚಾರವನ್ನು ಬಲ್ಲವರಿಂದ ಕೇಳಿ ತಿಳಿಯಬೇಕು. ಇನ್ನಷ್ಟು ವಿಚಾರವನ್ನು ಓದಿನಿಂದ ಕಲಿಯಬೇಕು. ಓದು ಮಾನವನ ವಿಕಾಸ ಹಾಗೂ ವ್ಯಕ್ತಿತ್ವ ಬೆಳೆಸುತ್ತದೆ. ಜ್ಞಾನದ ಸಂಪಾದನೆಗೆ ಮಿತಿ ಇಲ್ಲ. ಜ್ಞಾನಾಂಬರ ವಿಶಾಲ ಹಾಗೂ ವಿಸ್ತಾರವಾದುದ್ದಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಸರಿಯಾದ ಜ್ಞಾನ ಸಂಚಯ ಆಗಬೇಕು. ಜ್ಞಾನದ ಕಡಲಲ್ಲಿ ಘೋರ ತಪ್ಪಸ್ಸು ಮಾಡಿ ಜ್ಞಾನ ಸಂಪಾದಿಸಬೇಕು. ಜ್ಞಾನ ಸಾಗರದಲ್ಲಿ ಕಠಿಣ ಶ್ರಮ ಪಟ್ಟಾಗ ಒಂದು ಬೊಗಸೆಯಷ್ಟು ಮಾತ್ರ ಜ್ಞಾನ ಸಂಪಾದಿಸಬಹುದು. ಹಾಗಾಗಿ ವಿದ್ಯಾರ್ಥಿಗಳಿಗೆ ಅಧ್ಯಯನವೇ ಅತ್ಯಂತ ಮುಖ್ಯವಾಗಬೇಕು. ಜ್ಞಾನ ಸಂಪಾದಿಸಲು ಸುಧೀರ್ಘ ಪಯಣ, ಕಠಿಣ ವ್ರತ ಮುಖ್ಯ. ನದಿಯ ಮೂಲ ಹುಡುಕಿದ ಹಾಗೆ, ಹಿಮಾಲಯ ಪರ್ವತ ಏರಿದಂತೆ ಹಾಗೂ ಸಹರಾ ಮರುಭೂಮಿ ದಾಟಲು ಕಷ್ಟಪಡುವಂತೆ ಜ್ಞಾನ ಸಂಪಾದಿಸಲು ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಪಡಬೇಕು ಎಂದು ಕಿವಿಮಾತು ಹೇಳಿದರು. ಕೆಲ ವರ್ಷದಿಂದೀಚೆಗೆ ವಾಚನಾಭಿವೃದ್ಧಿ ಹೆಚ್ಚಿದ ಕಾರಣ ಪ್ರಕಟಗೊಳ್ಳುವ ಪುಸ್ತಕ ಸಂಖ್ಯೆ ಹೆಚ್ಚಾಯಿತು. 8 ದಿಕ್ಕಿನ ಜ್ಞಾನದ ಸಾರವನ್ನು ತುಂಬುವುದೇ ಈ ಪುಸ್ತಕವಾಗಿದೆ. ಜ್ಞಾನಿಗಳ ಲಕ್ಷ್ಯವನ್ನು ಸೆಳೆಯುವ ಸೂಜಿಗಲ್ಲಿನಂತೆ ಪುಸ್ತಕ ಸೆಳೆಯುತ್ತದೆ ಎಂದು ಹೇಳಿದ ಅವರು, ಇತ್ತೀಚಿನ ದಿನಗಳಲ್ಲಿ ಜನ ಎಷ್ಟೇ ಸುಶಿಕ್ಷಿತರಾದರೂ, ಎರಡು ಪದವಿ ಪಡೆದಿದ್ದರೂ, ನಮ್ಮಲ್ಲಿ ದುಷ್ಟತನ, ದುರ್ನಡತೆ, ಅನಾಚಾರದಂತಹ ಕೃತ್ಯಗಳು ಜರುಗು ತ್ತಿವೆ. ಇದು ತಲೆ ತಗ್ಗಿಸುವ ಸಂಗತಿ ಎಂದು ವಿಷಾದಿಸಿದರು.

ನಮ್ಮ ಜ್ಞಾನ ಕೇವಲ ಪರೀಕ್ಷೆಗಷ್ಟೇ ಮೀಸಲಾಗುವುದಾದರೆ ಅದರಿಂದ ಪ್ರಯೋಜನ ಏನು? ಜೀವನದಲ್ಲಿ ನಾವು ಜ್ಞಾನವನ್ನು ಬಳಕೆ ಮಾಡಿಕೊಳ್ಳಬೇಕು. ನಾವು ಏನು ಆಗದೆ ಇದ್ದರೂ ಪರ್ವಾಗಿಲ್ಲ, ಉತ್ತಮ ಮನುಷ್ಯನಾದರೆ ಸಾಕು. ಜ್ಞಾನದ ತಿಳಿವಳಿಕೆ ಎಷ್ಟು ಮುಖ್ಯವೋ ಸುಂದರ ಹಾಗೂ ಆದರ್ಶವಾದ ಬದುಕು ಕೂಡ ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಚಿಂತಿಸಬೇಕು ಎಂದರು.

21 ವಿದ್ಯಾರ್ಥಿನಿಯರಿಗೆ ಗೌರವ: 14ನೇ ಪದವೀಧರರ ದಿನಾಚರಣೆ ಕಾರ್ಯಕ್ರಮದಲ್ಲಿ ಸ್ನಾತಕ ವಿಭಾಗದಲ್ಲಿ 567, ಸ್ನಾತಕೋತ್ತರ ವಿಭಾಗದಲ್ಲಿ 89 ವಿದ್ಯಾರ್ಥಿನಿಯರಿಗೆ ಪದವಿ ಪ್ರದಾನ ಮಾಡಲಾಯಿತು. ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 21 ವಿದ್ಯಾರ್ಥಿನಿಯನ್ನು ಗೌರವಿಸಲಾಯಿತು. ಬಿಎನಲ್ಲಿ ಅತೀ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದ ಜಿ.ಎಸ್. ಅನನ್ಯ, ಜೆ. ಚಂದನಾ, ಡಿ.ಎನ್. ಶುಭಾಶ್ರೀ, ಬಿಎಸ್‌ಸಿಯಲ್ಲಿ ಪಿ.ವಿ. ಚಂದನಾ, ರೀತು ಸಾಮ್ನೇಕರ್, ಬಿಕಾಂನಲ್ಲಿ ಕೆ.ಎಸ್.ದಿವ್ಯಾ, ಎಂ. ಅಮೃತಾ, ಟಿ.ಪಿ. ಚಂದನಾ, ಬಿಬಿಎನಲ್ಲಿ ಎ.ಕೆ. ಪೂಜಾ, ಜೆ.ಪೂಜಾ, ಟಿ.ಎಸ್.ನಿಹಾ ರಿಕಾ, ಬಿಸಿಎನಲ್ಲಿ ಎಚ್.ಎಸ್. ಪೂಜಾ, ಯು. ಐಶ್ವರ್ಯ, ಜಿ.ಎಸ್.ಪ್ರಿಯಾ, ಎಂಎ ಎಕನಾಮಿಕ್ಸ್‌ನಲ್ಲಿ ಎಸ್. ಮಾಲಾ, ಪಿ.ಸುರಭಿ, ಎಂಕಾಂನಲ್ಲಿ ಎನ್. ಸುಮನಾ, ಎಸ್. ಮನಿಷಾ, ಎಂಎಸ್ಸಿ ಕೆಮಿಸ್ಟ್ರಿಯಲ್ಲಿ ವೈ.ಜಿ. ರೋಜಾ, ರಂಬ್ಲಿನ್ ಮಸ್ಕರಾನಸ್ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಕ್ಷೇತ್ರದ ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವನ್ಯಜೀವಿ ಚಿಂತಕ ಡಾ. ಕೆ.ಉಲ್ಲಾಸ್ ಕಾರಂತ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಪ್ರಾಂಶುಪಾಲ ಡಾ. ಎಚ್.ಬಿ. ಸುರೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಎಂ.ಎನ್. ಸ್ವಾಮಿ, ಶೈಕ್ಷಣಿಕ ಡೀನ್ ಡಾ. ರೇಚಣ್ಣ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಮಾರಾಟಕ್ಕಿದೆ
ಶ್ರೀರಾಂಪುರ 2ನೇ ಹಂತ, 30x40, 6 ವರ್ಷ ಹಳೆಯ Duplex House, 3B, 2BHK, ಹುಣಸೆ ಮರ ಹತ್ತಿರ, ಕಾರ್ಪೋರೇಷನ್ ಖಾತಾ, Price - 1.15 Cr. ಸಂಪರ್ಕಿಸಿ:
9606347129

ಮನೆ ಮಾರಾಟಕ್ಕಿದೆ
30x40 ಕಾರ್ನರ್, 3 ಅಂತಸ್ತಿನ ಸೆಮಿ ಫರ್ನಿಷ್ಡ್ ಹಾಗೂ ಬೋರ್‌ವೆಲ್, ಕಾರ್ ಪಾರ್ಕಿಂಗ್ ಇರುವ ಹೊಸ ಮನೆ ಮಾರಾಟಕ್ಕಿದೆ. ಕೆ.ಎಸ್.ಎಫ್.ಸಿ ಲೇಔಟ್, ಮಾನಸನಗರ, ದೇವೇಗೌಡ ಸರ್ಕಲ್ ಹತ್ತಿರ, ಮೈಸೂರು (ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ)
7676268225

HOUSE FOR SALE
40x60 W/F 4BHK Duplex Modern House Fully Furnished at Vijayanagar 1st Stage Good Location area.
9606638899



ನಾಯಿ (ಜಾನಿ) ಕಾಣೆಯಾಗಿದೆ
ನಿಮಿಷಾಂಬ ಲೇಔಟ್, ಕುವೆಂಪುನಗರ, ಮೈಸೂರು.
7676573446
9591543938
ಹುಡುಕಿ ಕೊಟ್ಟವರಿಗೆ ನಗದು ಬಹುಮಾನ

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಕೇರ್ ಸೆಂಟರ್‌ನಲ್ಲಿ ಅನಾರೋಗ್ಯದಿಂದ ಬಳಲುತ್ತಿರುವವರನ್ನು ಮತ್ತು ವಯೋವೃದ್ಧರನ್ನು ಆರೈಕೆ ಮಾಡಲು ಆಸಕ್ತಿಯುಳ್ಳ, ಜವಾಬ್ದಾರಿಯುತ ಮಹಿಳೆಯರು ಬೇಕಾಗಿದ್ದಾರೆ. ಶುಶ್ರೂಷಕರು / ಆರೈಕೆ ಮಾಡುವವರಿಗೆ ವಸತಿ ಮತ್ತು ಊಟದ ವ್ಯವಸ್ಥೆಯೂ ಸಹ ಇರುವುದು. ಕೆಲಸಕ್ಕೆ ಸೇರಿದ ನಂತರ ಇತರೆ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡಲಾಗುವುದು. ಸಂಪರ್ಕಿಸಿ:
6360289214
8792058332

COMMERCE TREE
Near RTO Circle, Mysore
CRASH COURSE
Accountancy and Statistics for II PUC Students from December - 19th for 45 Days. For More Details Contact:
9513666611
9110644789

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಶ್ರೀ ವಿನಾಯಕ ಟೂರಿಸ್ಟ್
16 ದಿನಗಳ ಉತ್ತರ ಭಾರತ ಪ್ರವಾಸ 29–01–2023 ರೈಲು ಮತ್ತು ಬಸ್ಸಿನಲ್ಲಿ ಆಗ್ರ, ಮಥುರಾ, ಅಲಹಾಬಾದ್, ಸೀತಾಮಡಿ, ಕಾಶಿ, ಅಯೋಧ್ಯೆ, ಹರಿದ್ವಾರ, ಹೃಷಿಕೇಶ, ಕುರುಕ್ಷೇತ್ರ ಅಮೃತಸರ, ವಾಗಾಡಿ ಕಾಟ್ರ, ವೈಷ್ಣವಿದೇವಿ ದೆಹಲಿ, ಊಟ, ರೂಮ್ ವ್ಯವಸ್ಥೆಯೊಂದಿಗೆ. ಸಂಪರ್ಕಿಸಿ.
ರಾಮಚಂದ್ರ: 9481819973
ಲಕ್ಷ್ಮಣರಾವ್: 9341820013

ಬೇಕಾಗಿದ್ದಾರೆ
ಕೌಂಟರ್ ಮತ್ತು Supplier ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ, ಅಕ್ಬರ್ ರೋಡ್, ಮಂಡಿ ಮೊಹಲ್ಲ.
9036890169
8618959466

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಶ್ರೀ ಗೌರಿಶಂಕರ ಟ್ರಾವೆಲ್ಸ್
24-12-20222 (6 ದಿನ) ಗುರುವಾಯೂರು, ಕಾಲಡಿ, ಮುನ್ನಾರ್, ತ್ರಿಸೂರ್, ತ್ರಿವೇಂದ್ರಂ, ಆಲಪ್ಪಿ, ಕೊಚ್ಚಿನ್, ಚೋಟ್ಟಾನಿಕರೆ.
11-2-2022 (8 ದಿನ): ಕಾಶಿ, ಪ್ರಯಾಗ್ ರಾಜ್, ಅಯೋಧ್ಯೆ, ಬಾಬಾ ಬೈದ್ಯನಾಥ್, ಗಯಾ, ಬುದ್ಧಗಯಾ ಇತ್ಯಾದಿ.
ವಿಮಾನ / ಬಸ್ / ರೂಂ / ಊಟ
9620002114

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಸಂಭ್ರಮ ಬಾರ್
ನಜರ್‌ಬಾದ್, ಮೈಸೂರು
ಬೇಕಾಗಿದ್ದಾರೆ
ಅಡುಗೆ ಭಟ್ಟರು ಮತ್ತು ಸಪ್ಲೆಯರ್ಸ್ ಬೇಕಾಗಿದ್ದಾರೆ.
7411164808, 9945108109

WATER LEVEL CONTROLLER

Price Rs. 2999
Mob: 8880558064
Conditions apply

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ : 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502
9108100117

WANTED
1) Wanted Laptop | Desktop | CCTV Technician Training Provided.
2) Accounts Executive Training Provided.
3) Contact for Sales | Services of Laptop | Desktop, TFT | LED Monitor.
9902955544
9663579654

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

GOLD COMPANY
ಗಿರವಿ ಚಿನ್ನಾಭರಣ ಖರೀದಿ ನಿಮ್ಮ ಚಿನ್ನಾಭರಣಕ್ಕೆ ಹಣ ಬೇಕೆ ನೀವು ಗಿರವಿ ಇಟ್ಟ ಚಿನ್ನಾಭರಣವನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.
9964522225

ಹೋಲ್‌ಸೇಲ್ ದರದಲ್ಲಿ

ಜೀವಂತ ನಾಟಿ ಕೋಳಿ ಕೆ.ಜಿ. ರೂ.230/–
ಕ್ಲೀನಿಂಗ್ 1 ಕೋಳಿಗೆ ರೂ.20/–
ಗೌಡ್ರು ನಾಟಿಕೋಳಿ ಅಂಗಡಿ
ನಂ.5/1, ಎನ್.ಆರ್. ಮೊಹಲ್ಲಾ, ಉದಯಗಿರಿ ಮುಖ್ಯ ರಸ್ತೆ, ದೊಡ್ಡಮ್ಮತಾಯಿ ಕಲ್ಯಾಣ ಮಂಟಪ ಪಕ್ಕ, ಬಿ.ಬ್ಲಾಕ್, ಗಣೇಶನಗರ, ಮೈಸೂರು ಸಮಯ: ಬೆಳಿಗ್ಗೆ 6 ರಿಂದ ರಾತ್ರಿ 9ರವರೆಗೆ
9448048576 / 9632378020

ಬೋಳು ತಲೆಯ ಸಮಸ್ಯೆಯೇ?

ಕಿಮೋಥೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಪ್ರಶಾಂತ್ಯಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

ಬೇಕಾಗಿದ್ದಾರೆ
ಫ್ಯಾಕ್ಟರಿ ನಿರ್ವಹಣೆ ಮಾಡಲು ನುರಿತ ಫುಲ್ ಟೈಮ್ ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ. ಎಲ್ಲೋ ಬೋರ್ಡ್ ವಾಹನ ಚಾಲಕ ಬೇಕಾಗಿದ್ದಾರೆ. ಬ್ಯಾಡ್ಜ್ ಕಡ್ಡಾಯ ಲೈಸನ್ಸ್‌ನೊಂದಿಗೆ ಸಂಪರ್ಕಿಸಿ: ನಂ. 271, ಹೆಬ್ಬಾಳು ಕೈಗಾರಿಕಾ ಪ್ರದೇಶ ಮೈಸೂರು – 570018. ಕರೆ ಮಾಡುವ ಸಮಯ: 11 ರಿಂದ 5 ರವರೆಗೆ.
8792149329

HOUSE FOR SALE
20x30, Ground Floor & First Floor Chamundeshwari Railway Layout, Near Vikranth Tyre Factory, K.R.S.Road, Mysore. Contact:
9738884777
9900251194

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಟಿಎ, 15,200–86000.
9740733021 / 9535028750

Star Solar

Renewable Energy
ಕೇವಲ 19,499/- 200 Ltr Easy EMI
5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರ್‌ಗಳನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub,Mysore
9945616293 / 9449966293

ತಕ್ಷಣ ಬೇಕಾಗಿದ್ದಾರೆ
PART TIME /FULL TIME/ HOME -BASED
ecode GAS SAFE — All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಮೊಬೈಲ್ ಬಂದವರಿಗೆ ಆದ್ಯತೆ — ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

ಬೇಕಾಗಿದ್ದಾರೆ
ವೃದ್ಧರನ್ನು ಆರೈಕೆ ಮಾಡಲು ಅನುಭವವಿರುವ, ಇಲ್ಲದಿರುವ ಯುವಕ – ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC ಅಥವಾ ಯಾವುದೇ ಡಿಗ್ರಿ ಪಾಸ್ / ಫೇಲ್. ಊಟ ಮತ್ತು ವಸತಿ ಯೊಂದಿಗೆ ರೂ. 15,000/– ರಿಂದ 20,000/– ದವರೆಗೂ ಸಂಬಳ. ಸಂಪರ್ಕಿಸಿ:
Mob: 99169 05188

ವಸತಿ ಶಾಲೆಗೆ ಶಿಕ್ಷಕರು ಬೇಕಾಗಿದ್ದಾರೆ
ಮೈಸೂರು ನಗರದಲ್ಲಿರುವ CBSE ವಸತಿ ಶಾಲೆಯಲ್ಲಿ ಕಾರ್ಯ ನಿರ್ವಹಿಸಲು ದೈಹಿಕ ಶಿಕ್ಷಕರು (PT Teacher) ಹಾಗೂ ಎಲ್ಲಾ ವಿಷಯ ಶಿಕ್ಷಕರು ಬೇಕಾಗಿದ್ದಾರೆ. ವಿವರಗಳಿಗೆ ಸಂಪರ್ಕಿಸಿ:
7676522224, 9449320140

ಬೇಕಾಗಿದ್ದಾರೆ
ಗಾರ್ಡನ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ನಿರ್ವಹಿಸಲು ಕ್ಯಾಪ್ಟನ್ ಸಪ್ಲೇಯರ್. ಕಂಪ್ಯೂಟರ್ ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
7411587586

HOUSE FOR SALE
30x20, House for Sale in Sriramapura 2nd Stage BEML Duplex, 3BHK fully Furnised. Contact
9900251194
9738884777

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದವರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part time - Full time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed salary, PF, ESI. Age above 30 years.
9886512889, 9008799156

ಜಮೀನು ಮಾರಾಟಕ್ಕಿದೆ
ಮೈಸೂರು ಜಿಲ್ಲೆ, ಕೆ.ಆರ್. ನಗರ ತಾ॥, ಅರ್ಜುನಹಳ್ಳಿ ಗ್ರಾಮದಲ್ಲಿ 5 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
9972829426, 9449510010

MUDA ALLOTTED SITE FOR SALE
30x40 Vijayanagar 4th Stage, First Phase, Near Ring Road (South facing).
BROKERS EXCUSE.
Mob: 6364322628

ಬೇಕಾಗಿದ್ದಾರೆ
ಪ್ರತಿಷ್ಠಿತ ಖಾಸಗಿ ಸೆಕ್ಯೂರಿಟಿ ಏಜೆನ್ಸಿಗೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್, Valet Parking Drivers (Narayana Shasthri Road) ಬೇಕಾಗಿದ್ದಾರೆ. ಹೈವೇ ಸರ್ಕಲ್, ಬನ್ನಿಮಂಟಪ, ಬಲ್ಲಾಳ್ ಸರ್ಕಲ್, ನಂಜು ಮಳಿಗೆ, ಹಿನಕಲ್. ESI, PF ಜೊತೆಗೆ ಆಕರ್ಷಕ ಸಂಬಳ ಇರುತ್ತದೆ.
Mob: 8217563349

SITE FOR SALE
Jnanabharathi Layout, 2nd Stage, Dadada Halli, just 5 km from J.P. Nagar Ring Road. East facing, MUDA khata
30x40. Price: Rs. 22 Lakhs.
Mob: 9342123373

FLAT FOR SALE / RENT
East Facing Fully Furnished 2BHK with attach Bath Modular Kitchen Fridge, Stove Washing Machine, Dining Table, Sofa Set, T.V., Cabinet Cots, Beds A/c, Wardrobes, Geysers Designer Fans etc., Brokers Excuse.
9611105747

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು ಪುರುಷ ವಿದ್ಯಾವಂತ ಹಾಗೂ ಅನುಭವವಿರುವ 45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ ಹಾಗೂ ಸೆಕ್ಯೂರಿಟಿ ಹೆಡ್ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ಮಾಸಿಕ ರೂ.15,000/– ಹಾಗೂ 16,000/– 8 Hours Duty 3 Shift ನಲ್ಲಿ ಕೆಲಸ ಮಾಡಬೇಕು ಹಾಗೂ ESI & PF ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9731976148

S.K. Construction
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ. Engineering Plan, ವಾಸ್ತು ಪ್ರಕಾರ, 3D Elevation ಸಹಿತ, ಉತ್ತಮ ಗುಣಮಟ್ಟದಲ್ಲಿ ನಿಮ್ಮ ಬೆಲೆಯಲ್ಲಿ Construction ಮಾಡಿಕೊಡುತ್ತೇವೆ.
Mob: 9620528490

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646


V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಕೆಲಸಕ್ಕೆ ಬೇಕಾಗಿದ್ದಾರೆ
15 ದಿನಗಳ ಉಚಿತ ತರಬೇತಿ ನೀಡಿ ಉದ್ಯೋಗ ಕಲ್ಪಿಸಿಕೊಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: Lokabharathi Education Society, Mysore
9663466728
8951239989

NEW OPENING NEW OPPORTUNITIES
Urgently, Looking for a full time manager and a cashier (Male or Female) for a new Quick Service Restaurant (QSR), Sai's Kitchen V.V.Mohalla, Mysore - 570002. (Opp. To Corner House Ice Creams) Interested candidates can Contact: Swaroop
9738705303

ಹೋಂನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಊಟ ವಸತಿ ಉಚಿತದೊಂದಿಗೆ ಸಂಬಳ 12000–23000 ರವರೆಗೆ (ಆಧಾರ್ ಕಾರ್ಡ್ & ಫೋಟೋ ಕಡ್ಡಾಯ).
9743135666, 9739292222

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ತಲಕಾಡು ಹೋಬಳಿ, ಮಾವಿನಹಳ್ಳಿ ಗ್ರಾಮ, ಮನೆ ನಂ. 07ರಲ್ಲಿ ವಾಸವಾಗಿರುವ ಶ್ರೀಮತಿ ಪುಷ್ಪ (Pushpa) (ಆಧಾರ್ ನಂ. 7321 4241 3959) ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ವಿವಾಹದ ನಂತರದಲ್ಲಿ ನನ್ನ ಹಳೆಯ ಹೆಸರು ಯಶೋಧ ಎಂ. (Yeshoda M.) ಎಂಬ ಹೆಸರನ್ನು ಪುಷ್ಪ (Pushpa) ಎಂದು ಬದಲಾವಣೆ ಮಾಡಿಕೊಂಡಿರುತ್ತೇನೆ. ನಾನು ಈ ಮೂಲಕ ನೋಟರಿ ಮಹೇಶ್ ಪ್ರಸಾದ್ ರವರ ಮುಂದೆ ದಿನಾಂಕ 6–12–2022 ರಂದು ಪ್ರಮಾಣೀಕರಿಸುವುದೇನೆಂದರೆ ಇನ್ನು ಮುಂದೆ ಎಲ್ಲಾ ವ್ಯವಹಾರಗಳನ್ನು ಪುಷ್ಪ (Pushpa) ಎಂಬ ಹೆಸರಿನಿಂದ ವ್ಯವಹರಿಸುತ್ತೇನೆ.
ಸಹಿ/– ಪುಷ್ಪ

WANTED
Need ACCOUNTANT for Office Work. (Girls preferred). Near Devegowda Circle, Bannur Road.
Mob: 7022336376

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 + ESI, PF ವಿದ್ಯಾರ್ಹತೆ – 10th, PUC, ITI, Diploma and Any Degree ಇಂದೇ ಸಂಪರ್ಕಿಸಿ:
9035734821

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 12,000 ರಿಂದ 18,000, (ESI, PF ಸೌಲಭ್ಯ ಇರುತ್ತದೆ)
8050699742 / 7892480649

ಶಕ್ತಿ ಪ್ರಾಪರ್ಟೀಸ್
1) ಕುಮಿ ಬಚೆಟ್‌ನಲ್ಲಿ ಮುಡ ವ್ಯಾಪ್ತಿಯಲ್ಲಿ 30x40 ಸೈಟ್ ಬೇಕಾಗಿದೆ. (2) ಕ್ರಯಕ್ಕೆ ಮನೆ ಬೇಕಾಗಿದೆ. (30x40, 40x60). (3) ಕೆ.ಆರ್. ಪೇಟೆಯ ಜಯನಗರದಲ್ಲಿ ಸೈಟ್ ಮಾರಾಟಕ್ಕೆ ಇದೆ. (4) ದಟ್ಟಗಳ್ಳಿ ಬಳಿಯ ವೃಷ್ಟಿ ಲೇಔಟ್‌ನಲ್ಲಿ 50x80 ಆಳತೆ ಸೈಟ್ ಮಾರಾಟಕ್ಕೆ ಇದೆ. 5) ಮುಡಾ ವ್ಯಾಪ್ತಿಯ ಮನೆಗಳಿಗೆ ಖಾಸಗಿ ಫೈನಾನ್ಸ್ ಸೌಲಭ್ಯ ಇದೆ.
9731135888, 9743464818
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

FOR SALE
1) 30x40, 30x50 sites available, attach Brahmins 'E' Block Layout.
2) 12x36 G+2 house Kuvempunagar 28 Guntas Land in Varkodu.
3) 35x55 S/W C, R.K. Nagar 'I' Block.
4) Commercial building 42x53 Srirampura.
5) 17x60 G+1 3 BHK house Kamakshi Hospital backside.
Prakruthi Properties
90359 90359, 95386 90359

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ಮೈಸೂರಿನಲ್ಲಿ 40ವರ್ಷ ವಯೋಮಿತಿ ಒಳಗೆ ಇರುವ ನಿರುದ್ಯೋಗ ಯುವತಿಯರು ಮತ್ತು ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ಮತ್ತು ಟೈಲರಿಂಗ್ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
9844264134
9844736136

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ಲರ ದೈವ ಚೌಡಮ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುವೆಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ಶೀಘ್ರ ವಿವಾಹಕ್ಕಾಗಿ ಹಾಗೂ ಉತ್ತಮ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ:
ಡಾ.ಗುರೂಜಿ ಮೈಸೂರು
9448229184
7899625268
www.bhandhana.com

ವೃದ್ಧಾಶ್ರಮ
ಕುಡಿಯಲು ಬಿಸಿನೀರು, ಮಲಗಲು ಉತ್ತಮ ಹಾಸಿಗೆ, ಮಂಚ, ಬಿಸಿನೀರಿನ ಸ್ನಾನ ದಿನಕ್ಕೆ 3 ಬಾರಿ ಊಟ, 2 ಬಾರಿ ಕಾಫಿ, ನೋಡಲು ಟಿ.ವಿ. ಹಾಗೂ ಉತ್ತಮ ಪರಿಸರ ಉಳ್ಳ ವೃದ್ಧಾಶ್ರಮಕ್ಕೆ ಅರ್ಹ ವಯೋವೃದ್ಧರನ್ನು ಸೇರಿಸಿಕೊಳ್ಳಲಾಗುತ್ತದೆ. (ಷರತ್ತುಗಳು ಅನ್ವಯ) ಮತ್ತು ಅಡುಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ
8197804473

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ಲರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ ಹೌಸ್‌ಕೀಪಿಂಗ್ ಮತ್ತು ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸಿನ ವಯೋಮಿತಿ 18 ರಿಂದ 35 ರ ಒಳಗೆ.
9663991888, 9739742344

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ / ಯುವತಿಯರು, ವಿಧವೆ / ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿ ಶುಲ್ಕ ಇರುವುದಿಲ್ಲ). ಆಧಾರ್ ಕಾರ್ಡ್ ಕಡ್ಡಾಯ. ಸಂಬಳ 10,000 ರಿಂದ 15,000 ರ ತನಕ. ಸಂಪರ್ಕಿಸಿ:
9035324777, 9035081222

ಬೇಕಾಗಿದ್ದಾರೆ
ನುರಿತ Bus ಮತ್ತು Car ಡ್ರೈವರ್ ತಕ್ಷಣ ಬೇಕಾಗಿದ್ದಾರೆ. ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿ:
8310481554, 7892293213

WANTED
For medical distributor
1) Male Staff - 4
2) Store keeping (female) - 2
3) Driving cum distribution work - 1
SSLC / PUC Pass / Fail With / without experience.
9986108208, 9739377827

ನಿವೇಶನ ಮಾರಾಟಕ್ಕೆ ಇದೆ
30x35, Site No. 06, 11B, S.Kumar ಬಡಾವಣೆ, ಹಂಡುವಿನಹಳ್ಳಿ, ನಂಜನಗೂಡು ತಾ॥.
20x30 Site No. 342, EWS, K.H.B. Layout ಚಾಮಲಪುರ, ನಂಜನಗೂಡು ತಾ॥.
9900587060

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ಸಂಬಳ: ಸೂಪರ್ ವೈಸರ್ : 23,000/–, ಗಾರ್ಡ್ : 17,000/– +W/o (8hrs), ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು
9880727819
8310520477

WANTED
Female Staff
Qualification: PUC/ Degree, Age : Below 30.
9945616861

ವಧು-ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ / ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE / B.Tech / MBA / MS / MBBS / MS-MD ಹಾಗೂ ಎಲ್ಲಾ ಡಿಗ್ರಿ / ಮಾಸ್ಟರ್ಸ್ ಡಿಗ್ರಿ ದೇಶೀಯ / ವಿದೇಶಿಯ ವಧು – ವರರ ಮಾಹಿತಿಗಾಗಿ ಸಂಪರ್ಕಿಸಿ: ಅಂಕೇಗೌಡ ಮ್ಯಾಟ್ರಿಮೋನಿ, ವಿಜಯ ಬ್ಯಾಂಕ್ ಸರ್ಕಲ್, ಕುವೆಂಪುನಗರ, ಮೈಸೂರು.
7259395800
7349224222

(ಉಚಿತ ಭವಿಷ್ಯ)
ಶ್ರೀ ಮಂಜುನಾಥ ಸ್ವಾಮಿ ಜ್ಯೋತಿಷ್ಯಂ
ಪಂಡಿತ್ ವಿಷ್ಣುಕಾಂತ್ ಜೋಶಿ
ಮೊ.: 8549998630
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳಾದ ಸಾಲದ ಬಾಧೆ, ದಾಂಪತ್ಯ ಸಮಸ್ಯೆ, ಕೋರ್ಟ್ ಕೇಸ್ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸ ಇನ್ನು ಅನೇಕ ಸಮಸ್ಯೆಗಳಿಗೆ ಕೇವಲ 2 ದಿನಗಳಲ್ಲಿ ಪರಿಹಾರ ತಿಳಿಸುತ್ತಾರೆ. ಫೋನಿನ ಮುಖಾಂತರ ಅಥವಾ ನೇರವಾಗಿ ಚಾಮರಾಜನಗರಕ್ಕೆ ಬಂದು ಭೇಟಿ ಮಾಡಿ

ಮಹಾ ಮಾಂತ್ರಿಕ
ಕೇರಳ ಶ್ರೀ ಆದಿಶಕ್ತಿ ಜ್ಯೋತಿಷ್ಯಾಲಯ (KERALA FAMOUS ASTROLOGER)
ಪಂ॥ ಎಸ್.ಶಿವಪ್ರಸಾದ್ (ತಂತ್ರಿ)
ಮೊ.: 9686525894
[illegible]

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, City Bus Stand ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ಸಂಬಳ: 15,500/–, ವಯೋಮಿತಿ 50 ವರ್ಷದ ಒಳಗೆ, ESI ಮತ್ತು PF ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819
9620777819

ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು:– 18 ರಿಂದ 25 ವರ್ಷ (ಹುಡುಗರಿಗೆ ಮಾತ್ರ) ವಿದ್ಯಾರ್ಹತೆ:– PUC, Degree, ಸಂಬಳ:– 10,000/– ರಿಂದ 15,000/– ಗಾನವಿ ಇಂಟರ್ ನ್ಯಾಷನಲ್, ನಂ. 01, ಓಲ್ಡ್ ಮಹದೇವಪುರ ಮೇನ್ ರೋಡ್, ಫೋರಮ್ ಮಾಲ್ ಹತ್ತಿರ, ಉದಯಗಿರಿ ಮೈಸೂರು.
9620476665 / 9620446665
8123819136 / 8553307927

JOBS FOR MARRIED WOMEN'S
Under women Empowerment Program Eligibility:- Age 28 to 45 years, Qualification: Any Degree / Diploma, Fixed Salary: 14,500, ESI, PF & Incentives, Flexible Timining. For more Details Contact:
9880498509

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586
6360884930

FOR SALE
45x60 old House for Sale in Vidhyaranyapuram.
40x70 House for Sale in Gangotri Layout
20x40 NF Site for Sale Near J.P.Nagar Ring Road.
Broker Excuse
9880344263

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ರೋಟರಿ ಕ್ರೀಡಾಕೂಟದಲ್ಲಿ ಅಜಿತ್ ನಾಣಯ್ಯ ಚಾಂಪಿಯನ್



ಮಡಿಕೇರಿ, ಡಿ.7– ರೋಟರಿ ಮಿಸ್ಟಿ ಹಿಲ್ಸ್ ಮಡಿಕೇರಿ ವತಿಯಿಂದ ನಗರದ ಜನರಲ್ ಕೆ.ಎಸ್. ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ರೋಟರಿ ಕ್ರೀಡಾಕೂಟದಲ್ಲಿ ರೋಟರಿ ಮಿಸ್ಟಿಹಿಲ್ಸ್ ಸದಸ್ಯ ಕುಲ್ಲೇಟಿರ ಅಜಿತ್ ನಾಣಯ್ಯ ಅವರು ಅತಿಹೆಚ್ಚು ಚಿನ್ನದ ಪದಕ ತಮ್ಮದಾಗಿಸಿಕೊಳ್ಳುವ ಮೂಲಕ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ.

ಓಟದ ಸ್ಪರ್ಧೆ 100 ಮೀ. ಪ್ರಥಮ, 200 ಮೀ. ಪ್ರಥಮ, 400 ಮೀ. ನಡಿಗೆ ಪ್ರಥಮ, ಭಾರದ ಗುಂಡು ಎಸೆತ ಪ್ರಥಮ ಹಾಗೂ ಡಿಸ್ಕಸ್ ಥ್ರೋದಲ್ಲಿ ಪ್ರಥಮ ಬಹುಮಾನ ಪಡೆದುಕೊಂಡು ವೈಯಕ್ತಿಕ ವಿಭಾಗದಲ್ಲಿ ಚಾಂಪಿಯನ್ ಆದರು.

ಕ್ರೀಡಾಕೂಟದಲ್ಲಿ ಕೊಡಗು, ಚಾಮರಾಜನಗರ, ದ.ಕನ್ನಡ ಮತ್ತು ಮೈಸೂರು ಜಿಲ್ಲೆ ಒಳಗೊಂಡ 89 ರೋಟರಿ ಕ್ಲಬ್‌ಗಳ ಸದಸ್ಯರು ಹಾಗೂ ಅವರ ಕುಟುಂಬಸ್ಥರು ಸೇರಿ 500ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಶಶಿ ನಿಧನ



ನಾಪೊಕ್ಲು, ಡಿ.7– ನಾಪೊಕ್ಲು ಗ್ರಾಮದ ನಿವಾಸಿ ಕೊಂಬಂಡ ಸುರೇಶ (ಸುರಿ) ಅವರ ಧರ್ಮಪತ್ನಿ ಶಶಿ (ಪುಷ್ಪಾಂಜಲಿ) ಯವರು ಮಂಗಳವಾರ ನಿಧನರಾದರು. ಅವರಿಗೆ 46 ವರ್ಷ ವಯಸ್ಸಾಗಿತ್ತು. ಅಂತ್ಯಕ್ರಿಯೆ ಮಂಗಳವಾರ ಮೃತರ ಸ್ವಗ್ರಾಮದಲ್ಲಿ ನೆರವೇರಿತು. ಮೃತರು ಪತಿ ಸುರೇಶ ಹಾಗೂ ಮಗ ಆದಿತ್ಯ ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

ಧಾನ್ಯಲಕ್ಷ್ಮೀ ಸದಾಕಾಲ ಮನೆ ತುಂಬಿರಲಿ ಎಂಬ ಆಶಯದೊಂದಿಗೆ

ಜಿಲ್ಲೆಯಾದ್ಯಂತ ಹುತ್ತರಿ ಹಬ್ಬ ಆಚರಣೆ





ಮಡಿಕೇರಿ, ಡಿ.7– ಧಾನ್ಯಲಕ್ಷ್ಮೀ ಸದಾಕಾಲ ಮನೆ ತುಂಬಿರಲಿ ಎಂಬ ಆಶಯದೊಂದಿಗೆ ಕೊಡಗಿನ ಪ್ರಮುಖ ಹಬ್ಬಗಳಲ್ಲಿ ಒಂದಾದ ಹುತ್ತರಿ ಹಬ್ಬವನ್ನು ಜಿಲ್ಲೆಯಾದ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಮೊದಲಿಗೆ ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ರೋಹಿಣಿ ನಕ್ಷತ್ರದಲ್ಲಿ ರಾತ್ರಿ 7.20 ಗಂಟೆಗೆ ನೆರೆಕಟ್ಟಿ, ಬಳಿಕ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ 8.20 ಗಂಟೆಗೆ ಕದಿರು ತೆಗೆಯಲಾಯಿತು. ಆ ಮೂಲಕ ಜಿಲ್ಲೆಯಲ್ಲಿ ಶ್ರೀ ಪಾಡಿ ಇಗ್ಗುತ್ತಪ್ಪನ ಸನ್ನಿಧಿಯಲ್ಲಿ ಮೊದಲು ಹುತ್ತರಿ ಹಬ್ಬವನ್ನು ಆಚರಿಸಲಾಯಿತು. ತದನಂತರ ಜಿಲ್ಲೆಯ ವಿವಿಧೆಡೆ ಹಬ್ಬದ ಆಚರಣೆ ನಡೆಯಿತು.

ನಗರದ ಓಂಕಾರೇಶ್ವರ ದೇವಾಲಯ, ಕೊಡವ ಸಮಾಜ, ಗೌಡ ಸಮಾಜಗಳಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಧಾನ್ಯ ಲಕ್ಷ್ಮಿಯನ್ನು ಬರಮಾಡಿಕೊಳ್ಳಲಾಯಿತು. ಓಂಕಾರೇಶ್ವರ ದೇವಾಲಯದಲ್ಲಿ 7.50ಕ್ಕೆ ನೆರೆಕಟ್ಟಿ ದೇವಾಲಯದ ಗದ್ದೆಯಲ್ಲಿ ಧಾನ್ಯಲಕ್ಷ್ಮಿಗೆ ವಿಶೇಷ ಪೂಜೆ ಸಲ್ಲಿಸಿ 8.50 ಗಂಟೆಗೆ ಕದಿರು ತೆಗೆದು ದೇವಾಲಯಕ್ಕೆ ಕೊಂಡೊಯ್ದು ವಿಶೇಷ ಪೂಜೆ ಸಲ್ಲಿಸಲಾಯಿತು.

ಬಳಿಕ ದುಡಿ ಕೊಟ್‌ಪಾಟ್‌ನೊಂದಿಗೆ ದೇವಾಲಯದಿಂದ ಕೊಡವ ಸಮಾಜಕ್ಕೆ ಕದಿರು ಕೊಂಡೊಯ್ಯಲಾಯಿತು. ನಂತರ ಸಮಾಜದಲ್ಲಿ ತೂಕ್ ಬೊಳ್‌ಚ(ತೂಗು ದೀಪ) ಬೆಳಗಿ ಸಾಂಪ್ರದಾಯಿಕ ಪೂಜೆ ನೆರವೇರಿಸಲಾಯಿತು. ತದನಂತರ ದೀಪಕ್ಕೆ ಕದಿರುಕಟ್ಟಿ ಇಗ್ಗುತ್ತಪ್ಪ, ಮತ್ತು ಗುರು ಕಾರೋಣರನ್ನು ನೆನೆದು ಮಾತೆ ಕಾವೇರಿಗೆ ನಮಿಸಿ ದೀಪಕ್ಕೆ ಅಕ್ಕಿ ಹಾಕಿ ಧಾನ್ಯ ಸಂಪತ್ತು ವೃದ್ಧಿಸಲಿ ಎಂದು ಪ್ರಾರ್ಥಿಸಲಾಯಿತು.

ಗೌಡ ಸಮಾಜದ ಬಳಿಯ ಗದ್ದೆಯಲ್ಲಿ ಕದಿರು ತೆಗೆದು ನೆಲ್ಲಕ್ಕಿ ನಡುಬಾಡೆಗೆ ಕೊಂಡೊಯ್ದು ಕಾವೇರಿ ಮಾತೆ, ಇಗ್ಗುತ್ತಪ್ಪ ಹಾಗೂ ಕುಲದೇವರನ್ನು ನೆನೆದು ದೀಪಕ್ಕೆ ಅಕ್ಕಿ ಹಾಕುವ ಮೂಲಕ ಹುತ್ತರಿ ಹಬ್ಬ ಆಚರಿಸಲಾಯಿತು. ಕದಿರು ತೆಗೆಯುವ ಸಂದರ್ಭ ಕೊಡಗಿನ ಪದ್ಧತಿ, ಪರಂಪರೆ ಮತ್ತು ಸಂಪ್ರದಾಯದಂತೆ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಹಬ್ಬದ ಶುಭ ಸಂಕೇತವನ್ನು ಸೂಚಿಸಲಾಯಿತು. 'ಪೊಲಿ ಪೊಲಿಯೇ ಬಾ' ಎಂದು ಧಾನ್ಯಲಕ್ಷ್ಮಿಯನ್ನು ಬೇಡಲಾಯಿತು. ಸಮಾಜಗಳು ಮತ್ತು ದೇವಾಲಯದಲ್ಲಿ ನೆರೆದಿದ್ದವರಿಗೆ ಹಬ್ಬದ ಸಾಂಪ್ರದಾಯಿಕ ತಿನಿಸು ತಂಬಿಟ್ಟನ್ನು ಪ್ರಸಾದ ರೂಪದಲ್ಲಿ ವಿತರಿಸಲಾಯಿತು.

ಈ ಸಂದರ್ಭ ಕೊಡವ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ಕೊಡವ ಮಕ್ಕಡ ಕೂಟ, ಕೊಡವ ಪೊಮ್ಮಕ್ಕಡ ಕೂಟ, ವಿವಿಧ ಕೊಡವ ಕೇರಿಗಳ ಅಧ್ಯಕ್ಷರು, ಗೌಡ ಸಮಾಜ, ಗೌಡ ವಿದ್ಯಾಭಿವೃದ್ಧಿ ಸಂಘ, ಗೌಡ ಸಮಾಜಗಳ ಒಕ್ಕೂಟ, ಗೌಡ ಯುವ ವೇದಿಕೆ ಪದಾಧಿಕಾರಿಗಳು, ಓಂಕಾರೇಶ್ವರ ದೇವಾಲಯ ಸಮಿತಿ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಉಪಸ್ಥಿತರಿದ್ದರು.

ಕದಿರು ಹಂಚಿಕೆ: ಮಡಿಕೇರಿ ನಗರ ವ್ಯಾಪ್ತಿಯೊಳಗೆ ಭತ್ತದ ಗದ್ದೆಗಳು ಇಲ್ಲದ ಹಿನ್ನೆಲೆಯಲ್ಲಿ ನಗರ ನಿವಾಸಿಗಳು ಓಂಕಾರೇಶ್ವರ ದೇವಾಲಯ, ಕೊಡವ ಮತ್ತು ಗೌಡ ಸಮಾಜಗಳಿಗೆ ತೆರಳಿ ನೆರೆ(5ಎಲೆಗಳು) ಮತ್ತು ಕದಿರನ್ನು (ಭತ್ತದ ಪೈರು) ಕೊಂಡೊಯ್ದು ಧಾನ್ಯಲಕ್ಷ್ಮಿಯನ್ನು ಮನೆ ತುಂಬಿಕೊಂಡರು. ಪಾಯಸಕ್ಕೆ ಕದಿರಿನಲ್ಲಿದ್ದ ಅಕ್ಕಿಯನ್ನು ಹಾಕಿ ಹೊಸ ಅಕ್ಕಿಯ ಪಾಯಸ, ತಂಬಿಟ್ಟು, ಹುತ್ತರಿ ಗೆಣಸಿನ ವಿವಿಧ ಖಾದ್ಯಗಳನ್ನು ಸವಿದು ಹಬ್ಬವನ್ನು ಸಂಭ್ರಮಿಸಿದರು.

'ಧ್ವಜನಿಧಿ' ಸಂಗ್ರಹದಲ್ಲಿ ಕೊಡಗಿಗೆ 3ನೇ ಸ್ಥಾನ: ರಾಜ್ಯಪಾಲರಿಂದ ಅಭಿನಂದನೆ

ಮಡಿಕೇರಿ, ಡಿ.7– ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ 2021–22 ನೇ ಸಾಲಿನಲ್ಲಿ 'ಧ್ವಜನಿಧಿ' ಸಂಗ್ರಹದಲ್ಲಿ ಕೊಡಗು ಜಿಲ್ಲೆಯಿಂದ 7.32 ಲಕ್ಷ ರೂ. ಸಂಗ್ರಹವಾಗಿ ರಾಜ್ಯದಲ್ಲಿ 3ನೇ ಸ್ಥಾನ ಪಡೆದಿದೆ.



ಈ ಹಿನ್ನೆಲೆ ರಾಜ್ಯಪಾಲರಾದ ಥಾವರ ಚಂದ್ ಗೆಹ್ಲೋತ್ ಹಾಗೂ ಗೃಹ ಸಚಿವರಾದ ಅರಗ ಜ್ಞಾನೇಂದ್ರ ಅವರು ಬೆಂಗಳೂರಿನ ರಾಜಭವನದಲ್ಲಿ ಬುಧವಾರ ಜಿಲ್ಲಾಡಳಿತಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರ ಪರವಾಗಿ ಸೈನಿಕ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮೇಜರ್ ಡಾ.ಜೆಆರ್.ಬಾಲಸುಬ್ರಮಣ್ಯಂ ಅವರು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯಂದು ಪಾರಿತೋಷಕ ಪದಕವನ್ನು ರಾಜಭವನದಲ್ಲಿ ರಾಜ್ಯಪಾಲರು ಮತ್ತು ಗೃಹ ಸಚಿವರಿಂದ ಸ್ವೀಕರಿಸಿದ್ದಾರೆ

ಡಿ.13ರಿಂದ ಬೃಹತ್ ಉದ್ಯೋಗ ಮೇಳ

ಮಡಿಕೇರಿ, ಡಿ.7– ಜಿಲ್ಲಾಡಳಿತ ಹಾಗೂ ಜಿಲ್ಲಾ ಕೌಶಲ್ಯ ಮಿಷನ್ ವತಿಯಿಂದ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ.

ಡಿ.13 ರಂದು ಕುಶಾಲನಗರ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಡಿ.16 ರಂದು ಮಡಿಕೇರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಹಾಗೂ ಡಿ.20 ರಂದು ಗೋಣಿಕೊಪ್ಪ ಕಾವೇರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯಾಯ ದಿನಗಳಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆ ವರೆಗೆ ಉದ್ಯೋಗ ಮೇಳ ನಡೆಯಲಿದೆ.

ಶ್ರೀ ಸ್ವಾಮಿ ಕೊರಗಜ್ಜ ದೈವ ಸಾನ್ನಿಧ್ಯದಲ್ಲಿ ನೇಮೋತ್ಸವ

ಮಡಿಕೇರಿ, ಡಿ.7– ಹೆರವನಾಡು ಗ್ರಾಮದ ಉಡೋತ್‌ಮೊಟ್ಟೆಯಲ್ಲಿರುವ ಶ್ರೀ ಸ್ವಾಮಿ ಕೊರಗಜ್ಜ ದೈವ ಸಾನ್ನಿಧ್ಯದಲ್ಲಿ ವರ್ಷಾವಧಿ ನೇಮೋತ್ಸವ ಹಾಗೂ ಪರಿವಾರ ಸತ್ಯ ದೈವಗಳ ನೇಮೋತ್ಸವವು ಶ್ರದ್ಧಾಭಕ್ತಿಯಿಂದ ಜರುಗಿತು. ಮುಂಜಾನೆ ಗಣಪತಿ ಹೋಮ ಸೇರಿದಂತೆ ವಿವಿಧ ಪೂಜಾ ವಿಧಿವಿಧಾನಗಳು ನೆರವೇರಿತು. ಸಂಜೆ ದೈವಗಳ ಭಂಡಾರ ಇಳಿಸಲಾಯಿತು.



ರಾತ್ರಿಯಿಂದ ಮರುದಿನದ ವರೆಗೆ ಶ್ರೀ ಮಂತ್ರವಾದಿ ಗುಳಿಗ, ಶ್ರೀ ಕಲ್ಲುರ್ಟಿ ದೈವ, ಶ್ರೀ ಧರ್ಮ ದೈವ ಹಾಗೂ ಶ್ರೀ ಸ್ವಾಮಿ ಕೊರಗಜ್ಜ ದೈವದ ನೇಮ ನಡೆಯಿತು. ನೇಮೋತ್ಸವದಲ್ಲಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ತೀರ್ಥ ಪ್ರಸಾದವನ್ನು ಸ್ವೀಕರಿಸಿದರು. ನೆರೆದಿದ್ದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ಮಂಡ್ಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ

ಆಧುನೀಕರಣದಿಂದ ಸಾಹಿತ್ಯಕ್ಕೆ ಧಕ್ಕೆಯಾಗದು

ಸಮ್ಮೇಳನಾಧ್ಯಕ್ಷೆ ಡಾ.ಲೀಲಾ ಅಪ್ಪಾಜಿ ಅಭಿಮತ



ಮಂಡ್ಯ, ಡಿ.7– ಸಾಮಾಜಿಕ ಜಾಲತಾಣಗಳು ಬಲಾಢ್ಯಗೊಂಡು ಸಮಾಜ ಎಷ್ಟೇ ಆಧುನೀಕರಣಗೊಂಡರೂ ಸಾಹಿತ್ಯ ಕ್ಷೇತ್ರಕ್ಕೆ ಎಂದೂ ಧಕ್ಕೆಯಾಗದು ಎಂದು ಮಂಡ್ಯ ತಾಲೂಕು 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಡಾ.ಲೀಲಾ ಅಪ್ಪಾಜಿ ಅಭಿಪ್ರಾಯಪಟ್ಟರು.

ಬುಧವಾರ ತಾಲೂಕಿನ ದುದ್ದ ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ನಡೆದ 17ನೇ ಮಂಡ್ಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರ ನುಡಿಗಳನ್ನಾಡಿದ ಅವರು, ಮಳೆಗಾಲ ಶುರುವಾದ ನಂತರ ಪ್ರಕೃತಿಯೇ ರಚಿಸಿದ ಸುಂದರ ಹಸಿರು ವರ್ಣಚಿತ್ರದ ತರಹ ಕಾಣಿಸುವಂತದ್ದು ನಮ್ಮ ಮಂಡ್ಯ ಜಿಲ್ಲೆ. ಇದೇ ಮಂಡ್ಯದ ಮದ್ದೂರಿನ ಗೋವಿನ ಹಾಡು ಬರೆದ ಕವಿಯ ಪ್ರಕಾರ ಧರಣಿಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟಕ ಇದೆ. ಮಂಡ್ಯದಲ್ಲಿ ನವಶಿಲಾ, ಲೋಹ ಮತ್ತು ಆದಿಚಾರಿತ್ರಿಕ ಕಾಲದ ನೆಲೆಗಳಿವೆ. 4ನೆಯ ಶತಮಾನದಿಂದ ಐತಿಹಾಸಿಕ ಹಿನ್ನೆಲೆಯಿದೆ. ಗಂಗ, ರಾಷ್ಟ್ರಕೂಟ, ಚೋಳ, ಹೊಯ್ಸಳ, ವಿಜಯನಗರ, ಒಡೆಯರ ಆಡಳಿತಕ್ಕೆ ಒಳಪಟ್ಟ ನೆಲವಿದು. ಮಾಂಡವ್ಯ ಋಷಿಯಿಂದ ಮಂಡ್ಯ ಎಂದು ಪ್ರಚಾರದಲ್ಲಿದ್ದರೂ ಮಂಡ್ಯ ಪದ ಮಂಟೇಯ ಪದದ ಸಂಕ್ಷಿಪ್ತ ರೂಪ. ಮಂಟೇಯಕ್ಕೆ ಕಪ್ಪುಕಲ್ಲು, ರಾಗಿ ಎಂಬ ಎರಡರ್ಥಗಳಿವೆ. ಕರಿಘಟ್ಟ ಮುಂತಾದ ಬೆಟ್ಟಗಳ ಕಲ್ಲು ಕಪ್ಪುಶಿಲೆ. ಪ್ರಮುಖ ಬೆಳೆ ರಾಗಿ. ಮಂಟೇಯದಿಂದ ಮಂಡ್ಯ ಆಗಿರಬಹುದು ಎಂದು ಅಭಿಪ್ರಾಯಪಟ್ಟರು.

ಕನ್ನಡವೆಂದರೆ ಕೀಳು ಮೇಲರಿಮೆಗಳಲ್ಲ. ಅದು ನಮ್ಮ ಉಸಿರಿನಷ್ಟೇ ಸಹಜ ಹಾಗೂ ಸತ್ಯ. ಕನ್ನಡ ನಾಡನ್ನು ಕಟ್ಟಿದವರು ವಿಶೇಷವಾಗಿ ಸಾಮಾನ್ಯ ಕನ್ನಡಿಗರು. ಇಂದು ಕೇವಲ ಭಾಷಿಕ ನೆಲೆಯ ಮೂಲಕ ಕನ್ನಡ ಉಳಿಸುವ ಬೆಳೆಸುವ ಕ್ರಿಯೆಯೇ ಪ್ರಧಾನವಾಗಿದೆ. ಆದರೆ ಕನ್ನಡ ಉಳಿಯುವುದು ಕನ್ನಡಿಗರಿಂದ. ಕನ್ನಡವನ್ನು ಉಳಿಸಿ ಎನ್ನುವಾಗ, ಅದರೊಳಗೆ ಕನ್ನಡಿಗರನ್ನೂ ಉಳಿಸಿ ಎಂದೇ ಆಗಬೇಕು. ಕನ್ನಡಿಗರೆಂದರೆ ಕನ್ನಡ ಮಾತೃಭಾಷಿಕರು ಮಾತ್ರವಲ್ಲ. ಮನೆಯಲ್ಲಿ ಆಡುವ ಮಾತೃಭಾಷೆಯನ್ನು ಮೀರಿ ಕನ್ನಡ ಭಾಷೆಯಲ್ಲಿ ವ್ಯವಹರಿಸುವ, ಅಭಿವ್ಯಕ್ತಿಸುವ ಜನರೆಲ್ಲ ಕನ್ನಡಿಗರೆ. ಕನ್ನಡ ಮತ್ತು ಕನ್ನಡಿಗರನ್ನು ಧರ್ಮದ ವ್ಯಾಪ್ತಿಗೆ ಒಳಪಡಿಸುವ ಪ್ರಯತ್ನಗಳು ಆಗುತ್ತಿವೆ. ಆದರೆ ಕನ್ನಡ ಧರ್ಮಾತೀತ, ಜಾತ್ಯತೀತ ಭಾಷೆ. ಕನ್ನಡದ ಬಗ್ಗೆ ಕಾಳಜಿಯುಳ್ಳ ಅನೇಕ ಮುಸ್ಲಿಮರೂ, ಕ್ರೈಸ್ತರೂ ಇದ್ದಾರೆ. ಕರ್ನಾಟಕದಲ್ಲಿ ಉಳಿಯಬಯಸುವವರು ಕನ್ನಡವನ್ನು ಬಳಸಬೇಕು, ಉಳಿಸಿಕೊಳ್ಳಬೇಕು. ನೆಲದ ನುಡಿಯಾದ ಕನ್ನಡವನ್ನು ತಮ್ಮದಾಗಿಸಿಕೊಂಡು ನಾಡಿನ ಬದುಕಿನಲ್ಲಿ ಬೆರೆಯಬೇಕು ಎಂದರು.

ವೇದಿಕೆಯಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ಹಾಗೂ ಸ್ವಾಗತಿ ಸಮಿತಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಕೆ.ರವಿಕುಮಾರ್ ಚಾಮಲಾಪುರ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಡಾ.ಹಿ.ಶಿ.ರಾಮಚಂದ್ರಗೌಡ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಂಜು ಮುತ್ತೇಗೆರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಂಡ್ಯದಲ್ಲೂ ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣ

ಕೇರಳದಲ್ಲಿ ಶೇ.92ರಷ್ಟು ಜನ ಮಲೆಯಾಳಿ ಮಾತನಾಡಿದರೆ ತಮಿಳುನಾಡಿನಲ್ಲಿ ಶೇ.65ರಷ್ಟು, ತಮಿಳು ಆಂಧ್ರಪ್ರದೇಶ–ತೆಲಂಗಾಣದಲ್ಲಿ ಶೇ.72ರಷ್ಟು ಜನ ತೆಲುಗು ಮಾತನಾಡಿದರೆ ಕರ್ನಾಟಕದಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಶೇ.39ರಷ್ಟಿದೆ. ರಾಜ್ಯದಲ್ಲಿ ಶೇಕಡಾ 100ರಷ್ಟು ಕನ್ನಡ ಭಾಷಿಕರ ಜಿಲ್ಲೆ ಎಂಬ ಹಿರಿಮೆಯ ಮಂಡ್ಯದಲ್ಲೂ ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಇಂಗ್ಲಿಷ್ ಬೇರೂರಲಾರಂಭಿಸಿ ಕನ್ನಡದ ಬೇರುಗಳು ನೆಲಕಚ್ಚುವ ಸ್ಥಿತಿ ತಲುಪುತ್ತಿದೆ. ಕನ್ನಡದ ಹಣತೆಗಳಂತಿರುವ ಕನ್ನಡ ಶಾಲೆಗಳು ಬೆಳಗದೆ, ಬಾಗಿಲು ಮುಚ್ಚುತ್ತಿವೆ. ಕನ್ನಡ ಕಡ್ಡಾಯವಾಗಿಸಿ ಉಳಿದ ಯಾವುದೇ ಭಾಷೆ ಕಲಿಯಲು ಅಡ್ಡಿಯಿಲ್ಲ. ಕನ್ನಡ ಮಾಧ್ಯಮ ಬೇಕೆಂದರೆ ಇಂಗ್ಲಿಷ್ ಕಲಿಕೆಯ ವಿರೋಧವಲ್ಲ. ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರೆಲ್ಲ ಇಂಗ್ಲಿಷ್ ಪರಿಣತರಲ್ಲ. ಬಹಳ ಜನಕ್ಕೆ ಇಂಗ್ಲಿಷ್ ಶಿಕ್ಷಣದಿಂದ ಪ್ರಯೋಜನವಿದೆಯೆಂಬ ನಂಬಿಕೆ ತುಂಬಿದೆ. ನಾಮಫಲಕಗಳಲ್ಲಿ ಕನ್ನಡ ಕಡ್ಡಾಯವಿರಲಿ, ಕನ್ನಡ ಅಂಕಿ ಬಳಸಲಿ, ಕನ್ನಡದಲ್ಲಿ ಮಾತನಾಡಲಿ, ಕನ್ನಡದಲ್ಲಿ ಸಹಿ ಮಾಡಲಿ. ಆದರೆ ಕನ್ನಡದ ಕೆಲಸ ಸಂಕೇತಗಳಿಗಷ್ಟೆ ಸೀಮಿತವಾಗದೆ ಶೈಕ್ಷಣಿಕವಾಗಿ–ಸಾಂಸ್ಕೃತಿಕವಾಗಿ ಉಳಿಸಿ ಬೆಳೆಸಬೇಕು. ಉದ್ಯೋಗಗಳಲ್ಲಿ ಕನ್ನಡ, ಕನ್ನಡಿಗರಿಗೆ ಪ್ರಾಶಸ್ತ್ಯ ಅತ್ಯಗತ್ಯ. ಆಡಳಿತದಲ್ಲಿ ಕನ್ನಡ ಕಡ್ಡಾಯವಾಗಿ ಅನುಷ್ಠಾನಗೊಳ್ಳಬೇಕು. ಜನರ ಮೂಲಭೂತ ಅಗತ್ಯಗಳನ್ನು ಪೂರೈಸದೆ ಭಾಷೆ ಬೆಳೆಯದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಗಮನ ಸೆಳೆದ ಮುದ್ದೆ, ಕಜ್ಜಾಯದೂಟ: ಇದೇ ಸಂದರ್ಭದಲ್ಲಿ ಸಾಹಿತ್ಯಾಸಕ್ತರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಸ್ವಾಗತ ಸಮಿತಿ ಅಧ್ಯಕ್ಷ ಬಿ.ಆರ್.ರಾಮಚಂದ್ರ ನೇತೃತ್ವದಲ್ಲಿ ಮುದ್ದೆ ಹಾಗೂ ಕಜ್ಜಾಯದೂಟ ಏರ್ಪಡಿಸಲಾಗಿತ್ತು. ಸ್ವತಃ ಶಾಸಕರು ಹಾಗೂ ಅಧ್ಯಕ್ಷರೇ ಮುಂದೆ ನಿಂತು ಊಟದ ಜವಾಬ್ದಾರಿ ಹೊತ್ತಿದ್ದರು. ಇದೇ ಸಂದರ್ಭದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ರೈತರ ಉತ್ಪನ್ನ, ಪುಸ್ತಕಗಳು, ಮನೆಯಿಂದ ತಯಾರಾದ ತಿನಿಸುಗಳು ಗಮನ ಸೆಳೆದವು.

ಚಿನಕುರಳಿಯಲ್ಲಿ ಹನುಮ ಜಯಂತಿ



ಚಿನಕುರಳಿ, ಡಿ.7– ಚಿನಕುರಳಿ ಗ್ರಾಮದಲ್ಲಿ ಹನುಮ ಜಯಂತಿ ಅಂಗವಾಗಿ ಗ್ರಾಮದ ಮಹಾಗಣಪತಿ, ರಾಮೇಶ್ವರ, ಅಂಕನಾಥೇಶ್ವರ, ರಾಮಾನುಜಯ, ಆಧಿಲಕ್ಷ್ಮಿ, ಮನೆ ಮಂಚಮ್ಮ ಹಾಗೂ ಮಾಸ್ತಮ್ಮ ದೇವರಿಗೆ ಗ್ರಾಮದ ಹುಲ್ಲಟ್ಟಿ ಕಾಳೇಗೌಡರ ಕುಟುಂಬ ವರ್ಗದವರಿಂದ ವಿಶೇಷ ಪೂಜೆ ಮತ್ತು ಅಭಿಷೇಕ ನಡೆಸಲಾಯಿತು. ಬಳಿಕ ಆಂಜನೇಯಸ್ವಾಮಿ ಉತ್ಸವವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು. ಉತ್ಸವ ಮನೆ ಮುಂದೆ ಬಂದಂತಹ ಸಂದರ್ಭದಲ್ಲಿ ಭಕ್ತರು ದೇವರಿಗೆ ಪೂಜೆ ಸಲ್ಲಿಸಿ ಭಕ್ತಿಭಾವ ಪ್ರದರ್ಶಿಸಿದರು. ಉತ್ಸವದ ಬಳಿಕ ರಾತ್ರಿ ಅನ್ನ ಸಂತರ್ಪಣೆ ನಡೆಯಿತು, ಚಿನಕುರಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ನೂರಾರು ಸಂಖ್ಯೆಯಲ್ಲಿ ಆಗಮಿಸಿ ಪ್ರಸಾದ ಸ್ವೀಕರಿಸಿದರು. ಸಂದರ್ಭದಲ್ಲಿ ಗ್ರಾಮದ ಯಜಮಾನರು, ಯುವಕರು, ಗ್ರಾಮಸ್ಥರು ಹಾಜರಿದರು.

ತಾಲೂಕಿನ ಬೀರಶೆಟ್ಟಿಹಳ್ಳಿ, ಬನಘಟ್ಟ, ಕೆಹೊಸೂರು ಗೇಟ್ ಬಳಿ ಇರುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದ ಹನುಮಂತರಾಯನಿಗೆ ನೂರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಪೂಜೆಸಲ್ಲಿಸಿದರು. ಬನಘಟ್ಟ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ಅನ್ನಸಂತರ್ಪಣೆ ನಡೆಯಿತು.

ತರಕಾರಿ ಮಾರುಕಟ್ಟೆ ಉಳಿಕೆ ಕಾಮಗಾರಿ ಕ್ರಿಯಾ ಯೋಜನೆಗೆ ಅನುಮೋದನೆ

ಮಂಡ್ಯ, ಡಿ.7– ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಸುಸಜ್ಜಿತವಾದ ತರಕಾರಿ ಮಾರುಕಟ್ಟೆ ನಿರ್ಮಾಣವಾಗುತ್ತಿದ್ದು, ಮಾರುಕಟ್ಟೆಯ ಉಳಿಕೆ ಕಾಮಗಾರಿಗಳ ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿ ಡಾ: ಹೆಚ್.ಎನ್. ಗೋಪಾಲಕೃಷ್ಣ ಅವರು ಇಂದು ನಡೆದ ಸಭೆಯಲ್ಲಿ ಅನುಮೋದನೆ ನೀಡಿದರು.



ಸಣ್ಣ ಮತ್ತು ಮಧ್ಯಮ ನಗರಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿ 4.97 ಕೋಟಿ ರೂ ವೆಚ್ಚದಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. 3.55 ಕೋಟಿ ರೂ ವೆಚ್ಚದಲ್ಲಿ ಒಳಾಂಗಣ ಅಭಿವೃದ್ಧಿ, ವಿದ್ಯುತ್ ಸಂಪರ್ಕ, ಸಿ.ಸಿ.ಚರಂಡಿ, ರಸ್ತೆ ನಿರ್ಮಾಣ, ಸಾರ್ವಜನಿಕ ಶೌಚಾಲಯ ಕಾಮಗಾರಿ ಕೈಗೊಂಡು ಮಾರುಕಟ್ಟೆಯ ನಿರ್ಮಾಣ ಪೂರ್ಣಗೊಳಿಸುವಂತೆ ತಿಳಿಸಿದರು. ನಿರ್ಮಾಣವಾಗುತ್ತಿರುವ ಮಾರುಕಟ್ಟೆಯಲ್ಲಿ 117 ಅಂಗಡಿ ಮಳಿಗೆಗಳಿದ್ದು, ಯಾವುದೇ ಗೊಂದಲ ಉಂಟಾಗದಂತೆ ನಿಯಮಾನುಸಾರ ಹಂಚಿಕೆಗೆ ಯೋಜನೆ ಸಿದ್ಧ ಮಾಡಿಕೊಳ್ಳಿ ಎಂದರು.

ಮಾರುಕಟ್ಟೆ ಜಿ+3 ಮಾದರಿಯಲ್ಲಿ ವಿನ್ಯಾಸ ಮಾಡಿಕೊಳ್ಳಲಾಗಿದ್ದು, ಮೊದಲನೇ ಮಹಡಿಯಲ್ಲಿ ಬ್ಯಾಂಕ್, ಕಚೇರಿ, ಮಾಲ್, ಕಿಡ್ಸ್ ಜೋನ್ ಮುಂತಾದ ವಹಿವಾಟುಗಳಿಗೆ ಅವಕಾಶ ನೀಡುವ ರೀತಿ ಮುಂದಿನ ದಿನಗಳಲ್ಲಿ ವಿನ್ಯಾಸ ಮಾಡಿಕೊಳ್ಳುವುದು ಉತ್ತಮ ಎಂದರು.

ಸಭೆಯಲ್ಲಿ ಮಂಡ್ಯ ನಗರಸಭೆ ಅಧ್ಯಕ್ಷ ಹೆಚ್.ಎಸ್. ಮಂಜು, ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್ ನಾಗರಾಜ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ತುಷಾರ ಮಣಿ, ಕಾರ್ಯಪಾಲಕ ಅಭಿಯಂತರ ನಾಗರಾಜು, ನಗರಸಭೆ ಆಯುಕ್ತ ಮಂಜುನಾಥ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅಲೆಮಾರಿಯ ಪತ್ನಿಯ ಶವದ ಸುತ್ತ ಆತಂಕ...

ಯಳಂದೂರು, ಡಿ. 7– ಆತ ಅಲೆಮಾರಿ. ಯಳಂದೂರು ಪಟ್ಟಣದಲ್ಲಿ ದೊಡ್ಡ ಚೀಲವೊಂದನ್ನಿಡಿದು ಚಿಂದಿ ಆಯುತ್ತಾ ಸಾಗುತ್ತಿರುತ್ತಾನೆ. ಸಂಜೆಯಾದರೆ ತಾನು ಆಯ್ದ ಪೇಪರ್, ಪ್ಲಾಸ್ಟಿಕ್ ಮುಂತಾದವುಗಳನ್ನು ಗುಜರಿಗೆ ಮಾರಿ, ಮದ್ಯ ಸೇವಿಸಿ, ಎಲ್ಲೆಂದರಲ್ಲಿ ಮಲಗುತ್ತಾನೆ. ಸುಮಾರು 15 ದಿನದಿಂದ ಈತ ಮಹಿಳೆಯೋರ್ವಳೊಂದಿಗೆ ಅರಣ್ಯ ಇಲಾಖೆ ಕಚೇರಿ ಬಳಿ ಇರುವ ಆಲೆಮನೆಯೊಂದರ ಪಕ್ಕದಲ್ಲಿ ಮಲಗುತ್ತಿದ್ದುದ್ದನ್ನು ಅನೇಕರು ನೋಡಿದ್ದಾರೆ.



ಈ ವ್ಯಕ್ತಿ ಮಂಗಳವಾರ ಬೆಳಗ್ಗೆ ಮಾಮೂಲಿಯಂತೆ ದೊಡ್ಡ ಚೀಲ ಹೊತ್ತು ಸಾಗುತ್ತಿದ್ದ. ಅದು ಹೆಣಭಾರ ಎಂಬುದು ಅದನ್ನು ಹೊತ್ತು ಆತ ಸಾಗುತ್ತಿದ್ದನ್ನು ಗಮನಿಸಿದರೆ ಗೊತ್ತಾಗುತ್ತಿತ್ತು. ಅದನ್ನು ನೋಡಿದ ಕೆಲವರು ಬೆಳಗ್ಗೆಯೇ ಇವನು ಹೊರಲಾರದಷ್ಟು ಚಿಂದಿ ಆಯ್ದಿದ್ದಾನೆ ಅಂದುಕೊಳ್ಳುವಷ್ಟರಲ್ಲಿ ಪಾನಮತ್ತನಾಗಿದ್ದ ಆತ ಹೊರಲಾರದೆ ಮೂಟೆ ಕೆಳಗಿಟ್ಟಿದ್ದಾನೆ. ಸ್ವಲ್ಪ ಸುಧಾರಿಸಿಕೊಂಡ ನಂತರ ಮತ್ತೆ ಮೂಟೆಯನ್ನು ಎತ್ತಲು ಪ್ರಯಾಸಪಡುತ್ತಿದ್ದ. ಆಗ ಮೂಟೆ ಕೆಳಗೆ ಉರುಳಿ, ಅದರೊಳಗಿಂದ ಮಹಿಳೆಯ ತಲೆ ಕಾಣಿಸಿದೆ. ಅದನ್ನು ನೋಡಿದ ಸಾರ್ವಜನಿಕರು ಶಾಕ್ ಆಗಿದ್ದಾರೆ. ಯಾರನ್ನೋ ಕೊಂದು ಶವವನ್ನು ಮೂಟೆ ಕಟ್ಟಿ ತೆಗೆದುಕೊಂಡು ಹೋಗುತ್ತಿರಬಹುದೇ...! ಸಾರ್ವಜನಿಕರು ತಡ ಮಾಡದೆ ಅವನನ್ನು ಅಲ್ಲೇ ಹಿಡಿದು ಕುಳ್ಳರಿಸಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಪೊಲೀಸರು ಬಂದು ಆತನ ವಿಚಾರಿಸಿದಾಗ ತಾನು ಮಂಡ್ಯ ಮೂಲದ ರವಿ ಎಂದು ಹೇಳಿಕೊಂಡ ಆ ಅಲೆಮಾರಿ ಮೃತಪಟ್ಟಿರುವುದು ತನ್ನ ಪತ್ನಿ ಕಾಳಮ್ಮ(26) ಎಂದು ತಿಳಿಸಿದ್ದಲ್ಲದೇ, ತಾವಿಬ್ಬರೂ ಅನಾಥರಾಗಿದ್ದು, ಚಿಂದಿ ಆಯ್ದು ಜೀವನ ಸಾಗಿಸುತ್ತಿದ್ದೇವೆ. ನಿನ್ನೆ (ಸೋಮವಾರ) ರಾತ್ರಿ ಇಬ್ಬರೂ ಕುಡಿದು ಮಲಗಿದ್ದೆವು. ಆ ವೇಳೆ ಪತ್ನಿ ಕುಡಿಯಲು ನೀರು ಕೇಳಿದಳು, ಕೆಲವೇ ಘಳಿಗೆಯಲ್ಲಿ ಆಕೆ ಮೃತಪಟ್ಟಳು. ಶವವನ್ನು ಸುವರ್ಣಾವತಿ ನದಿತೀರದಲ್ಲಿ ಹೂತು ಹಾಕಲು ಕೊಂಡೊಯ್ಯುತ್ತಿದ್ದೆ ಎಂದು ಹೇಳಿದ್ದಾನೆ. ಯಳಂದೂರು ಠಾಣೆಯ ಪ್ರಭಾರ ವಹಿಸಿಕೊಂಡಿರುವ ಸಂತೆಮರಳ್ಳಿ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಮಹೇಶ್ ಅವರಿಗೆ ಸಿಬ್ಬಂದಿ ವಿಷಯ ಮುಟ್ಟಿಸಿದ್ದಾರೆ. ಅವರು ನೀಡಿದ ಸೂಚನೆಯಂತೆ ಪೊಲೀಸರು ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನಿಸಿದರು.

ಮಹಿಳೆಯ ಸಾವು ಕೊಲೆಯಂತೂ ಅಲ್ಲ ಎಂದು ವೈದ್ಯರು ಅಭಿಪ್ರಾಯ ವ್ಯಕ್ತಪಡಿಸಿದ ನಂತರ ಪೊಲೀಸರು ಯಳಂದೂರು ಪಟ್ಟಣ ಪಂಚಾಯ್ತಿ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ. ಚಾಮರಾಜನಗರದಿಂದ ಆಂಬುಲೆನ್ಸ್‌ನಲ್ಲಿ ದೇಹವನ್ನು ತಂದು ಪಟ್ಟಣ ಪಂಚಾಯತಿ ಅಧಿಕಾರಿಗಳ ಸಹಕಾರದೊಂದಿಗೆ ಪೊಲೀಸರ ಸಮ್ಮುಖದಲ್ಲಿ ಅಲೆಮಾರಿ ರವಿ ತನ್ನ ಪತ್ನಿಯ ಅಂತ್ಯಸಂಸ್ಕಾರವನ್ನೂ ಯಳಂದೂರು ಸ್ಮಶಾನದಲ್ಲಿ ಇಂದು ನೆರವೇರಿಸಿದ್ದಾನೆ. ಮಹಿಳೆಯ ಅಂತ್ಯಸಂಸ್ಕಾರಕ್ಕೆ ಪಟ್ಟಣ ಪಂಚಾಯ್ತಿ ಅಧಿಕಾರಿಗಳು ಮತ್ತು ಪೊಲೀಸರು ಸಹಕಾರ ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಅಂತ್ಯಸಂಸ್ಕಾರದ ನಂತರವೂ ಅಧಿಕಾರಿಗಳು ಆತನಿಗೆ ಸ್ವಲ್ಪ ಧನ ಸಹಾಯವನ್ನು ಮಾಡಿದ್ದಾರೆ.

ಡಿ.12, ನಗರಕ್ಕೆ ಸಿಎಂ: ಸಿದ್ಧತೆ ಪರಿಶೀಲಿಸಿದ ಉಸ್ತುವಾರಿ ಸಚಿವ

ಚಾಮರಾಜನಗರ, ಡಿ.7– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಡಿ.12ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮ ನೆರವೇರಿಸಲಿರುವ ಹಿನ್ನೆಲೆಯಲ್ಲಿ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಇಂದು ಕ್ರೀಡಾಂಗಣಕ್ಕೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹಾಕಲಾಗುತ್ತಿರುವ ವಿಶಾಲವಾದ ಶಾಮಿಯಾನ, ಆಸನಗಳು, ವೇದಿಕೆ, ಇನ್ನಿತರ ವ್ಯವಸ್ಥೆಗಳನ್ನು ವೀಕ್ಷಿಸಿದರು. ಎತ್ತರದ ಹಾಗೂ ವಿಶಾಲವಾದ ವೇದಿಕೆ, ಹೆಚ್ಚು ಸಂಖ್ಯೆಯಲ್ಲಿ ಸಾರ್ವಜನಿಕರು ಕುಳಿತು ಕಾರ್ಯಕ್ರಮ ವೀಕ್ಷಣೆ ಮಾಡುವ ಉದ್ದೇಶದಿಂದ ನೆರಳಿಗೆ ಅನುಕೂಲವಾಗುವಂತೆ ಶಾಮಿಯಾನ ಹಾಕಬೇಕು. ಕುರ್ಚಿಗಳ ಸಂಖ್ಯೆಯು ಹೆಚ್ಚಾಗಿರಬೇಕು. ಕುಡಿಯುವ ನೀರು, ಸಾರ್ವಜನಿಕರಿಗೆ ತಾತ್ಕಾಲಿಕ ಶೌಚಾಲಯ ವ್ಯವಸ್ಥೆ ಸಮರ್ಪಕವಾಗಿ ಇರಬೇಕು ಎಂದು ಉಸ್ತುವಾರಿ ಸಚಿವರು ತಿಳಿಸಿದರು.



ಬಳಿಕ ಪ್ರವಾಸಿಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು, ಮುಖ್ಯಮಂತ್ರಿಯವರು ಡಿ.12ರಂದು ಬೆಳಿಗ್ಗೆ 10.30 ಗಂಟೆಗೆ ಚಾಮರಾಜನಗರಕ್ಕೆ, 12.30 ಗಂಟೆಗೆ ಹನೂರು ಪಟ್ಟಣಕ್ಕೆ ಆಗಮಿಸಿ ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಲಿದ್ದಾರೆ ಎಂದರು.

ಮುಖ್ಯಮಂತ್ರಿಯವರು ಹಲವಾರು ಪ್ರಮುಖ ಮಹತ್ವದ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಹನೂರು ವಿಧಾನಸಭಾ ಕ್ಷೇತ್ರದ 98 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಮೊದಲನೇ ಹಂತದ 192 ಕೋಟಿ ರೂ. ವೆಚ್ಚದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಲೋಕಾರ್ಪಣೆ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯ ಉದ್ಘಾಟಿಸುವರು. ಮಲೈ ಮಹದೇಶ್ವರ ಬೆಟ್ಟದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು, ಮಲೈ ಮಹದೇಶ್ವರ ಬೆಟ್ಟದಲ್ಲಿ 66/11 ಕೆ.ವಿ ವಿದ್ಯುತ್ ಉಪಕೇಂದ್ರದ ಕಾಮಗಾರಿ ಸೇರಿದಂತೆ ನಾನಾ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ ಎಂದು ಸಚಿವರು ವಿವರಿಸಿದರು.

ಫಲಾನುಭವಿಗಳಿಗೆ ಸರ್ಕಾರದ ಸವಲತ್ತುಗಳನ್ನು ವಿತರಿಸಲಾಗುತ್ತದೆ. ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿರುವ ಮೂಲ ಸೌಕರ್ಯ, ಇನ್ನಿತರ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಯೋಜನಾ ವಿಸ್ತೃತ ವರದಿ ತಯಾರಿಸಲಾಗಿದೆ. ಪ್ರಕೃತಿ ವಿಕೋಪಗಳ ಪ್ರಕರಣಗಳಿಗೆ ಈಗಾಗಲೇ ಪರಿಹಾರ ವಿತರಿಸಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.

ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಯಾವುದೇ ವಿದ್ಯಾರ್ಥಿವೇತನವನ್ನು ನಿಲ್ಲಿಸಿಲ್ಲ. ಈ ವಿಷಯದಲ್ಲಿ ಅನವಶ್ಯಕವಾಗಿ ಯಾವುದೇ ಗೊಂದಲಗಳಾಗುವುದು ಬೇಡ ಎಂದರು.

ಶಾಸಕರಾದ ಎನ್. ಮಹೇಶ್, ಸಿ.ಎಸ್. ನಿರಂಜನ್ ಕುಮಾರ್, ನಗರಸಭೆ ಅಧ್ಯಕ್ಷರಾದ ಸಿ.ಎಂ. ಆಶಾ, ಡಿಸಿ ಡಿ.ಎಸ್. ರಮೇಶ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆಎಂ. ಗಾಯಿತ್ರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಇತರೆ ಅಧಿಕಾರಿಗಳು ಇದ್ದರು.



ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿವೇತನ ರದ್ದು ಖಂಡಿಸಿ ಬಿವಿಎಫ್ ಪ್ರತಿಭಟನೆ

ಚಾಮರಾಜನಗರ, ಡಿ.7– ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿವೇತನ ರದ್ದುಪಡಿಸಿರುವ ಆದೇಶ ಹಿಂಪಡೆಯಬೇಕು ಹಾಗೂ ವಿದ್ಯಾರ್ಥಿ ವೇತನ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿ ಬಹುಜನ ವಾಲೆಂಟಿಯರ್ ಫೋರ್ಸ್ (ಬಿವಿಎಫ್) ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಬಿವಿಎಫ್ ಜಿಲ್ಲಾ ಸಂಯೋಜಕ ರವಿಮೌರ್ಯ, ಜಿಲ್ಲಾಧ್ಯಕ್ಷ ಚಂದ್ರಕಾಂತ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ವಿದ್ಯಾರ್ಥಿಗಳು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ರಚಿಸಿ ಕೆಲಕಾಲ ರಸ್ತೆತಡೆ ನಡೆಸಿದರು. ನಂತರ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ಪ್ರತಿಭಟನೆ ನೇತೃತ್ವ ವಹಿಸಿದ್ದ ಬಿವಿಎಫ್ ಜಿಲ್ಲಾಧ್ಯಕ್ಷ ಚಂದ್ರಕಾಂತ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿವೇತನ ರದ್ದುಪಡಿಸಿರುವ ಆದೇಶ ಹಿಂಪಡೆಯಬೇಕು ಇಲ್ಲದಿದ್ದರೆ ರಾಜ್ಯಾದ್ಯಂತ ಬಿವಿಎಫ್ ವತಿಯಿಂದ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಶಾಸಕ ಎನ್.ಮಹೇಶ್ ಮೌನವೇಕೆ: ಬಹುಜನ ವಾಲೆಂಟಿಯರ್ ಫೋರ್ಸ್ ಕಾರ್ಯಕರ್ತ ಹಾಗೂ ವಕೀಲ ಮಹೇಂದ್ರ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ಹೊರಡಿಸಿರುವ ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರದ್ದು ಆದೇಶ ವಿರುದ್ಧ ಶಾಸಕರು ಚಕಾರವೆತ್ತಿಲ್ಲ. ವಿದ್ಯಾರ್ಥಿಗಳ ಪರಿಶ್ರಮ, ಮತದಿಂದ ಗೆದ್ದ ಕೊಳ್ಳೇಗಾಲ ಕ್ಷೇತ್ರದ ಶಾಸಕರಾದ ಎನ್.ಮಹೇಶ್ ಅವರು ಕೂಡ ಈ ವಿಚಾರದಲ್ಲಿ ಮೌನವಾಗಿದ್ದಾರೆ ಇದು ಸರಿಯಲ್ಲ. ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಶಾಸನಸಭೆಯಲ್ಲಿ ಮಾತನಾಡುತ್ತೇನೆ ಎಂದು ಗೆದ್ದು ಹೋದ ನೀವು, ಇಂದು ಬಾಯಿ ಮುಚ್ಚಿಕೊಂಡು ಕುಳಿತಿದ್ದೀರಾ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಯೋಜಕ ರವಿಮೌರ್ಯ, ತಾಲೂಕು ಅಧ್ಯಕ್ಷ ಮನೋಜ್, ತಾಲೂಕು ಸಂಯೋಜಕ ಮಹೇಶ್, ಆಶ್ರಿತ್, ಮನೋಜ್, ರಾಮಸಮುದ್ರ ಬಾಬು, ಮಹೇಶ್, ರಾಜೇಂದ್ರ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಾಳೆ ವಿಶೇಷಚೇತನರಿಗೆ ಕೃತಕ ಕಾಲು ಜೋಡಣೆ; ಪುನೀತ್ ಸ್ಮರಣೆ



ಮೈಸೂರು,ಡಿ.7(ಪಿಎಂ)– ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ, ಮೈಸೂರು ಸ್ತ್ರೀ ಶಕ್ತಿ ಮಹಿಳಾ ವೇದಿಕೆ, ಲಯನ್ಸ್ ಕ್ಲಬ್ ಆಫ್ ಕಾಮಧೇನು, ಲಯನ್ಸ್ ಕ್ಲಬ್ ಆಫ್ ಸಿರಿ, ಲಯನ್ಸ್ ಕ್ಲಬ್ ಆಫ್ ಸ್ಯಾಂಡಲ್‌ವುಡ್ ಸಂಯುಕ್ತಾಶ್ರಯದಲ್ಲಿ ಡಿ.9ರಂದು ವಿಶ್ವ ವಿಶೇಷಚೇತನರ ದಿನಾಚರಣೆ ಪ್ರಯುಕ್ತ ಬಡ ಕುಟುಂಬದ 10 ಮಂದಿ ವಿಶೇಷಚೇತನರಿಗೆ ಕೃತಕ ಕಾಲು ಜೋಡಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ ಕಾರ್ಯದರ್ಶಿ ಎಸ್.ಪ್ರಮೀಳಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಕ್ಕೆ ಹೊಸಮಠದ ನಟರಾಜ ಕಲ್ಯಾಣ ಮಂಟಪದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಸುಮಾರು ಲಕ್ಷ ರೂ. ವೆಚ್ಚದ ಕೃತಕ ಕೈ ಮತ್ತು ಕಾಲುಗಳನ್ನು ವೈದ್ಯರು ವಿಶೇಷಚೇತನರಿಗೆ ಜೋಡಣೆ ಮಾಡಲಿದ್ದಾರೆ. ನಾಲ್ವರು ಮಹಿಳಾ ವಿಶೇಷಚೇತನರು, ಆರು ಮಂದಿ ಪುರುಷ ವಿಶೇಷಚೇತನರು ಈ ಸೌಲಭ್ಯ ಪಡೆಯಲಿದ್ದಾರೆ. ಇದೇ ಸಂದರ್ಭದಲ್ಲಿ ನಟ ಪುನೀತ್ ರಾಜ್‌ಕುಮಾರ್ ಅವರ ಪುಣ್ಯಸ್ಮರಣೆ ಸಹ ಏರ್ಪಡಿಸಲಾಗಿದೆ ಎಂದರು. ಹೊಸಮಠದ ಶ್ರೀಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸೇರಿದಂತೆ ಮತ್ತಿತರ ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ ಅಧ್ಯಕ್ಷ ಟಿ.ಸುರೇಶ್, ನಟ ಲಕ್ಷ್ಮೀಪತಿ ಬಾಲಾಜಿ, ಮುಖಂಡರಾದ ಜಿ.ಎನ್.ಉಮಾಶಂಕರ್, ಆಶಾ ಜೆ.ಮಂಜುನಾಥ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಡಿ.30ರಂದು 'ಪದವಿ ಪೂರ್ವ' ತೆರೆಗೆ



ಮೈಸೂರು,ಡಿ.7(ಪಿಎಂ)–'ಪದವಿ ಪೂರ್ವ' ಕನ್ನಡ ಸಿನಿಮಾ ಡಿ.30ರಂದು ರಾಜ್ಯದ 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಗೊಳ್ಳಲಿದೆ ಎಂದು ಸಿನಿಮಾ ನಿರ್ದೇಶಕ ಹರಿಪ್ರಸಾದ್ ಜಯಣ್ಣ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಯುವ ಕಲಾವಿದರಿಗೆ ಈ ಸಿನಿಮಾ ಉತ್ತಮ ವೇದಿಕೆ ಕಲ್ಪಿಸಿದೆ. ಯೋಗರಾಜ್ ಭಟ್ ಮತ್ತು ರವಿ ಶಾಮನೂರು ಈ ಚಿತ್ರದ ನಿರ್ಮಾಪಕರಾಗಿದ್ದು, 1996ರ ದಿನಗಳಲ್ಲಿ ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಯುವ ಮನಸ್ಸುಗಳ ಚಿತ್ರಣವನ್ನು ಸಿನಿಮಾ ನೀಡಲಿದೆ ಎಂದರು. ಚಿತ್ರದ ನಾಯಕ ನಟ ಪೃಥ್ವಿ, ನಾಯಕ ನಟಿ ಅಂಜಲಿ ಅನೀಶ್, ನಟರಾದ ರಜನೀಶ್, ವಿಜಯ್‌ಕಿರಣ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಡಿ.10, ಮೈಸೂರು ಒಡಿಸ್ಸಿ ನೃತ್ಯ ಉತ್ಸವ



ಮೈಸೂರು,ಡಿ.7(ಪಿಎಂ)– ಮೈಸೂರಿನ ಗೋಕುಲಂನ ರುದ್ರ ನೃತ್ಯಯೋಗ ಶಾಲಾ ವತಿಯಿಂದ ಒಡಿಸ್ಸಿ ಇಂಟರ್‌ನ್ಯಾಷನಲ್ ಫೋರಂ, ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್ ಸಹಭಾಗಿತ್ವದಲ್ಲಿ ಇದೇ ಮೊದಲ ಬಾರಿಗೆ ಮೈಸೂರಿನಲ್ಲಿ ಡಿ.10ರಂದು 'ಒಡಿಸ್ಸಿ ನೃತ್ಯ ಉತ್ಸವ' ಆಯೋಜಿಸಲಾಗಿದೆ ಎಂದು ರುದ್ರ ನೃತ್ಯಯೋಗ ಶಾಲಾ ಸಂಸ್ಥಾಪಕಿ ವಿದುಷಿ ಸಿಂಧು ಕಿರಣ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಭಾಗದಲ್ಲಿ ಅಪರೂಪ ಎನ್ನಬಹುದಾದ ಒಡಿಸ್ಸಿ ನೃತ್ಯ ಪರಂಪರೆಯನ್ನು ಪರಿಚಯಿಸುವ ದೃಷ್ಟಿಯಿಂದ ಈ ನೃತ್ಯ ಉತ್ಸವ ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5.30ಕ್ಕೆ ಮೈಸೂರಿನ ರಾಮಕೃಷ್ಣನಗರದ ರಮಾ ಗೋವಿಂದ ರಂಗ ಮಂದಿರದಲ್ಲಿ ನಡೆಯುವ ಉತ್ಸವದಲ್ಲಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಹೆಸರಾಂತ ಒಡಿಸ್ಸಿ ನೃತ್ಯ ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಇದೆ ಎಂದು ಹೇಳಿದರು.

ಅತಿಥಿಗಳಾಗಿ ಅಂತಾರಾಷ್ಟ್ರೀಯ ಒಡಿಸ್ಸಿ ನೃತ್ಯ ಮಹೋತ್ಸವದ ಸಂಸ್ಥಾಪಕ ಶಾಮ್ ಹರಿಚಕ್ರ, ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್‌ನ ಅಧ್ಯಕ್ಷ ಘನಶ್ಯಾಮ ಪ್ರಧಾನ್, ಮೈಸೂರಿನ ಭೂಷಣ್ ಅಕಾಡೆಮಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್‌ನ ಸಂಸ್ಥಾಪಕ ಬದರಿ ದಿವ್ಯ ಭೂಷಣ್, ಶ್ರೀ ಕೃಷ್ಣ ಗಾನಸಭಾದ ಅಧ್ಯಕ್ಷ ಶ್ರೀಧರ್ ರಾಜ ಅರಸ್, ನೃತ್ಯಗಿರಿ ಸ್ಕೂಲ್ ಆಫ್ ಡಾನ್ಸ್ ಅಂಡ್ ರಿಸರ್ಚ್ ಸೆಂಟರ್‌ನ ನಿರ್ದೇಶಕಿ ಕೃಪಾ ಫಡ್ಕೆ ಪಾಲ್ಗೊಳ್ಳಲಿದ್ದಾರೆ ಎಂದರು. ಈ ಉತ್ಸವದಲ್ಲಿ ವಿದುಷಿ ಶರ್ಮಿಲಾ ಮುಖರ್ಜಿ ಮತ್ತು ತಂಡದವರ ಒಡಿಸ್ಸಿ ನೃತ್ಯ ಮುಖ್ಯ ಆಕರ್ಷಣೆಯಾಗಿದೆ. ಬೆಂಗಳೂರಿನ ಚೈತ್ರಾ ದಾಸೇಗೌಡ, ಸೋಹಿನಿ ಬೋಸ್ ಬ್ಯಾನರ್ಜಿ, ಅನುಶ್ರೀ ಪದ್ಮನಾಭ, ಬೀದರ್‌ನ ಜ್ಯೋತಿ ಪ್ರವ, ಸಮಂಥರಿ, ನವದೆಹಲಿಯ ಓಡಿಸ್ಸಿ ದರ್ಶನ ನೃತ್ಯ ಅಕಾಡೆಮಿಯ ಸುದರ್ಶನ ಸಾಹೋ, ರುದ್ರ ನೃತ್ಯಯೋಗ ಶಾಲೆಯ ಸಮವೇದ್ ಮೂಲ, ಹರ್ಷ ಪವಿತ್ರನ್, ಪೃಥೆ ಹವಾಲ್ದಾರ್, ಸ್ತುತ್ಯಶ್ರೀ ಸೇರಿದಂತೆ ಇನ್ನಿತರ ನೃತ್ಯ ಕಲಾವಿದರ ನೇತೃತ್ವದಲ್ಲಿ ಒಟ್ಟು 8 ತಂಡಗಳು ಪ್ರದರ್ಶನ ನೀಡಲಿವೆ ಎಂದು ತಿಳಿಸಿದರು. ಪುರಿ ಜಗನ್ನಾಥ ಕಲ್ಚರಲ್ ಅಂಡ್ ವೆಲ್‌ಫೇರ್ ಟ್ರಸ್ಟ್‌ನ ಅಧ್ಯಕ್ಷ ಘನಶ್ಯಾಮ ಪ್ರಧಾನ್, ಪತ್ರಕರ್ತ ವೈದ್ಯ, ನೃತ್ಯ ಕಲಾವಿದೆಯರಾದ ಓಜಸ್ ಬಳ್ಳೂರು, ಪೃಥೆ ಹವಾಲ್ದಾರ್ ಗೋಷ್ಠಿಯಲ್ಲಿದ್ದರು.



ನಂಜನಗೂಡು ವಿಧಾನಸಭಾ ಕ್ಷೇತ್ರ

ದಕ್ಷಿಣ ಕಾಶಿಯಲ್ಲಿ ಸೆಣಸಾಟಕ್ಕೆ ಸಜ್ಜಾಗುತ್ತಿರುವ ಸ್ಪರ್ಧಿಗಳು



■ ಹೆಚ್.ಡಿ.ರಂಗಸ್ವಾಮಿ

ನಂಜನಗೂಡು ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಮುಂಬರುವ 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ರಂಗು ದಿನೇ ದಿನೇ ಪ್ರಖರಗೊಳ್ಳುತ್ತಿದ್ದು ಕಾಂಗ್ರೆಸ್, ಜೆಡಿಎಸ್ ಪಕ್ಷಗಳಿಂದ ಅಭ್ಯರ್ಥಿಗಳ ಘೋಷಣೆಯಾಗದೆ ಟಿಕೆಟ್ ಆಕಾಂಕ್ಷಿಗಳು ಮತ್ತು ಆ ಪಕ್ಷಗಳ ಕಾರ್ಯಕರ್ತರಲ್ಲಿ ಗೊಂದಲ ಮನೆ ಮಾಡಿದೆ.

ಬಿಜೆಪಿ ಹಾದಿ ಸುಗಮ



ಹರ್ಷವರ್ಧನ್

ಒಂದು ಕಾಲದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಭದ್ರ ಕೋಟೆಯಾಗಿದ್ದ ನಂಜನಗೂಡು ಕ್ಷೇತ್ರದಲ್ಲಿ ಪ್ರಥಮ ಬಾರಿಗೆ ಬಿಜೆಪಿಯಿಂದ ಸ್ಪರ್ಧಿಸಿ, ಜಯಗಳಿಸುವ ಮೂಲಕ ಬಿಜೆಪಿ ಖಾತೆ ತೆರೆದ ಕೀರ್ತಿ ಶಾಸಕ ಬಿ.ಹರ್ಷವರ್ಧನ್ ಅವರಿಗೆ ಸಲ್ಲುತ್ತದೆ. ಬಿ.ಹರ್ಷವರ್ಧನ್ ರಾಜ್ಯದ ಪ್ರಭಾವಿ ರಾಜಕಾರಣಿ ಮಾತ್ರವಲ್ಲ, ರಾಜಕೀಯ ಮುತ್ಸದ್ದಿಯೂ ಆದ ಬಿ.ಬಸವಲಿಂಗಪ್ಪರವರ ಮೊಮ್ಮಗ ಮತ್ತು ನಾಡಿನ ಮುತ್ಸದ್ದಿ ರಾಜಕಾರಣಿ ವಿ.ಶ್ರೀನಿವಾಸ ಪ್ರಸಾದ್ ಅವರ ಅಳಿಯ. ಕ್ಷೇತ್ರದಲ್ಲಿ ಶಾಸಕರಾಗಿ ಆಯ್ಕೆಯಾದ ನಂತರ ಸುಮಾರು 700 ಕೋಟಿಗಿಂತಲೂ ಹೆಚ್ಚಿನ ಅನುದಾನ ತಂದು ದಶಕಗಳ ಕನಸಾಗಿದ್ದ ನುಗು ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸಿರುವುದಲ್ಲದೆ ಸಂಘಟನೆಗೂ ಹೆಚ್ಚು ಒತ್ತು ನೀಡಿದ್ದಾರೆ. ಆದ ಕಾರಣ ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ನಳಿನ್‌ಕುಮಾರ್ ಕಟೀಲ್ ನಂಜನಗೂಡಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಬಿ.ಹರ್ಷವರ್ಧನ್ ಯುವ ಉತ್ಸಾಹಿ ಜನಪರ ನಾಯಕರಾಗಿದ್ದು, ಇವರನ್ನು ಮತ್ತೊಮ್ಮೆ ಗೆಲ್ಲಿಸಿದರೆ ನಂಜನಗೂಡು ಅಭಿವೃದ್ಧಿಗೆ ಸಹಕಾರಿ ಎಂದು ಸಭೆಗಳಲ್ಲಿ ಕಾರ್ಯಕರ್ತರು ಹಾಗೂ ಜನತೆಯಲ್ಲಿ ಮನವಿ ಮಾಡಿ ರುವ ಕಾರಣ ಅವರೇ ಮುಂದಿನ ಅಭ್ಯರ್ಥಿಯಾಗುವುದರಲ್ಲಿ ಸಂಶಯವಿಲ್ಲ.

ನಾನು ಕೂಡ ಬಿಜೆಪಿ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿ: ಎಸ್.ಮಹದೇವಯ್ಯ



ಮಹದೇವಯ್ಯ

ಇತ್ತ 2008ರಲ್ಲಿ ಬಿಜೆಪಿಯಿಂದ ಮತ್ತು 2013ರ ಚುನಾವಣೆಯಲ್ಲಿ ಕೆಜೆಪಿಯಿಂದ ಅಭ್ಯರ್ಥಿಯಾಗಿದ್ದ, ಹಾಲಿ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಎಸ್.ಮಹದೇವಯ್ಯ ಕೂಡ ನಾನೂ ನಂಜನಗೂಡು ಕ್ಷೇತ್ರದ ಬಿಜೆಪಿ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದೇನೆ. ಬಿಜೆಪಿಯನ್ನು ತಾಲೂಕಲ್ಲಿ ತಳಮಟ್ಟದಿಂದ ಸಂಘಟಿಸಿದ್ದೇನೆ. 2017ರ ಉಪ ಚುನಾವಣೆಯಲ್ಲಿ ಹಿರಿಯ ರಾಜಕಾರಣಿ ಎಂಬ ಕಾರಣಕ್ಕೆ ಕ್ಷೇತ್ರವನ್ನು ವಿ.ಶ್ರೀನಿವಾಸ ಪ್ರಸಾದ್‌ರಿಗೆ ಬಿಟ್ಟುಕೊಟ್ಟಿದ್ದೆ. ಕಳೆದ ವಿಧಾನ ಸಭಾ ಚುನಾವಣೆಯಲ್ಲೂ ಟಿಕೆಟ್ ಅವಕಾಶ ಕೈ ತಪ್ಪಿದೆ. ಆದ ಕಾರಣ ಈ ಬಾರಿ ಟಿಕೆಟ್ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಈ ಬಾರಿ ಅವಕಾಶ ಕಲ್ಪಿಸುವಂತೆ ಪಕ್ಷದ ವರಿಷ್ಠರನ್ನು ಕೋರಿದ್ದೇನೆ ಎನ್ನುವ ಮೂಲಕ ಬಿಜೆಪಿ ಪಕ್ಷದಿಂದ ಇಬ್ಬರು ಆಕಾಂಕ್ಷಿಗಳಿದ್ದೇವೆ ಎಂದು ಪರೋಕ್ಷವಾಗಿ ಹಕ್ಕು ಪ್ರತಿಪಾದಿಸಿದ್ದಾರೆ.

ಧ್ರುವನಾರಾಯಣ್-ಮಹದೇವಪ್ಪ ನಡುವೆ ಪೈಪೋಟಿ





ಚುನಾವಣೆಗೆ ಸ್ಪರ್ಧಿಸಲು ಬಯಸುವ ಆಕಾಂಕ್ಷಿಗಳು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಬೇಕೆಂಬ ಕೆಪಿಸಿಸಿ ಸೂಚನೆಯ ಮೇರೆಗೆ ನಂಜನಗೂಡು ಮೀಸಲು ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ್, ಮಾಜಿ ಸಚಿವ ಎಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮತ್ತು ಮೈಸೂರು ತಾಲೂಕು ನಾಗವಾಲ ನರೇಂದ್ರ ಅರ್ಜಿ ಸಲ್ಲಿಸಿದ್ದಾರೆ.



ಕೇಶವಮೂರ್ತಿ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ 2 ಬಾರಿ ಸಂಸದರಾಗಿದ್ದರು. ನಂಜನಗೂಡು ವಿಧಾನಸಭಾ ಕ್ಷೇತ್ರ ಕೂಡ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿರುವ ಕಾರಣ ನಂಜನಗೂಡು ಕ್ಷೇತ್ರದಿಂದ ಸ್ಪರ್ಧಿಸುವ ಆಕಾಂಕ್ಷೆ ಉಳ್ಳವರಾ ಗಿದ್ದು, ಆ ಮೂಲಕ ರಾಜ್ಯ ರಾಜಕಾರಣದತ್ತ ಒಲವು ತೋರಿದ್ದಾರೆ. ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಕೂಡ ನಂಜನಗೂಡು ತಾಲೂಕಿನ ಹದಿನಾರು ಗ್ರಾಮದವರೇ ಆಗಿರುವ ಕಾರಣ ಪಕ್ಕದ ಟಿ.ನರಸೀಪುರ ಕ್ಷೇತ್ರವನ್ನು ತಮ್ಮ ಮಗ ಸುನೀಲ್‌ಬೋಸ್‌ಗೆ ಬಿಟ್ಟುಕೊಟ್ಟು ನಂಜನಗೂಡು ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿ, ಅರ್ಜಿ ಸಲ್ಲಿಸಿದ್ದಾರೆ. 2017ರ ಉಪಚುನಾವಣೆಯಲ್ಲಿ ಜಯಗಳಿಸಿದ್ದ ಮತ್ತು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ಸೋತಿರುವ ಧ್ರುವನಾರಾಯಣ್ ಅವರ ಸೋದರ ಸಂಬಂಧಿ ಕಳಲೆ ಕೇಶವಮೂರ್ತಿ ಕೂಡ ಮತ್ತೊಮ್ಮೆ ಅವಕಾಶ ಮಾಡಿಕೊಡುವಂತೆ ವರಿಷ್ಠರನ್ನು ಕೋರಿದ್ದಾರೆ. ಆದರೆ ಕ್ಷೇತ್ರದಲ್ಲಿ ಆರ್.ಧ್ರುವನಾರಾಯಣ್ ಮತ್ತು ಎಚ್.ಸಿ.ಮಹದೇವಪ್ಪ ನಡುವೆ ಟಿಕೆಟ್ ಪೈಪೋಟಿ ಎದುರಾಗಿದೆ. ಅಲ್ಲದೆ ಇಬ್ಬರೂ ಪ್ರಭಾವಿ ನಾಯಕರಾಗಿರುವ ಕಾರಣ ಕಾರ್ಯಕರ್ತರಲ್ಲಿ ಗೊಂದಲದ ಜೊತೆಗೆ ಯಾರ ಬೆಂಬಲಿಸುವುದು ಎಂಬ ವಿಚಾರದಲ್ಲಿ ಉಭಯ ಸಂಕಟ ಶುರುವಾಗಿದೆ. ಮೈಸೂರು ಜಿಲ್ಲೆಯ ನಂಜನಗೂಡು, ಟಿ.ನರಸೀಪುರ ಕ್ಷೇತ್ರಗಳು ಅಕ್ಕಪಕ್ಕದ ಮೀಸಲು ಕ್ಷೇತ್ರವಾಗಿರುವ ಕಾರಣ ಟಿ.ನರಸೀಪುರಕ್ಕೆ ಸುನೀಲ್‌ಬೋಸ್, ನಂಜನಗೂಡಿಗೆ ಎಚ್.ಸಿ.ಮಹದೇವಪ್ಪ ಒಂದೇ ಕುಟುಂಬಕ್ಕೆ ಟಿಕೆಟ್ ನೀಡುವುದಿಲ್ಲ, ಮತ್ತು ಕುಟುಂಬ ರಾಜಕಾರಣಕ್ಕೆ ಬ್ರೇಕ್ ಹಾಕುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ನ ಸೂಚನೆಯಂತೆ ಇಬ್ಬರಿಗೆ ಟಿಕೆಟ್ ನೀಡುವುದಿಲ್ಲವೆಂಬ ನಿಯಮವಿರುವ ಕಾರಣ ಎಚ್.ಸಿ.ಮಹದೇವಪ್ಪರವರಿಗೆ ನಂಜನಗೂಡು ಕ್ಷೇತ್ರದ ಟಿಕೆಟ್ ದೊರಕುವುದು ಅಸಾಧ್ಯ, ಮಾಜಿ ಸಂಸದ ಆರ್. ಧ್ರುವನಾರಾಯಣ್ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಕಾರಣ ಅವರೇ ಅಭ್ಯರ್ಥಿಯಾಗಲಿದ್ದಾರೆ. ಆದ್ದರಿಂದಲೇ ಈಗಾಗಲೇ 2 ಸುತ್ತಿನ ಪ್ರಚಾರವನ್ನೂ ಮುಗಿಸಿ ಕ್ಷೇತ್ರವನ್ನು ಗಟ್ಟಿಗೊಳಿಸುತ್ತಿದ್ದಾರೆ ಎಂಬುದು ಆರ್.ಧ್ರುವನಾಯಣ್ ಅಭಿಮಾನಿಗಳ ಲೆಕ್ಕಾಚಾರವಾಗಿದೆ. ಇತ್ತ ಎಚ್.ಸಿ.ಮಹದೇವಪ್ಪ ಅಭಿಮಾನಿಗಳು ಸಿದ್ದರಾಮಯ್ಯರವರ ಶಿಷ್ಯರಾಗಿರುವ ಕಾರಣ ಮತ್ತು 2016ರಲ್ಲಿ ವಿ.ಶ್ರೀನಿವಾಸ ಪ್ರಸಾದ್‌ರನ್ನು ಸಚಿವ ಸಂಪುಟದಿಂದ ಕೈಬಿಟ್ಟ ನಂತರ ಅವರ ರಾಜೀನಾಮೆಯಿಂದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಅವರ ಜೊತೆಗೆ ಹೊರಟು ಹೋದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟಿಸುವ ಹೊಣೆಯನ್ನು ಸಿದ್ದರಾಮಯ್ಯ ಸೂಚನೆ ಮೇರೆಗೆ ಸುನೀಲ್‌ಬೋಸ್ ಹೊತ್ತಿದ್ದರು. ಅಲ್ಲದೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಆದ್ದರಿಂದ ಟಿಕೆಟ್ ಕೈ ತಪ್ಪುವ ಪ್ರಶ್ನೆಯೇ ಇಲ್ಲ ಎಂಬುದು ಮಹದೇವಪ್ಪ ಅಭಿಮಾನಿಗಳ ಲೆಕ್ಕಾಚಾರವಾಗಿದೆ. ಇಬ್ಬರೂ ನಾಯಕರ ಪೈಪೋಟಿಯ ನಡುವೆ ಯಾರಿಗೆ ಅದೃಷ್ಟ ಒಲಿಯುವುದು ಎಂಬ ಕುತೂಹಲದಲ್ಲಿ ಸಾರ್ವಜನಿಕರು ಇದ್ದಾರೆ.



ನಂಜನಗೂಡು ವಿಧಾನಸಭಾ ಕ್ಷೇತ್ರ 1952ರಲ್ಲಿ ದ್ವಿಸದಸ್ಯ ಕ್ಷೇತ್ರವಾಗಿತ್ತು. ಪಕ್ಷೇತರರಾದ ಹೆಜ್ಜಿಗೆ ಎಂ.ಲಿಂಗಣ್ಣ, ಹಾಗೂ ಕಾಂಗ್ರೆಸ್ ಪಕ್ಷದ ಎಂ.ಮಾದಯ್ಯ ಆಯ್ಕೆಯಾಗಿದ್ದರು. 1957ರಲ್ಲಿ ಏಕ ಸದಸ್ಯ ಕ್ಷೇತ್ರವಾದ ನಂತರ ಕಾಂಗ್ರೆಸ್ ಪಕ್ಷದಿಂದ ಪಿ.ಮಹದೇವಯ್ಯ ಆಯ್ಕೆಯಾದರು. 1962ರಲ್ಲಿ ಕಾಂಗ್ರೆಸ್ ಪಕ್ಷದಿಂದ ಎನ್.ರಾಚಯ್ಯ ಆಯ್ಕೆಯಾದರು. 1967ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಎಲ್.ಶ್ರೀಕಂಠಯ್ಯ ಆಯ್ಕೆಯಾದರು. 1972ರಲ್ಲಿ ಕಾಂಗ್ರೆಸ್ ಪಕ್ಷದಿಂದ ಮತ್ತು 1978ರಲ್ಲಿ ಇಂದಿರಾ ಕಾಂಗ್ರೆಸ್‌ನಿಂದ ಕೆ.ಬಿ.ಶಿವಯ್ಯ 2 ಬಾರಿ ಆಯ್ಕೆಯಾಗಿದ್ದರು. 1983, 1989, 1999ರಲ್ಲಿ ಎಂ.ಮಹದೇವು ಮತ್ತು 1985, 1994, 2004ರಲ್ಲಿ ಡಿ.ಟಿ.ಜಯಕುಮಾರ್ ಆಯ್ಕೆಯಾಗಿದ್ದರು. 2008ರಲ್ಲಿ ಮೀಸಲು ವಿಧಾನಸಭಾ ಕ್ಷೇತ್ರವಾದ ನಂತರ ವಿ.ಶ್ರೀನಿವಾಸ ಪ್ರಸಾದ್ ಸತತ 2 ಬಾರಿ ಗೆದ್ದರೆ, 2017ರ ಉಪಚುನಾವಣೆಯಲ್ಲಿ ಸೋಲು ಕಂಡಿದ್ದರು. 2018ರ ಚುನಾವಣೆಯಲ್ಲಿ ಅವರ ಅಳಿಯ ಬಿ.ಹರ್ಷವರ್ಧನ್ ಅವರನ್ನು ಕಣಕ್ಕಿಳಿಸಿ, ಭಾರೀ ಅಂತರದ ಜಯ ಗಳಿಸುವ ಮೂಲಕ ಉಪ ಚುನಾವಣೆಯ ಸೋಲಿನ ಸೇಡನ್ನು ತೀರಿಸಿಕೊಂಡಿದ್ದರು.

ಜೆಡಿಎಸ್‌ನಲ್ಲೂ ಇಬ್ಬರು ಆಕಾಂಕ್ಷಿಗಳು



ಶಿವಕುಮಾರಸ್ವಾಮಿ



ಮಾದೇಶ

ಮೈಸೂರು ತಾಲೂಕು ಬೆಳವಾಡಿ ಶಿವಕುಮಾರಸ್ವಾಮಿ ಮತ್ತು ಮಾದೇಶ ನಡುವೆ ಜೆಡಿಎಸ್ ಟಿಕೆಟ್‌ಗಾಗಿ ಪೈಪೋಟಿ ಎದುರಾಗಿದೆ. ಕಳೆದ ಬಾರಿ ಬೆಳವಾಡಿ ಶಿವಕುಮಾರಸ್ವಾಮಿ ಅವರಿಗೆ ಟಿಕೆಟ್ ಕೈತಪ್ಪಿತ್ತು. ಆದ್ದರಿಂದ ಈ ಬಾರಿ ಎಲ್ಲವನ್ನೂ ಸರಿಪಡಿಸುತ್ತೇವೆ. ಬೆಳವಾಡಿ ಶಿವಕುಮಾರಸ್ವಾಮಿ ನಮ್ಮ ಮನೆ ಮಗನಿದ್ದಂತೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಮತ್ತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿದ್ದು, ಇವರನ್ನೇ ಪಕ್ಷದ ಅಭ್ಯರ್ಥಿಯನ್ನಾಗಿಸುವ ಇಂಗಿತ ಈಗಾಗಲೇ ವ್ಯಕ್ತಪಡಿಸಿರುವುದರಿಂದ ಬೆಳವಾಡಿ ಶಿವಕುಮಾರಸ್ವಾಮಿ ಅವರೇ ಬಹುತೇಕ ಅಭ್ಯರ್ಥಿಯಾಗಬಹುದು ಎಂಬ ಮಾತಿದೆ.

ಎನ್.ಆರ್. ಪೊಲೀಸರಿಂದ ಅಪರಾಧ ತಡೆ ಜಾಗೃತಿ ಜಾಥಾ




ಮೈಸೂರು, ಡಿ.7(ಆರ್‌ಕೆ)–ಮೈಸೂರಿನ ಎನ್.ಆರ್. ಠಾಣೆ ಪೊಲೀಸರು ಇಂದು ಅಪರಾಧ ತಡೆ ಜಾಗೃತಿ ಜಾಥಾ ನಡೆಸಿದರು.

ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಎನ್.ಆರ್.ಮೊಹಲ್ಲಾದ ರಾಜೇಂದ್ರ ನಗರದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಇನ್ಸ್‌ಪೆಕ್ಟರ್ ಅಜರುದ್ದೀನ್ ಅವರು ಶಾಲಾ ಮಕ್ಕಳಿಗೆ ಅಪರಾಧಗಳನ್ನು ತಡೆಗಟ್ಟುವಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ನಾಗರಿಕರ ಪಾತ್ರ ಕುರಿತು ಅರಿವು ಮೂಡಿಸಿದರು.

ತಾವು ವಾಸ ಮಾಡುವ ಮನೆ, ಬಡಾವಣೆಗಳಲ್ಲಿ ಅಪರಿಚಿತ ವ್ಯಕ್ತಿಗಳು, ವಾಹನಗಳು ಸಂಶಯಾಸ್ಪದವಾಗಿ ಓಡಾಡುತ್ತಿದ್ದರೆ, ನೀವು ಮನೆಗೆ ಬೀಗ ಹಾಕಿ ಹೊರ ಊರುಗಳಿಗೆ ಹೋಗುವಾಗ, ಯಾರಾದರೂ ಹಣಕಾಸು ವಹಿವಾಟು ನಡೆಸಿ ಮೋಸ ಮಾಡುತ್ತಿರುವುದು ಕಂಡು ಬಂದರೆ ವ್ಯಾಪ್ತಿಯ ಪೊಲೀಸ್ ಠಾಣೆ ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂಗೆ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು. ನಂತರ ರಾಜೇಂದ್ರ ನಗರ ಸರ್ಕಲ್‌ನಿಂದ ಜಾಥಾ ಆರಂಭಿಸಿ ಕುರಿಮಂಡಿ ಸರ್ಕಲ್, ಶಂಕರ್ ನರ್ಸಿಂಗ್ ಹೋಂ ವೃತ್ತದ ಮೂಲಕ ಎನ್.ಆರ್. ಮೊಹಲ್ಲಾದ ವಿವಿಧ ರಸ್ತೆಗಳಲ್ಲಿ ಸಾಗಿ ಮರಳಿ ಶಾಲೆ ತಲುಪಿತು. ಅಪರಾಧ ತಡೆಗಟ್ಟುವ ಬಗ್ಗೆ ಕರಪತ್ರಗಳನ್ನು ಸಾರ್ವಜನಿಕರಿಗೆ ಈ ವೇಳೆ ವಿತರಿಸಲಾಯಿತು. ಎನ್.ಆರ್. ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳಾದ ಜೈಕೀರ್ತಿ, ಎಂ.ಗಂಗಾಧರ್, ಎಎಸ್‌ಐ ರವಿ, ಸಿಬ್ಬಂದಿಗಳಾದ ಮಂಜುನಾಥ್, ಸುನೀಲ್, ಶಾಲಾ ಮುಖ್ಯೋಪಾಧ್ಯಾಯರಾದ ಶ್ವೇತಾ, ಸಣ್ಣಸ್ವಾಮಿ ಸೇರಿದಂತೆ ಇತರರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಡಿ.10ರಂದು ಮುಖ್ಯಮಂತ್ರಿ ಮೈಸೂರು ಪ್ರವಾಸ



ಮೈಸೂರು, ಡಿ.(ಎಂಕೆ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡಿ.10 ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಮಧ್ಯಾಹ್ನ 12.30ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ 1.05ಕ್ಕೆ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಬಳಿಕ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಆಯೋಜಿಸಿರುವ 'ಬೆಳ್ಳಿ ಬೆಳಗು' ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ನಂತರ 3 ಗಂಟೆಗೆ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ 'ಅನ್‌ಲೀಷ್ ಇಂಡಿಯಾ' ಅಂತರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಸಂಜೆ 5 ಗಂಟೆಗೆ ರಂಗಾಯಣ ಆವರಣದಲ್ಲಿ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ' ಉದ್ಘಾಟಿಸಲಿದ್ದಾರೆ. ಬಳಿಕ 6.15ಕ್ಕೆ ವಿಶೇಷ ವಿಮಾನದ ಮೂಲಕ ವಾಪಸ್ ಬೆಂಗಳೂರಿಗೆ ತೆರಳಲಿದ್ದಾರೆ.

ಮೈಸೂರಲ್ಲಿ ಶ್ರದ್ಧಾ–ಭಕ್ತಿಯಿಂದ ಹುತ್ತರಿ ಆಚರಣೆ



ಮೈಸೂರು, ಡಿ.7(ಎಂಕೆ)– ಮೈಸೂರು ಕೊಡವ ಸಮಾಜದ ವತಿಯಿಂದ ಸಂಭ್ರಮ–ಸಡಗರ, ಶ್ರದ್ಧಾ–ಭಕ್ತಿಯಿಂದ ಹುತ್ತರಿ ಹಬ್ಬ ಬುಧವಾರ ಆಚರಿಸಲಾಯಿತು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಕೊಡವ ಸಮುದಾಯ ಭವನದಲ್ಲಿ ಸೇರಿದ ನೂರಾರು ಮಂದಿ ಕೊಡವರು, ಕೊಡವ ನಾಡಿನ ಆರಾಧ್ಯ ದೈವವಾದ ತಾಯಿ ಕಾವೇರಿ, ಇಗ್ಗುತಪ್ಪ ದೇವರಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿ, ಕದಿರು ತೆಗೆದು ಹಾಡಿ ಸಾಂಪ್ರದಾಯಿಕ ನೃತ್ಯದ ಮೂಲಕ ಸಂಭ್ರಮಿಸಿದರು.

ಕೊಡವ ಸಾಂಪ್ರದಾಯಿಕ ವಸ್ತ್ರತೊಟ್ಟು ಕಂಗೊಳಿಸುತ್ತಿದ್ದ ಕೊಡವ ಬಾಂಧವರು ಮೊದಲಿಗೆ ಸ್ವಾಗತ ನೃತ್ಯ, ಕೋಲಾಟ, ಉಮ್ಮತಾಟ್, ಬೊಳಕಾಟ್ ಇನ್ನಿತರ ಸಾಂಪ್ರದಾಯಿಕ ನೃತ್ಯ ಪ್ರದರ್ಶನದ ಮೂಲಕ ಗಮನ ಸೆಳೆದರು. ಬಳಿಕ ಸಮುದಾಯ ಭವನದ ಆವರಣದಲ್ಲಿ ಬೆಳೆದು ಬಾಗಿ ನಿಂತಿದ್ದ ಭತ್ತದ ತೆನೆಗೆ ಪೂಜೆ ಸಲ್ಲಿಸಿದರು. ನಂತರ ಎಲ್ಲರೂ ಸೇರಿ ಕದಿರು ತೆಗೆದು ವಿತರಿಸಲಾಯಿತು. ಮನೆಯಿಂದ ತಯಾರಿಸಿಕೊಂಡು ಬಂದಿದ್ದ ಹುತ್ತರಿಯ ವಿಶೇಷ ಖಾದ್ಯಗಳಾದ ತಂಬಿಟ್ಟು, ಅಡಕೆ ಹಿಟ್ಟು, ಬೇಯಿಸಿದ ಹುತ್ತರಿ ಗೆಣಸು ಸೇರಿ ಸಸ್ಯಾಹಾರ ಮತ್ತು ಮಾಂಸಾಹಾರವನ್ನು ಇದೇ ವೇಳೆ ಉಣಬಡಿಸಲಾಯಿತು.

ಮೈಸೂರು ಕೊಡವ ಸಮಾಜದ ಅಧ್ಯಕ್ಷ ಮೆಚಂಡ ಶಶಿ ಪೊನ್ನಪ್ಪ, ಉಪಾಧ್ಯಕ್ಷ ಮಾಲಚಿರ ಪೊನ್ನಪ್ಪ, ಜಂಟಿ ಕಾರ್ಯದರ್ಶಿ ತಾರಾ ಪೊನ್ನಪ್ಪ, ಕಾರ್ಯದರ್ಶಿ ಮುಕಟಿರ ಜೀವನ್, ಖಜಾಂಚಿ ಮಾಚಿಮಾಡ ನಾಣಯ್ಯ, ಕೆಟೋಲಿರ ಬೆಳ್ಳಿಯಪ್ಪ, ಕೊಡವ ಸಮುದಾಯದ ಮುಖಂಡರು, ಮಹಿಳೆಯರು, ಮಕ್ಕಳು ಉಪಸ್ಥಿತರಿದ್ದರು.



ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಭಾರತದ ವಿರುದ್ಧ ಬಾಂಗ್ಲಾಗೆ ರೋಚಕ ಜಯ; ಸರಣಿ ಕೈವಶ

ಮೀರಪುರ್: ಭಾರತ ವಿರುದ್ಧದ ಎರಡನೇ ಏಕದಿನ ಪಂದ್ಯದಲ್ಲಿ ಸಂಘಟಿತ ಹೋರಾಟ ನಡೆಸಿದ ಬಾಂಗ್ಲಾದೇಶ, 5 ರನ್ ಅಂತರದಿಂದ ಗೆಲುವು ಸಾಧಿಸಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ ಮೆಹದಿ ಹಸನ್ ಮಿರಾಜ್ ಶತಕ ಹಾಗೂ ಮೆಹಮೂದ್ ಉಲ್ಲಾಹ ಅರ್ಧಶತಕ ಬಲದಿಂದ 50 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 271 ರನ್ ಗಳಿಸಿತ್ತು. ಈ ಗುರಿ ಬೆನ್ನತ್ತಿದ ಭಾರತ ಬ್ಯಾಟಿಂಗ್ ವೈಫಲ್ಯ ಎದುರಿಸಿತು. ಆರಂಭಿಕ ಆಟಗಾರರಾದ ಶಿಖರ್ ಧವನ್ 8, ವಿರಾಟ್ ಕೊಹ್ಲಿ 5 ರನ್ ಗಳಿಸಿ ಬೇಗ ಔಟಾದರು. ಬಳಿಕ ಕ್ರೀಸ್‌ಗೆ ಬಂದ ವಾಷಿಂ ಗ್ಟನ್ ಸುಂದರ್ 11, ಕೆ.ಎಲ್.ರಾಹುಲ್ 14 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಶ್ರೇಯಸ್ ಐಯ್ಯರ್ 82, ಅಕ್ಷರ್ ಪಟೇಲ್ 56, ರೋಹಿತ್ ಶರ್ಮಾ ಔಟಾಗದೆ 51 ರನ್ ಗಳಿಸಿ ಉತ್ತಮ ಆಟವಾಡಿದರಾದರೂ ತಂಡಕ್ಕೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 266 ರನ್ ಗಳಿಸಿ ಸೋಲು ಕಂಡಿತು. ಬಾಂಗ್ಲಾ ಪರ ಇಬಾದತ್ ಹುಸೇನ್ ಚೌಧರಿ 3, ಮೆಹದಿ ಹಸನ್ ಮಿರಾಜ್, ಶಕೀಬ್ ಅಲ್ ಹಸನ್ ತಲಾ 2 ವಿಕೆಟ್ ಪಡೆದರೆ, ಮುಸ್ತಫಿಜುರ್ ರೆಹಮಾನ್ ಹಾಗೂ ಮೆಹಮೂದ್ ಉಲ್ಲಾಹ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಇದರೊಂದಿಗೆ 3 ಪಂದ್ಯಗಳ ಏಕದಿನ ಸರಣಿಯನ್ನು 2–0ರಲ್ಲಿ ಬಾಂಗ್ಲಾದೇಶ ಕೈವಶ ಮಾಡಿಕೊಂಡಿತು.

ಜೋರ್ಡನ್ ವಿದ್ಯಾರ್ಥಿ ಆತ್ಮಹತ್ಯೆ

ಮೈಸೂರು, ಡಿ.7– ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಜೋರ್ಡನ್ ದೇಶದ ವಿದ್ಯಾರ್ಥಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ವಿ.ವಿ.ಪುರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವರದಿಯಾಗಿದೆ. ಜೋರ್ಡಾನ್ ಕ್ಯೂಸೇ ಸುಹೇಲ್ ಇಸಾ ಅಲ್ಬಗೇನ್ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಯಾಗಿದ್ದು, ನಗರದ ಗೋಕುಲಂ ಬಡಾವಣೆಯ ಕೊಠಡಿಯೊಂದರಲ್ಲಿ ತಂಗಿದ್ದ. ಬುಧವಾರ ಬೆಳಗ್ಗೆ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈತನ ಜೊತೆಯಿದ್ದ ಸ್ನೇಹಿತ ಆತ್ಮಹತ್ಯೆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಆಗಮಿಸಿದ ವಿ.ವಿ.ಪುರಂ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದು, ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದಾರೆ.

ಒಂದನೇ ಪುಟದಿಂದ

ಬಹುರೂಪಿ ರಾಷ್ಟ್ರೀಯ ರಂಗೋತ್ಸವ

ಉದ್ಘಾಟನೆಯೊಂದಿಗೆ ಚಾಲನೆಗೊಳ್ಳಲಿದೆ. ಈ ಬಾರಿ ಐದು ವೇದಿಕೆಗಳಲ್ಲಿ 7 ದಿನಗಳ ಕಾಲ ರಂಗಭೂಮಿಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳು ಜರುಗಲಿದ್ದು, ಅದಕ್ಕಾಗಿ ಸಿದ್ಧತಾ ಕಾರ್ಯ ಪೂರ್ಣ ಗೊಂಡಿದೆ. ವೇದಿಕೆ ನಿರ್ಮಾಣ, ಕಲಾವಿದರಿಗೆ ವಸತಿ ಸೌಲಭ್ಯ, ವಾಹನದ ವ್ಯವಸ್ಥೆ, ವಿದ್ಯುತ್ ದೀಪಾಲಂಕಾರ, ಶಾಮಿಯಾನ, ಪುಸ್ತಕ ಮಳಿಗೆ, ಕರಕುಶಲ ಮೇಳ, ದೇಸಿ ಆಹಾರ ಮೇಳಕ್ಕೆ ಮಳಿಗೆ ನಿರ್ಮಿಸಲಾಗಿದೆ. ಈಗಂತೂ ರಂಗಾಯಣ ಮದುವಣಗಿತ್ತಿಯಂತೆ ಕಂಗೊಳಿಸಲಿದೆ.

ಐದು ವೇದಿಕೆ: ಈ ಬಾರಿ ಬಹುರೂಪಿ ರಂಗೋತ್ಸವ ಕಾರ್ಯಕ್ರಮವನ್ನು ಭೂಮಿಗೀತಾ, ಕಲಾಮಂದಿರ, ಸಂಪತ್ ರಂಗಮಂದಿರ, ಬಿ.ವಿ. ಕಾರಂತ ರಂಗಛಾವಡಿ ಹಾಗೂ ವನರಂಗದಲ್ಲಿ ಆಯೋಜಿಸಲಾಗಿದೆ. ವನರಂಗದಲ್ಲಿ ಜನಪದೋತ್ಸವಕ್ಕೆ ವೇದಿಕೆ ನಿರ್ಮಿಸಲಾಗಿದೆ. ಭೂಮಿಗೀತ, ಕಲಾಮಂದಿರದಲ್ಲಿ ನಾಟಕ ಪ್ರದರ್ಶನಗೊಳ್ಳಲಿವೆ.

ನವಿಲಿನ ಭಿತ್ತಿಪತ್ರ: ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಬಹುರೂಪಿ ಯಶಸ್ಸಿಗೆ ಕಂಕಣ ಕಟ್ಟಿದ್ದು, ಈ ವೇಳೆ ಅವರು ಮಾತನಾಡಿ, ರಂಗಾಯಣದ ಪ್ರತಿಷ್ಠಿತ ಕಾರ್ಯಕ್ರಮ ಬಹುರೂಪಿ ಉತ್ಸವಕ್ಕೆ ಸಿದ್ಧತೆ ಪೂರ್ಣಗೊಂಡಿದೆ. ಭಾರತೀಯತೆ ಶೀರ್ಷಿಕೆಯಡಿ ನವಿಲಿನ ಭಿತ್ತಿಪತ್ರ, ಸ್ಮರಣಿಕೆಯೊಂದಿಗೆ ಬಹುರೂಪಿ ನಾಟಕೋತ್ಸವ ಜರುಗುತ್ತಿದೆ. ರಾಷ್ಟ್ರಪಕ್ಷಿಯಾಗಿರುವ ನವಿಲು ನೃತ್ಯದ ಸಂಕೇತವೂ ಆಗಿದೆ. ನೃತ್ಯ ನಾಟಕದ ಭಾಗವಾಗಿದೆ. ನವಿಲಿನ ಒಡಲೊಳಗೆ ಬಹುರೂಪಿ ನಾಟಕೋತ್ಸವ ಮೈದಳೆಯಲಿದೆ ಎಂದರು. 7 ದಿನಗಳ ಕಾಲ ಕಾರ್ಯಕ್ರಮ ನಡೆಯಲಿದೆ. ಈ ವೇಳೆ 20 ನಾಟಕ ಪ್ರದರ್ಶನಗೊಳ್ಳಲಿವೆ. ರಂಗಾಯಣ ಖಾಸಗಿ ಸ್ವತ್ತಾಗಬಾರದು. ಅದು ಜನಸಾಮಾನ್ಯರ ತಾಣವಾಗಬೇಕು. ಈ ನಿಟ್ಟಿನಲ್ಲಿ ಮನೆ ಮನೆಗೆ ರಂಗಾಯಣ, ಮನ ಮನಕ್ಕೆ ರಂಗಭೂಮಿ ತಲುಪಿಸುವ ಕಾರ್ಯಕ್ರಮ ನಡೆಸಲಾಗಿದೆ. ಹೊಸ ಹೊಸ ಪ್ರೇಕ್ಷಕರು ಬರುತ್ತಿದ್ದಾರೆ. ಜನ ರಂಗಾಯಣವನ್ನು ಒಪ್ಪಿ–ಅಪ್ಪಿಕೊಂಡಿದ್ದಾರೆ. ಬಹುರೂಪಿಯಲ್ಲಿ ಈ ಬಾರಿ 15 ಪುಸ್ತಕ ಮಳಿಗೆ ತೆರೆಯಲಾಗುತ್ತಿದ್ದು, ಹೆಸರಾಂತ ಪ್ರಕಾಶಕರು ತಮ್ಮ ಪುಸ್ತಕಗಳನ್ನು ತರುತ್ತಿದ್ದಾರೆ. ದೇಸೀಯ ಆಹಾರ ಮಳಿಗೆಗಳಿವೆ. ವಿಚಾರ ಸಂಕಿರಣದಲ್ಲಿ ಹಲವು ಮಹತ್ತರ ವಿಚಾರಗಳ ಬಗ್ಗೆ ಚರ್ಚೆ ನಡೆಯಲಿದೆ. ಎಲ್ಲರೂ ಬಂದು ಬಹುರೂಪಿಯನ್ನು ಕಣ್ತುಂಬಿಕೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರತಿಬಿಂಬಿಸುವ ಬಹುರೂಪಿ

ವಸುಂಧರಾ ದೊರೆಸ್ವಾಮಿ, ರಂಗಕರ್ಮಿ ಸುರೇಶ್‌ಬಾಬು, ಸಂಸದ ಪ್ರತಾಪ್ ಸಿಂಹ, ಸಮಾಜ ಸೇವಕ ಡಾ.ಬಾಪಟ್... ಹೀಗೆ ಎಲ್ಲ ವರ್ಗದ ಗಣ್ಯರನ್ನು ಆಹ್ವಾನಿಸುವ ಮೂಲಕ ಉತ್ಸವಕ್ಕೆ ಬರಮಾಡಿಕೊಳ್ಳುತ್ತೇವೆ. ಜೊತೆಗೆ ಸರಸ್ವತಿಪುರಂನ ಗೋಪಾಲಸ್ವಾಮಿ ಪದವಿ ಕಾಲೇಜಿಗೆ ಹೋಗಿ ವಿದ್ಯಾರ್ಥಿ ಗಳನ್ನು ಆಹ್ವಾನಿಸುವ ಮೂಲಕ ಯುವಕರನ್ನು ಬರಮಾಡಿಕೊಂಡಿದ್ದೇವೆ.

ಗಣೇಶ: ಮೂರೂ 'ಬಹುರೂಪಿ'ಗಳಲ್ಲಿ ತಕ್ಷಣ ಎದ್ದು ಕಾಣುವ ಅಂಶಗಳು?

ಕಾರ್ಯಪ್ಪ: ಪ್ರೇಕ್ಷಕರು ಹೆಚ್ಚಿದ್ದಾರೆ ಮತ್ತು ಹೊಸ ಮುಖಗಳು ಬರುತ್ತಿವೆ. ನಾಟಕ ನೋಡದವರು ಈಗ ಬಂದು ನೋಡುತ್ತಿದ್ದಾರೆ. ನಾಟಕಕ್ಕೆ ನಾನೇ ಸ್ವಾಗತಿಸುವೆ. ಬರುವ ಪ್ರೇಕ್ಷಕರು ದೇವರು ಎನ್ನುವ ಮನೋಭಾವನೆಯಿಂದ ಕರೆಯುತ್ತೇವೆ.

ಮುಖ್ಯವಾಗಿ ಏಕತಾನತೆಯಿಲ್ಲದ ಹೊಸ ಉತ್ಸಾಹದ, ಹೊಸತನ ಬಂದಿದೆ. ಏಕತಾನತೆ ಮುರಿದು ಹೊಸ ಆಲೋಚನೆಗಳು ಬಂದವು. 'ಬಹುರೂಪಿ'ಯನ್ನು ಪ್ರಸನ್ನ ಶುರು ಮಾಡಿದರು. ಆದರೆ ವಿಷಯಾಧಾರಿತ ಆಘಾತಕಾರಿಯಾಗಿದ್ದವು. ಉದಾಹರಣೆಗೆ ವಲಸೆ, ನಕ್ಸಲಿಸಂ ಬೆಂಬಲ ಕೊಡುವಂಥದಿದ್ದವು. ನಾನು ನಿರ್ದೇಶಕನಾಗಿ ಬಂದ ಮೇಲೆ ರಾಷ್ಟ್ರೀಯ ಪ್ರಜ್ಞೆ ಮೂಡಿಸಲು ಯತ್ನಿಸಿದೆ. ನಮ್ಮ ರಾಷ್ಟ್ರ ಕುರಿತು ಅರಿವು ಮೂಡಿಸಲು ಪ್ರಯತ್ನಿಸಿದೆ. ನಾನು ಯೋಧ ಪರಂಪರೆಯಿಂದ ಬಂದವನು. ಈ ಭಾವ ಎಲ್ಲರಲ್ಲಿ ಮೂಡಬೇಕು. ನಮ್ಮ ಯೋಧರು ಗಡಿಯಲ್ಲಿ ಹುತಾತ್ಮರಾಗುವುದು ನಮಗಾಗಿ. ಆದರೆ ನಮ್ಮ ಇತಿಹಾಸದ ಪಠ್ಯಗಳಲ್ಲಿ ಸೋಲಿನ ಕಥೆಗಳನ್ನೇ ಕೇಳುತ್ತೇವೆ. ಗೆಲುವಿನ ಕಥೆಗಳನ್ನು ಕೇಳುವುದಿಲ್ಲ. ಶೌರ್ಯದ, ಸಾಹಸದ ಪಾಠಗಳನ್ನು ಎಲ್ಲಿ ಕೇಳಿದ್ದೇವೆ? ಶಿವಾಜಿ, ರಾಣಾ ಪ್ರತಾಪ ಸಿಂಹ ಕುರಿತು ಪಠ್ಯಗಳನ್ನು ಕುಗ್ಗಿಸುವ ಪ್ರಯತ್ನಗಳಾಗಿವೆ. ಇದರಿಂದ ನಮ್ಮನ್ನು ನಿರ್ವೀರ್ಯರನ್ನಾಗಿ ಮಾಡಿವೆ. ಇದನ್ನು ಕೆದಕಬೇಕಾದುದು ನಮ್ಮ ಕರ್ತವ್ಯ.

ನವಿಲಿನ ನಾಟ್ಯದ ಭಿತ್ತಿಪತ್ರ, ಸ್ಮರಣಿಕೆ...

ಈ ಬಾರಿಯ ನವಿಲಿನ ನಾಟ್ಯದ ಭಿತ್ತಿಪತ್ರ ವಿನ್ಯಾಸ ಭಿನ್ನ? ನಿಜ. ನವಿಲು ಎಂದರೆ ನೃತ್ಯ ನೃತ್ಯ ಎಂದರೆ ನಾಟಕದ ಒಂದು ಅಂಶ. ಭರತನ ನಾಟ್ಯಶಾಸ್ತ್ರವು ರಂಗಭೂಮಿ ಕುರಿತು ವಿವರಿಸುತ್ತದೆ. ಇದರೊಂದಿಗೆ ನವಿಲು– ನಮ್ಮ ರಾಷ್ಟ್ರಪಕ್ಷಿ. ಇದರ ಗರ್ಭದೊಳಗೆ ಭಾರತೀಯ ಸಂಸ್ಕೃತಿ ಹುದುಗಿಕೊಂಡಿದೆ. ಮಣಿಪುರಿ, ರಾಜಸ್ತಾನಿ, ಗುಜರಾತಿ, ಕರ್ನಾಟಕ... ಹೀಗೆ ಎಲ್ಲ ರಾಜ್ಯಗಳ ಕಲೆಗಳನ್ನು ಒಳಗೊಂಡಿದೆ. ಜೊತೆಗೆ ಹಲವಾರು ಭಾಷೆಗಳಿವೆ, ಧರ್ಮಗಳಿವೆ. ಈ ಕಾರಣಕ್ಕಾಗಿ ಭಾರತ ಮಿನುಗುತ್ತಿದೆ. ಅಮೆರಿಕ ಕೂಡಾ ಭಾರತದತ್ತ ತಿರುಗಿ ನೋಡುತ್ತಿದೆ. ನಮ್ಮ ಜನಶಕ್ತಿಯೇ ನಮ್ಮ ಸಂಪನ್ಮೂಲ. ಭಿತ್ತಿಪತ್ರದಲ್ಲಿ ನವಿಲಿನ ಹಿಂದೆ ಕೊನಾರ್ಕದ ದೇವಸ್ಥಾನದ ಚಕ್ರ ಕಾಣಿಸುತ್ತದೆ ನೋಡಿ. ಅನೇಕ ದಾಳಿಗಳ ನಡುವೆ ಅದು ಅಲುಗಾಡಿಲ್ಲ. ನಮ್ಮ ಪರಂಪರೆಯನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಇದನ್ನೆಲ್ಲ ದುಡುಕಿ ಇಲ್ಲವೆ ಆತುರತೆಯಿಂದ ಮಾಡಿದ್ದಲ್ಲ. ಬಹಳ ಯೋಚಿಸಿ, ಯೋಜಿಸಿದ್ದೇವೆ. ಹೀಗಾಗಿ ಭಾರತೀಯತೆ ಕುರಿತು ಮಥಿಸಿ ಮಾಡಿದ ಆಯ್ಕೆ.

ರಂಗಾಯಣ ಎಂದರೆ...

'ಟಿಪ್ಪುವಿನ ನಿಜಕನಸುಗಳು' ನಾಟಕದಲ್ಲಿ ಮೂವತ್ತು ಕಲಾವಿದರಿದ್ದಾರೆ. ಭಾರತೀಯ ರಂಗವಿದ್ಯಾಲಯದಲ್ಲಿ 15 ವಿದ್ಯಾರ್ಥಿಗಳಿದ್ದಾರೆ. ನಿರಂತರವಾಗಿ ರಂಗ ತರಬೇತಿ ಶಿಬಿರಗಳಿಂದ ಕಲಾವಿದರು ರೂಪುಗೊಳ್ಳುತ್ತಿದ್ದಾರೆ. ಹೀಗೆ ನೂರಾರು ಕಲಾವಿದರು ಅರಳಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಯುವ ಕಲಾವಿದರು ರೂಪುಗೊಂಡ ಬಗೆ ಇದೆ. ರಂಗಾಯಣ ಎಂದರೆ ಕಲಾವಿದರಿಂದ ತುಂಬಿ ತುಳುಕಬೇಕು. ಹಿರಿಯ ಕಲಾವಿದರು ನಿವೃತ್ತರಾಗುತ್ತಿದ್ದಾರೆ, ರಂಗಾಯಣದಲ್ಲಿ ಕಲಾವಿದರಿಲ್ಲ, ಮಂಕು ಕವಿದಿದೆ ಎನ್ನುವ ಮಾತೇ ಇಲ್ಲ. ಇದರ ಬದಲಾಗಿ ನೂರಾರು ಕಲಾವಿದರು ಸದಾ ಸಂಚರಿಸುವ ರಂಗಾಯಣವಿದು.

ಜನವರಿಯಲ್ಲಿ ಜಾರಿ

ಸರ್ಕಾರ ರೂಪಿಸಿದೆ. ಪ್ರಧಾನ ಮಂತ್ರಿ ಅವರು ಆಯುಷ್ಮಾನ್ ಭಾರತ ಯೋಜನೆಯಡಿ 5 ಲಕ್ಷ ರೂವರೆಗೂ ಬಡವರ ಚಿಕಿತ್ಸೆಗಾಗಿ ಜಾರಿಗೊಳಿಸಿದ್ದಾರೆ. ರಾಜ್ಯದಲ್ಲಿ 5 ಕೋಟಿ ಕಾರ್ಡುಗಳನ್ನು ನೀಡುವ ಗುರಿ ಇದ್ದು, ಈಗಾಗಲೇ ಒಂದು ಕೋಟಿ ಕಾರ್ಡ್ ನೀಡಿದ್ದೇವೆ. ಇದೊಂದು ಕಡೆಯಾದರೆ, ಸಾಮಾನ್ಯ ಜನರಿಗೆ ಯಾವುದೇ ತೊಂದರೆ ಇಲ್ಲದೆ ನೇರವಾಗಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯಬೇಕಾದರೆ ಅವರಿಗೆ ಸುಲಭ ದರದಲ್ಲಿ ಚಿಕಿತ್ಸೆ ದೊರೆಯುವುದು ಮುಖ್ಯ ಎಂದರು.

ಚುನಾವಣೆಯ ಫಲಿತಾಂಶ

ಕಾಂಗ್ರೆಸ್ 21 ಸ್ಥಾನ ಪಡೆದಿತ್ತು. ಹಿಮಾಚಲ ಪ್ರದೇಶದ ವಿಶೇಷತೆ ಎಂದರೆ 1985ರ ನಂತರ ಈವರೆಗೂ ಯಾವ ಚುನಾವಣೆಯಲ್ಲೂ ಆಡಳಿತ ಪಕ್ಷ ಸತತ ಎರಡನೇ ಬಾರಿಗೆ ಗೆದ್ದ ಇತಿಹಾಸವಿಲ್ಲ. ನ.12ರಂದು ಒಂದೇ ಹಂತದಲ್ಲಿ ನಡೆದಿದ್ದ ಚುನಾವಣೆಯ ಫಲಿತಾಂಶ ನಾಳೆ ಹೊರ ಬೀಳಲಿದ್ದು, ಆಡಳಿತಾರೂಢ ಬಿಜೆಪಿ ಮತ್ತೆ ಗೆಲ್ಲುವುದೇ ಅಥವಾ ಕಾಂಗ್ರೆಸ್ ಆಡಳಿತದ ಚುಕ್ಕಾಣಿ ಹಿಡಿಯುವುದೇ ಕಾದು ನೋಡಬೇಕಾಗಿದೆ.

ನಾಳೆಯಿಂದ 'ಮೈಸೂರು ಫ್ಯಾಷನ್ ವೀಕ್; ಸೀಸನ್–6'

ಮೈಸೂರು,ಡಿ.7(ಪಿಎಂ)–ದಕ್ಷಿಣ ಭಾರತದ ಅತಿ ದೊಡ್ಡ ಫ್ಯಾಷನ್ ಶೋ 'ಮೈಸೂರು ಫ್ಯಾಷನ್ ವೀಕ್; ಸೀಸನ್–6' ಡಿ.9ರಿಂದ 11ರವರೆಗೆ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಮೈಸೂರು ಯೂನಿಯನ್‌ನಲ್ಲಿ ನಡೆಯಲಿದೆ ಎಂದು ಶೋ ಆಯೋಜಕರೂ ಆದ ಫ್ಯಾಷನ್ ಡಿಸೈನರ್ ಜಯಂತಿ ಬಲ್ಲಾಳ್ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಜಯಂತಿ ಬಲ್ಲಾಳ್ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಿನಗಳು ಸಂಜೆ 4ರಿಂದ ರಾತ್ರಿ 10ರವರೆಗೆ ನಡೆಯುವ ಈ ಫ್ಯಾಷನ್ ಶೋನಲ್ಲಿ ಖ್ಯಾತ ಫ್ಯಾಷನ್ ವಿನ್ಯಾಸಕರು, ಟಾಪ್ ಮಾಡೆಲ್‌ಗಳು ಮತ್ತು ಹೆಸರಾಂತ ಸೆಲೆಬ್ರಿಟಿಗಳು ಭಾಗವಹಿಸಲಿದ್ದಾರೆ ಎಂದರು.

ಪ್ರತಿಷ್ಠಿತ ಡಿಸೈನರ್‌ಗಳಾದ ಶ್ರವಣ್ ಕುಮಾರ್, ಕೋಮಲ್ ಸೂದ್, ಪದ್ಮ ಸಿತಾ, ಚಾರು ಪರಾಶರ್, ನಜೀಮ್ ಅಲಿಖಾನ್, ಫೆಲಿಕ್ಸ್ ಬಂದೀಶ್, ಮುಖೇಶ್, ಆಸಿಫ್ ಮರ್ಚೆಂಟ್, ಅಂಜಲಿ, ಪಂಕಜ್ ಕಪೂರ್, ಸೋನಿ, ಕಿಂಗ್‌ಶುಕ್, ಪ್ರಶಾಂತ್, ರೀನಾ ಢಾಕಾ, ವಿಪಿನ್ ಅಗರ್ವಾಲ್, ಚೈತನ್ಯರಾವ್ ಮೊದಲಾದವರು ತಮ್ಮ ವಸ್ತ್ರ ವಿನ್ಯಾಸದ ಚಮತ್ಕಾರ ಪ್ರದರ್ಶಿಸಲಿದ್ದಾರೆ ಎಂದರು.

ಸೋನಾಲಿಕಾ ಸಹಾಯ್, ಶ್ವೇತಾ ಡಾಲಿ, ಕರಿಷ್ಮಾ ಮೋದಿ, ಐರಿಸ್ ಭಾಸ್ಕರ್ ಮೈಟಿ, ಪಾರುಲ್ ಬಿಂದಾಲ್, ರಿಯಾ ಸುಬೋಧ್, ಜಸ್ಪಾಲ್ ಕೌರ್ ಚನಾ, ಜಾಕಿ





ಚಾರು ಪರಾಶರ್ | ಕೋಮಲ್ ಸೂದ್ | ಆಸಿಫ್ ಮರ್ಚೆಂಟ್ | ನಟಿ ಜಯಪ್ರದಾ

ಬೆಸ್ಟರ್‌ವಿಚ್, ಪ್ರಿಯಾಂಕಾ ದಿವಾನ್, ವೀಣಾ ಸಿಂಗ್, ಶಾನವಾಜ್ ಆಲಂ, ಸನ್ನಿ ಕಾಂಬ್ಳೆ, ಸುಜೋ ಮ್ಯಾಥ್ಯೂ, ಗೋಕುಲ್ ಗಣೇಶ್, ರಿತೇಶ್ ರಾವತ್, ಮೊದಲಾದ ಸೂಪರ್ ಮಾಡೆಲ್‌ಗಳು ಅತ್ಯಾಕರ್ಷಕ ಉಡುಪುಗಳನ್ನು ಧರಿಸಿ ರ್‍ಯಾಂಪ್ ವಾಕ್ ಮಾಡಲಿದ್ದಾರೆ ಎಂದು ಜಯಂತಿ ಬಲ್ಲಾಳ್ ತಿಳಿಸಿದರು.

'ಮೈಸೂರು ಫ್ಯಾಷನ್ ವೀಕ್' ಜಾಗತಿಕ ಫ್ಯಾಷನ್ ನಕ್ಷೆಯಲ್ಲಿ ಮೈಸೂರಿಗೆ ಸ್ಥಾನ ಕಲ್ಪಿಸುವಲ್ಲಿ ಭಾರಿ ಕೊಡುಗೆ ನೀಡಿದೆ. ಭಾರತದಲ್ಲಿ ಮಾಡೆಲಿಂಗ್ ಮತ್ತು ಡಿಸೈನಿಂಗ್‌ನಲ್ಲಿ ಸಾಕಷ್ಟು ಪ್ರತಿಭೆಗಳಿವೆ. ಆದರೆ ಅವರಿಗೆ ತಮ್ಮ ಪ್ರತಿಭೆ ಅನಾವರಣಕ್ಕೆ ಸೂಕ್ತ ವೇದಿಕೆ ಕೊರತೆ ಇದೆ. ಅಂತಹ ಪ್ರತಿಭೆಗಳಿಗೆ ಉತ್ತೇಜನ ನೀಡುವುದು ಮೈಸೂರು ಫ್ಯಾಷನ್ ವೀಕ್‌ನ ಉದ್ದೇಶ. ಹೊಸ ಪ್ರತಿಭೆಗಳು ರೆಕ್ಕೆ ಬಿಚ್ಚಿ ಹಾರಲು ಇದು ಪ್ರತಿ ವರ್ಷ ಅವಕಾಶ ಕಲ್ಪಿಸುತ್ತಿದೆ ಎಂದರು.

ಕೋವಿಡ್ ಕಾರಣಕ್ಕೆ ಕಳೆದ ಮೂರು ವರ್ಷಗಳಿಂದ ಮೈಸೂರು ಫ್ಯಾಷನ್ ವೀಕ್ ಆಯೋಜನೆ ಮಾಡಿಲ್ಲ. ಸಾಮಾನ್ಯವಾಗಿ ಇದನ್ನು ಸೆಪ್ಟೆಂಬರ್‌ನಲ್ಲಿ ಆಯೋಜನೆ ಮಾಡಲಾಗುತ್ತದೆ. ಮಳೆ ಕಾರಣಕ್ಕೆ ಡಿಸೆಂಬರ್‌ನಲ್ಲಿ ಆಯೋಜನೆ ಮಾಡಿದ್ದೇವೆ. ಪ್ರವೇಶ ಶುಲ್ಕ ಇಲ್ಲ. ಈಗಾಗಲೇ ಪಾಸ್‌ಗಳನ್ನು ವಿತರಿಸಿದ್ದು, ಪಾಸ್‌ಗಳ ಮೂಲಕ ವೀಕ್ಷಕರಿಗೆ ಉಚಿತ ಪ್ರವೇಶವಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸೇರಿದಂತೆ ಹಲವು ಕಂಪನಿಗಳು ಈ ಫ್ಯಾಷನ್ ವೀಕ್‌ಗೆ ಪ್ರಾಯೋಜಕತ್ವ ನೀಡಿವೆ ಎಂದು ಹೇಳಿದರು.

ನಟಿ ಜಯಪ್ರದಾ ರ್‍ಯಾಂಪ್ ವಾಕ್

ಪ್ರತಿಷ್ಠಿತ ಡಿಸೈನರ್‌ಗಳು ಹಾಗೂ ಮಾಡೆಲ್‌ಗಳು ಇದರಲ್ಲಿ ಪಾಲ್ಗೊಳ್ಳಲಿದ್ದು, ಖ್ಯಾತ ಮಾಡೆಲ್, ಸೆಲೆಬ್ರಿಟಿಗಳ ಪೈಕಿ ಹಿರಿಯ ನಟಿ ಜಯಪ್ರದಾ ಅವರೂ ರ್‍ಯಾಂಪ್ ವಾಕ್ ಮಾಡಲಿದ್ದಾರೆ. ನನ್ನ ವಸ್ತ್ರ ವಿನ್ಯಾಸಕ್ಕೂ ಅವರು ಹೆಜ್ಜೆ ಹಾಕುತ್ತಿದ್ದಾರೆ. ಒಟ್ಟಾರೆ 51 ಮಾಡೆಲ್‌ಗಳು ಪಾಲ್ಗೊಳ್ಳಲಿದ್ದಾರೆ. 3 ದಿನಗಳೂ ಮಾಡೆಲ್‌ಗಳು ಅವರೇ ಇರುತ್ತಾರೆ. ಆದರೆ ಡಿಸೈನರ್‌ಗಳು ಬದಲಾವಣೆ ಆಗಲಿದ್ದಾರೆ.


–ಶೋ ಆಯೋಜಕರು, ಫ್ಯಾಷನ್ ಡಿಸೈನರ್ ಜಯಂತಿ ಬಲ್ಲಾಳ್



ಮಂಗಳವಾರ ತಮ್ಮ 48ನೇ ಹುಟ್ಟುಹಬ್ಬ ಆಚರಿಸಿಕೊಂಡ ಸುಮಿತ್ರ ಸ್ಟೀಲ್ ಮಾಲೀಕರೂ ಆದ ಕಾಂಗ್ರೆಸ್ ಮುಖಂಡ ಕೃಷ್ಣಕುಮಾರ್ ಸಾಗರ್ ಅವರನ್ನು ಮಾವಿನಹಳ್ಳಿ ಎಸ್.ಸಿದ್ದೇಗೌಡ, ಡಿ.ಮಾದೇಗೌಡ, ಬೀರಿಹುಂಡಿ ಬಸವಣ್ಣ ಹಾಗೂ ಯುವ ಕಾಂಗ್ರೆಸ್ ಮುಖಂಡ ಎಚ್.ವಿ.ಚಂದನ್, ಡಿ.ಸಾಲುಂಡಿ ಮಾಕಿ ಮಹದೇವು ಇನ್ನಿತರರು ಭಾರೀ ಗಾತ್ರದ ಹಾರ ಹಾಕಿ, ಶುಭಾಶಯ ಕೋರಿದರು. ಬಲಚಿತ್ರದಲ್ಲಿ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಕೃಷ್ಣಕುಮಾರ್ ಸಾಗರ್ ಸೀರೆ ವಿತರಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಡಿ.7–ಚೆಸ್ಕಾಂ ವತಿಯಿಂದ ಡಿ.8ರಂದು ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ತಿಲಕ್‌ನಗರ, ಈದ್ಗಾ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಆದುದರಿಂದ ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಈ ಮೂಲಕ ಕೋರಲಾಗಿದೆ.



ಶತಮಾನಗಳ ಪರಂಪರೆಯ ಶ್ರೇಷ್ಠ ಹಿಂದೂ ಧರ್ಮ ಉಳಿವಿಗೆ ಎಲ್ಲರೂ ಒಗ್ಗಟ್ಟಾಗಬೇಕಿದೆ

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅಭಿಮತ

ಮೈಸೂರು,ಡಿ.7(ಆರ್‌ಕೆಬಿ)–ಶತ ಶತಮಾನಗಳ ಇತಿಹಾಸ, ಪರಂಪರೆ, ಶ್ರೀಮಂತಿಕೆ ಹೊಂದಿರುವ ಜಗತ್ತಿನ ಶ್ರೇಷ್ಠ ಹಿಂದೂ ಧರ್ಮದ ಉಳಿವಿಗಾಗಿ ನಾವೆಲ್ಲರೂ ಒಗ್ಗಟ್ಟಾಗಬೇಕಾಗಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ತಿಳಿಸಿದರು.




ಹನುಮ ಜಯಂತಿ ಅಂಗವಾಗಿ ಶ್ರೀ ಉತ್ತರಾದಿ ಮಠ ಮೈಸೂರಿನ ಯಾದವಗಿರಿಯಲ್ಲಿರುವ 600 ವರ್ಷಗಳ ಪುರಾತನ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ್ದ ಹೋಮ, ಪಂಚಾಮೃತ ಅಭಿಷೇಕ, ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡು, ವಿವಿಧ ಸಾಧಕರನ್ನು ಸನ್ಮಾನಿಸಿ ಅವರು ಮಾತನಾಡಿದರು. ಜಗತ್ತಿಗೆ ಶಾಂತಿ, ಅಹಿಂಸೆ ತಿಳಿಸಿದ ದೇಶ, ಸಂಸ್ಕೃತಿ ನಮ್ಮದು. ಬಹು ಪ್ರಾಚೀನ ಹಿಂದೂ ಧರ್ಮ ಜಗತ್ತಿಗೆ ತನ್ನದೇ ಆದ ಕೊಡುಗೆ ನೀಡಿದೆ ಎಂದು ಹೇಳಿದರು.

ಇದೇ ವೇಳೆ ವಿವಿಧ ಕ್ಷೇತ್ರಗಳ ವಿದ್ವಾನ್ ಅನಂತ ಕುಲಕರ್ಣಿ, ಡಾ.ಸಂಜೀವ್ ರಾವ್ ಗಿರಿಮಾಜಿ, ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್ ಅವರನ್ನು ಸನ್ಮಾನಿಸಿದರು. ಇದೇ ವೇಳೆ ಸಾವಿರಾರು ಮಂದಿಗೆ ಅನ್ನ ಸಂತರ್ಪಣೆ ನಡೆಸಲಾಯಿತು. ನಂತರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗಾಯಕ ಬಾಗಲಕೋಟೆಯ ವಿದ್ವಾನ್ ಅನಂತ ಕುಲಕರ್ಣಿ ಅವರಿಂದ ಗಾನ ಲಹರಿ ಸಂಗೀತ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ಉತ್ತರಾದಿ ಮಠದ ವ್ಯವಸ್ಥಾಪಕ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ, ಮೇಯರ್ ಶಿವಕುಮಾರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಗುರುರಾಘವೇಂದ್ರ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್.ಬಿ.ವಾಸುದೇವಮೂರ್ತಿ, ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ಕಾರ್ಯದರ್ಶಿ ಎಸ್.ರವಿಕುಮಾರ್, ಪ್ರಧಾನ ಅರ್ಚಕ ನಾಗಭೂಷಣ್ ಇನ್ನಿತರರಿದ್ದರು.


ಡಾ.ಅಂಬೇಡ್ಕರ್ ಅವರ ಪರಿನಿರ್ವಾಣ ದಿನದ ಅಂಗವಾಗಿ ಮೈಸೂರು ಗ್ರಾಮಾಂತರ ಎಸ್‌ಸಿ ಮೋರ್ಚಾದಿಂದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಎಸ್ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಪರಮಾನಂದ, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮಹದೇವಯ್ಯ, ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಕೃಷ್ಣಮೂರ್ತಿ, ಮಂಜುನಾಥ್, ಅನಿಲ್‌ಕುಮಾರ್, ಧರ್ಮರಾಜ್ ಇದ್ದರು.

ಮೈಸೂರು ನಗರಪಾಲಿಕೆ ಆಯುಕ್ತರಿಂದ ಇಂದೋರ್ ತ್ಯಾಜ್ಯ ವಿಲೇವಾರಿ ಅಧ್ಯಯನ



ಮೈಸೂರು,ಡಿ.7(ಆರ್‌ಕೆ)– ಮೈಸೂರು ಮಹಾನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಮಧ್ಯಪ್ರದೇಶದ ಇಂದೋರ್ ನಗರದ ತ್ಯಾಜ್ಯ ವಿಲೇವಾರಿ ಪ್ರಕ್ರಿಯೆಯನ್ನು ಅಧ್ಯಯನ ಮಾಡಿದರು.

ನಗರಪಾಲಿಕೆ ಪರಿಸರ ಇಂಜಿನಿಯರ್ ಮೃತ್ಯುಂಜಯ ರೊಂದಿಗೆ ಸೋಮವಾರ ಸಂಜೆ ಇಂದೋರ್‌ಗೆ ತೆರಳಿದ್ದ ಅವರು, ಮಂಗಳವಾರ ಮತ್ತು ಬುಧವಾರ ಅಲ್ಲಿನ ಮಹಾನಗರಪಾಲಿಕೆಯು ಮನೆ–ಮನೆಯಿಂದ ಸಂಗ್ರಹಿಸಿದ ಘನತ್ಯಾಜ್ಯ ವಿಂಗಡಣೆ, ಸಂಸ್ಕರಣೆ, ವಿಲೇವಾರಿ, ಮರುಬಳಕೆ ಪ್ರಕ್ರಿಯೆಯನ್ನು ವೀಕ್ಷಿಸಿದರಲ್ಲದೆ, ಅಲ್ಲಿನ ಅಧಿಕಾರಿಗಳು ನೀಡಿದ ಪವರ್ ಪಾಯಿಂಟ್ ಪ್ರಸೆಂಟೇಷನ್‌ನಿಂದ ಅಗತ್ಯ ಮಾಹಿತಿ ಪಡೆದುಕೊಂಡರು. ಸ್ವಚ್ಛ ಸರ್ವೇಕ್ಷಣೆಯಲ್ಲಿ ಈಗ ನಿರಂತರವಾಗಿ ಪ್ರಥಮ ಸ್ವಚ್ಛ ನಗರಿ ಪ್ರಶಸ್ತಿಗೆ ಪಾತ್ರವಾಗುತ್ತಿರುವ ಇಂದೋರ್ ನಗರದಲ್ಲಿ ಅನುಸರಿಸುತ್ತಿರುವ ವಿಧಾನವನ್ನು, ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಭೇಟಿ ನೀಡಿ ವೀಕ್ಷಿಸಿದ ಆಯುಕ್ತರು, ಅಲ್ಲಿನ ಪಾಲಿಕೆ ಅಧಿಕಾರಿಗಳು ಅನುಸರಿಸುತ್ತಿರುವ ವಿಧಾನಗಳ ಬಗ್ಗೆ ಅಧ್ಯಯನ ನಡೆಸಿದರು. ಸ್ವಚ್ಛತಾ ವಿಭಾಗದಲ್ಲಿನ ಕಾರ್ಮಿಕರು, ವಾಹನಗಳು, ಉಪಕರಣಗಳು, ಅಧಿಕಾರಿಗಳ ಕಾರ್ಯವೈಖರಿ, ಶೌಚಾಲಯ, ಒಳ ಚರಂಡಿ ವ್ಯವಸ್ಥೆ, ಕಟ್ಟಡ ತ್ಯಾಜ್ಯ ವಿಲೇವಾರಿಗೆ ಅನುಸರಿಸುತ್ತಿರುವ ಕ್ರಮಗಳ ಬಗ್ಗೆಯೂ ತಿಳಿದುಕೊಂಡ ಲಕ್ಷ್ಮೀಕಾಂತರೆಡ್ಡಿ, ಮೈಸೂರಿನಲ್ಲೂ ಆ ವಿಧಾನ ಅನುಸರಿಸಲು ಇಲ್ಲಿನ ಕಾರ್ಪೊರೇಟರ್‌ಗಳೊಂದಿಗೆ ಚರ್ಚಿಸುವರು.

ಝೆಲೆನ್‌ಸ್ಕಿಗೆ 'ಟೈಮ್' ವರ್ಷದ ವ್ಯಕ್ತಿ ಗೌರವ



ನ್ಯೂಯಾರ್ಕ್: ಯುದ್ಧ ಪೀಡಿತ ಉಕ್ರೇನ್‌ನ ಸ್ಫೂರ್ತಿ ಎಂದೇ ಪರಿಗಣಿಸಲ್ಪಟ್ಟಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಟೈಮ್ 2022ರ ಸಾಲಿನ 'ವರ್ಷದ ವ್ಯಕ್ತಿ' ಎಂದು ಬುಧವಾರ ಘೋಷಿಸಲಾಗಿದೆ. 44 ವರ್ಷದ ಝೆಲೆನ್‌ಸ್ಕಿ ಅವರನ್ನು ಉಕ್ರೇನ್ ಮತ್ತು ವಿದೇಶಗಳಲ್ಲಿ ಅನೇಕರು 'ಹೀರೊ' ಆಗಿ ಗುರುತಿಸಿದ್ದಾರೆ. ಪ್ರಜಾಪ್ರಭುತ್ವ ಮತ್ತು ದೇಶ ರಕ್ಷಣೆ ಪ್ರತೀಕವಾಗಿ ಅವರು ನಿಂತಿದ್ದಾರೆ. ರಷ್ಯಾದ ಅಪ್ರಚೋದಿತ ದಾಳಿ ವಿರುದ್ಧ ದೇಶದ ಹೋರಾಟವನ್ನು ಅವರು ಮುನ್ನಡೆಸುತ್ತಿದ್ದಾರೆ. ಅವರು ವರ್ಷದ ವ್ಯಕ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಪೌರಕಾರ್ಮಿಕನ ಅನುಮಾನಾಸ್ಪದ ಸಾವಿನ ತನಿಖೆಗೆ ಆಗ್ರಹಿಸಿ ಡಿಸಿಗೆ ಮನವಿ



ಮೈಸೂರು,ಡಿ.7(ಆರ್‌ಕೆಬಿ)–ಮಡಿಕೇರಿ ತಾಲೂಕು ಗೋಣಿಕೊಪ್ಪ ಗ್ರಾಪಂ ಕಚೇರಿಯ ಪೌರಕಾರ್ಮಿಕ ಸುಬ್ರಹ್ಮಣ್ಯ (ಪಟ್ಟ) ಎಂಬುವರ ಅನುಮಾನಾಸ್ಪದ ಸಾವಿಗೆ ಸಂಬಂಧಿಸಿದಂತೆ ನ್ಯಾಯ ಕಲ್ಪಿಸುವುದರೊಂದಿಗೆ ಆತನ ಕುಟುಂಬಕ್ಕೆ ಪರಿಹಾರ ನೀಡುವಂತೆ ಆಗ್ರಹಿಸಿ, ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ (ಪೌರಕಾರ್ಮಿಕರ) ಯುವಕರ ಅಭಿವೃದ್ಧಿ ಮಹಾಸಂಘದ ಆಶ್ರಯದಲ್ಲಿ ಬುಧವಾರ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿದ್ದ ಮಡಿಕೇರಿ ತಾಲೂಕು ಗೋಣಿಕೊಪ್ಪ ಗ್ರಾಪಂ ನೌಕರ ಸುಬ್ರಹ್ಮಣ್ಯ (ಪಟ್ಟ), ಮೈಸೂರು ಕೆ.ಆರ್.ಆಸ್ಪತ್ರೆಯಲ್ಲಿ ಮರಣ ಹೊಂದಿದ್ದರು. ಜೈಲಿನ ಪೊಲೀಸ್ ಅಧಿಕಾರಿಗಳೇ ಈತನ ಸಾವಿಗೆ ಕಾರಣ ಎಂಬ ಶಂಕೆ ಇದೆ. ಹಾಗಾಗಿ ತನಿಖೆ ನಡೆಸಿ, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಸೂಕ್ತ ತನಿಖೆ ನಡೆಸಬೇಕು. ಎಸ್‌ಸಿ–ಎಸ್‌ಟಿ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಮೃತರ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ, ಕುಟುಂಬದ ಸದಸ್ಯರಿಗೆ ಸರ್ಕಾರಿ ಹುದ್ದೆ ನೀಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ದಿನೇಶ್‌ಕುಮಾರ್, ಪದಾಧಿಕಾರಿಗಳಾದ ಬಿ.ಎಸ್.ಸುಬ್ರಮಣಿ, ಶ್ರೀನಿವಾಸ್, ಸಿ.ಆರ್.ವಿಜಿ, ಮಂಚಯ್ಯ, ಡಿ.ಆರ್.ರಾಜು ಇನ್ನಿತರರು ಉಪಸ್ಥಿತರಿದ್ದರು.

ಮಕ್ಕಳ ಆರೋಗ್ಯ, ಪೋಷಣೆ ಕುರಿತು ಎರಡು ದಿನಗಳ ಕಾರ್ಯಾಗಾರ

● ದೇಶದ ಪ್ರಗತಿಯಲ್ಲಿ ತಾಯಿ, ಮಗುವಿನ ಆರೋಗ್ಯ ಮುಖ್ಯವಾಗಿರುತ್ತದೆ ● ಮೈಸೂರು ವಿವಿ ನೂತನ ಕುಲಸಚಿವೆ ವಿ.ಆರ್.ಶೈಲಜಾ ಅಭಿಮತ

ಮೈಸೂರು,ಡಿ.7(ಆರ್‌ಕೆಬಿ)– ಯಾವುದೇ ದೇಶದ ಪ್ರಗತಿಯಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯ ಮುಖ್ಯವಾಗಿರುತ್ತದೆ ಎಂದು ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ ತಿಳಿಸಿದರು.



ಮೈಸೂರು ವಿಶ್ವ ವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಹೈದರಾಬಾದ್‌ನ ಯುನಿಸೆಫ್ ಸಹಯೋಗದಲ್ಲಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ 'ಮಕ್ಕಳ ಆರೋಗ್ಯ ಮತ್ತು ಪೋಷಣೆ' ಕುರಿತ ಎರಡು ದಿನಗಳ ಕಾರ್ಯಾಗಾರಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ತಾಯಿ ಮತ್ತು ಮಗುವಿನ ಆರೋಗ್ಯಕ್ಕಾಗಿ ಯುನಿಸೆಫ್ ನಿರ್ದೇಶನ ಮತ್ತು ತತ್ವಗಳಿವೆ. ಇದರಡಿಯಲ್ಲಿ ಮಾಧ್ಯಮಗಳು ಬಿತ್ತರಿಸುವ ವೇಳೆ ಮಕ್ಕಳ ಘನತೆ ಮತ್ತು ಹಕ್ಕುಗಳ ಬಗೆಗೆ ರಾಜಿಯಾಗದೇ ವರದಿ ಪ್ರಸ್ತುತಪಡಿಸಬೇಕಾಗುತ್ತದೆ ಎಂದರು.

ಪ್ರತೀ ಕುಟುಂಬದಲ್ಲಿ ತಾಯಿ ಮಹತ್ವದ ಪಾತ್ರ ವಹಿಸಿರುತ್ತಾಳೆ. ಶೇ.50ರಷ್ಟು ಜನ ಸಂಖ್ಯೆಯಲ್ಲಿ ಮಹಿಳೆಯರ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಉತ್ತಮ ಕೆಲಸ ಮಾಡಿದ ಪತ್ರಕರ್ತರು, ಈಗ ತಾಯಿ ಮತ್ತು ಮಗುವಿನ ಆರೋಗ್ಯ ಮತ್ತು ಪೋಷಣೆ ಬಗ್ಗೆ ಹೆಚ್ಚು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕಾಗುತ್ತದೆ ಎಂದರು.

ಇದಕ್ಕೂ ಮುನ್ನ ಕಾರ್ಯಾಗಾರಕ್ಕೆ ಚಾಲನೆ ನೀಡಿದ ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕದ ಯುನಿಸೆಫ್ ಕಚೇರಿ ಸಂವಹನ, ವಕಾಲತ್ತು ಮತ್ತು ಪಾಲುದಾರಿಕೆ ತಜ್ಞ ಪ್ರೊಸುನ್ ಸೇನ್ ಮಾತನಾಡಿ, ಮಕ್ಕಳ ಆರೋಗ್ಯ ಮತ್ತು ಪೋಷಣೆ ಕುರಿತ ಈ ಕಾರ್ಯಾಗಾರಕ್ಕೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಪತ್ರಕರ್ತರು ಆಗಮಿಸಿದ್ದು, ಇಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆ ಕುರಿತ ಮಾಹಿತಿ ತಿಳಿದುಕೊಳ್ಳಲಿದ್ದಾರೆ. ಆ ಮೂಲಕ ಮಕ್ಕಳ ಆರೋಗ್ಯ ಮತ್ತು ಪೋಷಣೆ ಕುರಿತಂತೆ ವರದಿ ಮಾಡುವಾಗ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ ಎಂದರು.

ಗರ್ಭಿಣಿ ಮಹಿಳೆಗೆ ರಕ್ತಹೀನತೆ ಇದ್ದರೆ, ಹುಟ್ಟುವ ಮಕ್ಕಳ ಆರೋಗ್ಯದ ಮೇಲೂ ಪರಿಣಾಮ ಉಂಟಾಗುತ್ತದೆ. ತಾಯಿ ಆರೋಗ್ಯವಾಗಿದ್ದರೆ, ಹುಟ್ಟುವ ಮಕ್ಕಳು ಆರೋಗ್ಯವಾಗಿರುತ್ತವೆ ಎಂಬುದನ್ನು ಅರಿತು ನಿಮ್ಮ ವರದಿಗಳಿರುವಂತೆ ನೋಡಿಕೊಳ್ಳಿ ಎಂದು ಪತ್ರಕರ್ತರಿಗೆ ಸಲಹೆ ನೀಡಿದರು. ಕಾರ್ಯಾಗಾರದಲ್ಲಿ ಬೆಂಗಳೂರಿನ ಪೋಷಣೆ ಸಲಹೆಗಾರರಾದ ಡಾ.ಶ್ವೇತಾ ಆದರ್ಶ್, ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರೊ.ಎಂ.ಎಸ್.ಸಪ್ನಾ, ಚೇರ್ಮನ್ ಪ್ರೊ.ಸಿ.ಕೆ.ಪುಟ್ಟಸ್ವಾಮಿ, ಪ್ರೊ.ಮಮತಾ ಇನ್ನಿತರರು ಉಪಸ್ಥಿತರಿದ್ದರು.

ಹುಣಸೂರಲ್ಲಿ ವಿಜೃಂಭಣೆಯ ಹನುಮೋತ್ಸವ



ಹನುಮೋತ್ಸವಕ್ಕೆ ಶಾಸಕ ಹೆಚ್.ಪಿ. ಮಂಜುನಾಥ್ ಚಾಲನೆ.



ಹನುಮೋತ್ಸವದಲ್ಲಿ ಪಾಲ್ಗೊಂಡಿರುವ ಉತ್ಸವ ಮೂರ್ತಿಗಳು.

"ಯಾವುದೇ ಧಾರ್ಮಿಕ ಕಾರ್ಯಕ್ರಮಗಳನ್ನು ಆಚರಿಸುವಾಗ ಎಲ್ಲರನ್ನೂ ಸೌಹಾರ್ದಯುತವಾಗಿ ಕಾಣುವ ಮೂಲಕ ಭಕ್ತಿಪೂರ್ವಕವಾಗಿ ಆಚರಿಸಬೇಕು. 2015ರಲ್ಲಿ ನಡೆದಿದ್ದ ಸಣ್ಣ-ಪುಟ್ಟ ಗಲಾಟೆಯಿಂದ ನಗರದ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಸಾಗುವುದಕ್ಕೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿತ್ತು. ನಂತರ ಕೋವಿಡ್‌ನಿಂದಾಗಿ 2 ವರ್ಷ ಸರಳವಾಗಿ ಉತ್ಸವ ಆಚರಿಸಲಾಯಿತು. ಆದರೆ, ಈ ಬಾರಿ ಜಿಲ್ಲಾಡಳಿತ ಮೆರವಣಿಗೆ ಮಾರ್ಗಕ್ಕೆ ಈ ಹಿಂದೆ ವಿಧಿಸಿದ್ದ ನಿರ್ಬಂಧವನ್ನು ತೆರವುಗೊಳಿಸಿ ಹನುಮೋತ್ಸವಕ್ಕೆ ಸಂಪೂರ್ಣ ಸಹಕಾರ ನೀಡಿದೆ.

– ಹೆಚ್.ಪಿ.ಮಂಜುನಾಥ್, ಶಾಸಕರು

"ಯಾವುದೇ ಧಾರ್ಮಿಕ ಆಚರಣೆ ಭಕ್ತಿಭಾವದಿಂದಿರಬೇಕು. ಸಮಾಜದ ಸ್ವಾಸ್ಥ್ಯಕ್ಕಾಗಿ ಎಲ್ಲರೂ ಮನಃತೃಪ್ತಿಯಿಂದ ಆಚರಿಸಬೇಕು. ಎಲ್ಲಾ ಜಾತಿ ಹಾಗೂ ಧರ್ಮದವರು ಸೇರಿ ಸೌಹಾರ್ದತೆಯಿಂದ ಶಾಂತಿಯುತವಾಗಿ ಉತ್ಸವಗಳನ್ನು ಆಚರಿಸಿದಾಗಲೇ ಅದಕ್ಕೆ ವಿಶಿಷ್ಟ ಅರ್ಥ ಬರಲಿದೆ.

– ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಗರಾಜ ಸ್ವಾಮೀಜಿ.

ಒಂದನೇ ಪುಟದಿಂದ

ಮಾರ್ಗದುದ್ದಕ್ಕೂ ಭಕ್ತಾದಿಗಳಿಗೆ ದಣಿವಾರಿಸಲು ತಂಪು ಪಾನೀಯ, ಮಜ್ಜಿಗೆ, ಚಾಕೊಲೇಟ್ ವಿತರಿಸಲಾಯಿತು. ಕೆಲವೆಡೆ ಮೊಸರನ್ನ ನೀಡಿ ಭಕ್ತರ ಹಸಿವು ನೀಗಿಸಲಾಯಿತು. ಮುಸ್ಲಿಂ ಬಾಂಧವರು ಹನುಮೋತ್ಸವಕ್ಕೆ ಶುಭ ಕೋರಿ ಮೆರವಣಿಗೆ ಮಾರ್ಗದ ಕೆಲವು ಕಡೆ ಹನುಮ ಭಕ್ತರಿಗೆ ತಂಪು ಪಾನೀಯ ನೀಡಿದರು. ಬಜಾರ್ ರಸ್ತೆಯಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಹಜರತ್ ಜಾನ್ ಅವರ ಪುತ್ರ ಫಜಲ್ ಹಾಗೂ ಸ್ನೇಹಿತರು ಹನುಮ ಭಕ್ತರಿಗೆ ಬಾಳೆಹಣ್ಣು, ಮಜ್ಜಿಗೆ ವಿತರಿಸಿ ದಣಿವಾರಿಸುವ ಮೂಲಕ ಸೌಹಾರ್ದತೆ ಮೆರೆದರು.

ಹನುಮೋತ್ಸವದ ಹಿನ್ನೆಲೆಯಲ್ಲಿ ಜಿಲ್ಲಾ ಎಸ್ಪಿ ಚೇತನ್ ನೇತೃತ್ವದಲ್ಲೇ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಮೆರವಣಿಗೆ ಮಾರ್ಗದಲ್ಲಿ ಅಲ್ಲಲ್ಲಿ ಪೊಲೀಸರು ವಿಡಿಯೋ ಕ್ಯಾಮರಾದೊಂದಿಗೆ ಸಜ್ಜಾಗಿದ್ದರು. ಪೊಲೀಸ್ ವಾಹನವೊಂದರಲ್ಲಿ ನಾಲ್ಕೂ ಕಡೆ ವಿಡಿಯೋ ಕ್ಯಾಮರಾ ಅಳವಡಿಸಿ ಮೆರವಣಿಗೆಯನ್ನು ಸಂಪೂರ್ಣವಾಗಿ ಚಿತ್ರೀಕರಿಸುತ್ತಿದ್ದದ್ದು ಕಂಡುಬಂತು. ಮೆರವಣಿಗೆಯಲ್ಲಿ ಜಿಲ್ಲಾ ಎಸ್ಪಿ ಮಾತ್ರವಲ್ಲದೇ ಉಪ ವಿಭಾಗಾಧಿಕಾರಿ, ಡಿವೈಎಸ್ಪಿ ನಗರಸಭೆ ಆಯುಕ್ತೆ ಹಾಗೂ ತಹಸೀಲ್ದಾರರು ಕೂಡ ಭಾಗವಹಿಸಿ, ಯಾವುದೇ ರೀತಿಯ ಲೋಪವಾಗದಂತೆ ಎಚ್ಚರ ವಹಿಸಿದ್ದರು.



ಮೆರವಣಿಗೆಯಲ್ಲಿ ಪಾಲ್ಗೊಂಡ ಕಲಾತಂಡ.

ಪಕ್ಷಾತೀತವಾಗಿ ನಡೆದ ಹನುಮೋತ್ಸವದಲ್ಲಿ ನಗರಸಭೆ ಅಧ್ಯಕ್ಷೆ ಗೀತಾ ನಿಂಗರಾಜ್, ಉಪಾಧ್ಯಕ್ಷೆ ಆಶಾ ಕೃಷ್ಣಾ ನಾಯಕ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಜಿಪಂ ಸದಸ್ಯ ಸುರೇಂದ್ರ, ಮಾಜಿ ಸದಸ್ಯ ರಮೇಶ್‌ಕುಮಾರ್, ಸಂಸದ ಪ್ರತಾಪ್ ಸಿಂಹ ಪತ್ನಿ ಅರ್ಪಿತಾ, ಮುಖಂಡರಾದ ನಾಗಣ್ಣಗೌಡ, ಗಣೇಶ್, ಕುಮಾರಸ್ವಾಮಿ, ಅಸ್ವಾಳ್ ಕೆಂಪೇಗೌಡ, ಸತೀಶ್ ಪಾಪಣ್ಣ, ರಂಜಿತ ಚಿಕ್ಕಮಾದು, ಆನಂದ, ಬಿ.ಎನ್. ದಾಸ್, ಅನಿಲ, ಗಿರೀಶ್, ಮಹದೇವ್ ಬಾಗಲ್, ಸಚಿನ್, ಮಾದಳ್ಳಿ ಮಠದ ಸಾಂಬಶಿವ ಸ್ವಾಮೀಜಿ ಸೇರಿದಂತೆ ನೂರಾರು ಗಣ್ಯರು ಭಾಗವಹಿಸಿದ್ದರು.

ಈ ಬಾರಿ ಹನುಮೋತ್ಸವದಲ್ಲಿ ಯಾವುದೇ ರೀತಿಯ ರಾಜಕೀಯಕ್ಕೆ ಅವಕಾಶ ನೀಡಲಿಲ್ಲ. ಉತ್ಸವದ ಹೊಣೆಯನ್ನು ಸಂಪೂರ್ಣವಾಗಿ ಹನುಮೋತ್ಸವ ಆಚರಣಾ ಸಮಿತಿಯೇ ವಹಿಸಿಕೊಂಡಿತ್ತು. ಈ ಸಮಿತಿಗೆ ಸರ್ವಪಕ್ಷಗಳ ಮುಖಂಡರು ಸಾಥ್ ನೀಡಿದರು. ಹನುಮೋತ್ಸವದ ಹಿನ್ನೆಲೆಯಲ್ಲಿ ಕೆಲ ದಿನಗಳ ಹಿಂದೆಯೇ ಜಿಲ್ಲಾ ಎಸ್ಪಿ ಚೇತನ್ ಅವರು ಸರ್ವಪಕ್ಷ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಜಾತಿ, ಧರ್ಮದ ಮುಖಂಡರ ಸಭೆ ನಡೆಸಿದ್ದರು.



ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ಬಾಳೆಹಣ್ಣು ಮತ್ತು ಮಜ್ಜಿಗೆ ವಿತರಿಸುವ ಮೂಲಕ ಸೌಹಾರ್ದತೆ ಮೆರೆದ ಮುಸ್ಲಿಂ ಬಾಂಧವರು.

ಕೋಟೆಯಲ್ಲಿ ಬಿಜೆಪಿ ಅಧಿಕಾರಕ್ಕೆ ತರುವತ್ತ ಸಂಘಟನೆ ಅಗತ್ಯ



ಹೆಚ್.ಡಿ.ಕೋಟೆ, ಡಿ.7– ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರುಗಳ ಆಡಳಿತದಿಂದ ಜನಸಾಮಾನ್ಯರು ಬೇಸತ್ತಿದ್ದು, ಬಿಜೆಪಿಯನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯಕರ್ತರು ಮತ್ತು ಮುಖಂಡರುಗಳು ಸಕ್ರಿಯವಾಗಿ ಪಕ್ಷ ಸಂಘಟನೆ ಮಾಡಬೇಕಾಗಿದೆ ಎಂದು ಬಿಜೆಪಿ ಜಿಲ್ಲಾ ಸಹ ವಕ್ತಾರ ಸಿ.ಕೆ. ಗಿರೀಶ್ ತಿಳಿಸಿದ್ದಾರೆ.

ಪಟ್ಟಣದ ಬಿಜೆಎಸ್ ಭವನದಲ್ಲಿ ಕೋಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು ಹಿಂದುಳಿದ ತಾಲೂಕು, ರೈತರು, ಬಡವರು, ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಅಭಿವೃದ್ಧಿ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿವೆ. ಇವುಗಳು ಜನಸಾಮಾನ್ಯರಿಗೆ ತಲುಪುವ ರೀತಿಯಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಗೆಲುವು ಸಾಧಿಸುವುದು ಖಚಿತವಾಗಿದೆ. ಪಕ್ಷಕ್ಕೆ ಅಧಿಕೃತ ಅಭ್ಯರ್ಥಿ ಹೆಸರು ಇನ್ನೂ ಘೋಷಣೆಯಾಗಿಲ್ಲ. ಅನೇಕರು ಆಕಾಂಕ್ಷಿಗಳಿದ್ದು, ಅವರುಗಳು ಪಕ್ಷದ ಸಂಘಟನೆಗೆ ದುಡಿಯುತ್ತಿದ್ದಾರೆ. ಪಕ್ಷ ಉತ್ತಮರನ್ನು ಗುರುತಿಸಿ ಟಿಕೆಟ್ ನೀಡಲಿದೆ ಎಂದರು.

ತಾಲೂಕು ಬಿಜೆಪಿ ಅಧ್ಯಕ್ಷ ಹೆಚ್.ಸಿ. ಗುರುಸ್ವಾಮಿ ಮಾತನಾಡಿ, ಕ್ಷೇತ್ರದಲ್ಲಿ ಹೊಸ ಅಲೆ ಆರಂಭಗೊಂಡಿದ್ದು, ಬಿಜೆಪಿ ಅಧಿಕಾರಕ್ಕೆ ಬರುವ ಎಲ್ಲಾ ಸನ್ನಿವೇಶಗಳು ಇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯೋಗಾನಂದ, ಡಾ:ಹೆಚ್.ವಿ. ಕೃಷ್ಣಸ್ವಾಮಿ, ದೇವನೂರು ಪ್ರತಾಪ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ವೆಂಕಟಸ್ವಾಮಿ, ಸತೀಶ್ ಬಹದ್ದೂರ್, ನಿರ್ದೇಶಕ ಪರೀಕ್ಷಿತ್ ರಾಜ್, ಜಿಲ್ಲಾ ಯುವ ಮೋರ್ಚಾ ಮಾಜಿ ಅಧ್ಯಕ್ಷ ವಿಜಯಕುಮಾರ್, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ವಿನಾಯಕ ಪ್ರಸಾದ್ ಜಿಲ್ಲಾ ಹಾಲು ಪ್ರಕೋಷ್ಠ ಸಂಚಾಲಕರಾದ ಶಿವರಾಜಪ್ಪ, ಸುನಂದ ರಾಜ್, ಸರಗೂರು ಪಟ್ಟಣ ಪಂಚಾಯಿತಿ ಅಧ್ಯಕ್ಷ ರಾಧಿಕಾ ಶ್ರೀನಿವಾಸ್, ಎಪಿಎಂಸಿ ಮಾಜಿ ಅಧ್ಯಕ್ಷ ನಟರಾಜ್, ಮಾದೇವ್, ಟಿಎಪಿಸಿಎಂಎಸ್ ಅಧ್ಯಕ್ಷ ಬಸವರಾಜಪ್ಪ ಆರೋಗ್ಯ ರಕ್ಷಾ ಸಮಿತಿ ಸದಸ್ಯ ಮಂಗನಹಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ವಿವೇಕ್, ಚೆನ್ನಪ್ಪ ಗೋಪಾಲಯ್ಯ, ಹನುಮಂತ ನಾಯಕ, ಶಿವು, ಸೋಮಶೇಖರ್, ಶ್ರೀರಾಮುಲು, ಇನ್ನು ಮುಂತಾದವರು ಹಾಜರಿದ್ದರು.

ಅಂಬೇಡ್ಕರ್ ಜೀವನವೇ ಒಂದು ಆದರ್ಶ



ತಿ.ನರಸೀಪುರ, ಡಿ.7–ಡಾ. ಬಿ.ಆರ್.ಅಂಬೇಡ್ಕರ್ ಅವರ ಜೀವನವೇ ಒಂದು ಆದರ್ಶ, ಅವರು ತಮ್ಮ ಜೀವನದುದ್ದಕ್ಕೂ ಅನೇಕ ಸವಾಲುಗಳನ್ನು ಎದುರಿಸಿ ಮೇಲೆ ಬಂದವರು. ಅನೇಕ ಶತಮಾನಗಳಿಂದಲೂ ತುಳಿಕ್ಕೊಳಗಾದವರಿಗೆ ಸಂವಿಧಾನದ ಮೂಲಕ ಸಾಮಾಜಿಕ ನ್ಯಾಯ ಒದಗಿಸಿದ ಮಹಾನ್ ಮಾನವತಾವಾದಿ ಎಂದು ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಬಣ್ಣಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ರವರ 66 ನೇ ವರ್ಷದ ಮಹಾ ಪರಿನಿರ್ವಾಣ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅಂಬೇಡ್ಕರ್ ಅವರು ಅನುಭವಿಸಿದ ಯಾತನೆಗಳಿಗೆ ಲೆಕ್ಕವಿಲ್ಲ. ಅವರು ಬಹಳ ಕಷ್ಟದಿಂದ ಸಮಾನತೆಯ ತೇರನ್ನು ಇಷ್ಟು ದೂರ ಎಳೆದು ತಂದಿದ್ದಾರೆ. ಏನೇ ಅಡ್ಡಿ, ಆತಂಕ ಎದುರಾದರೂ ಅವರು ಮುನ್ನಡೆಸಿದ ತೇರನ್ನು ಮುಂದೆ ಎಳೆಯುವ ಜವಾಬ್ದಾರಿ ನಮ್ಮ ಮೇಲಿದೆ. ಈ ನಿಟ್ಟಿನಲ್ಲಿ ದಲಿತ ಸಂಘಟನೆಗಳ ಪಾತ್ರ ಪ್ರಮುಖವಾಗಿದೆ ಎಂದರು.

ಟಿ.ನರಸೀಪುರ ಸುತ್ತಮುತ್ತ ಚಿರತೆ ಸೆರೆಗೆ ಥರ್ಮಲ್ ಡ್ರೋನ್ ಕಾರ್ಯಾಚರಣೆ

ಮೈಸೂರು, ಡಿ.7(ಎಂಕೆ)– ಟಿ.ನರಸೀಪುರ ತಾಲೂಕಿನ ನಿವಾಸಿಗಳಲ್ಲಿ ಆತಂಕ ಸೃಷ್ಟಿಸಿರುವ ಚಿರತೆ ಪತ್ತೆಗೆ ಬುಧವಾರ ಥರ್ಮಲ್ ಡ್ರೋನ್ ಕಾರ್ಯಾಚರಣೆ ನಡೆಸಲಾಯಿತು.



ತಾಲೂಕಿನ ಕೆಲ ಗ್ರಾಮಗಳಲ್ಲಿ ಬೀಡು ಬಿಟ್ಟಿರುವ ಅರಣ್ಯ ಇಲಾಖೆ ಸಿಬ್ಬಂದಿ, ಚಿರತೆ ಸೆರೆ ಕಾರ್ಯಾಚರಣೆ ಮುಂದುವರೆಸಿದ್ದು, ಬೆಂಗಳೂರಿನಿಂದ ಬಂದ ತಜ್ಞರ ತಂಡ ಹಗಲು ಮತ್ತು ರಾತ್ರಿ ವೇಳೆ ಪ್ರಾಣಿಗಳನ್ನು ನಿಖರವಾಗಿ ಪತ್ತೆ ಮಾಡಬಲ್ಲ ಥರ್ಮಲ್ ಡ್ರೋನ್ ಕ್ಯಾಮರಾ ಬಳಕೆ ಮಾಡಿದ್ದಾರೆ.

ಪ್ರಾಯೋಗಿಕವಾಗಿ ಉಕ್ಕಲಗೆರೆ ಮಲ್ಲಿಕಾರ್ಜುನ ಬೆಟ್ಟ ಪ್ರದೇಶದಲ್ಲಿ ಥರ್ಮಲ್ ಡ್ರೋನ್ ಕ್ಯಾಮರಾ ಬಳಸಿದ ತಜ್ಞರು ಸುತ್ತಮುತ್ತಲಿನ ಪ್ರದೇಶದಲ್ಲಿ ಚಿರತೆ ಪತ್ತೆ ಕಾರ್ಯಾಚರಣೆ ನಡೆಸಿದರು. ಅಲ್ಲದೆ ಶೀಘ್ರದಲ್ಲಿಯೇ ಚಿರತೆ ಸೆರೆ ಹಿಡಿಯುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಾರ್ಯಾಚರಣೆ ಪರಿಶೀಲನೆ: ಎಂ.ಎಲ್.ಹುಂಡಿ ಗ್ರಾಮಕ್ಕೆ ಭೇಟಿ ನೀಡಿದ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ಮುಖ್ಯಸ್ಥರಾದ ಕುಮಾರ್ ಪುಷ್ಕರ್, ಚಿರತೆ ಪತ್ತೆ ಕಾರ್ಯಾಚರಣೆ ಕುರಿತು ಪರಿಶೀಲನೆ ನಡೆಸಿದರು. ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಕೆ.ಕಮಲ ಕರಿಕಾಳನ್, ಡಾ.ಕರಿಕಾಳನ್, ಎಸಿಎಫ್‌ಗಳು, ಆರ್‌ಸಿಎಫ್‌ಗಳು ಉಪಸ್ಥಿತರಿದ್ದರು.

ಮಾಜಿ ಶಾಸಕ ವೆಂಕಟೇಶ್ ಬೆಂಬಲಿಸಲು ವೀರಶೈವ ಸಮಾಜ ತೀರ್ಮಾನ



ಬೆಟ್ಟದಪುರ (ಪಿರಿಯಾಪಟ್ಟಣ ತಾ), ಡಿ.7–ತಾಲೂಕಿನ ವೀರಶೈವ ಸಮಾಜಕ್ಕೆ ಮಾಜಿ ಶಾಸಕ ಕೆ.ವೆಂಕಟೇಶ್ ಕೊಡುಗೆ ಅಪಾರವಾಗಿದ್ದು ಮುಂದಿನ ದಿನ ಚುನಾವಣೆಯಲ್ಲಿ ಅವರನ್ನು ಬೆಂಬಲಿಸಬೇಕಿದೆ ಎಂದು ವೀರಶೈವ ಮುಖಂಡ ಕೆಲ್ಲೂರು ನಾಗರಾಜು ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮದಲ್ಲಿ ನಡೆದ ತಾಲೂಕು ಕಾಂಗ್ರೆಸ್ ವೀರಶೈವ ಮುಖಂಡರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ತಾಲೂಕಿನಲ್ಲಿ ವೀರಶೈವ ಜನಾಂಗದ ಮತದಾರರು ಮೊದಲಿನಿಂದಲು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಬೆಂಬಲ ನೀಡಿಕೊಂಡು ಬಂದಿದ್ದು ಕೆ. ವೆಂಕಟೇಶ್ ನಾಯಕತ್ವದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಸ್ಥಾನ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷಸ್ಥಾನ, ಎಪಿಸಿಎಂಸಿ ಅಧ್ಯಕ್ಷ ಸ್ಥಾನ ಸೇರಿದಂತೆ ಅನೇಕ ಸಂಘ–ಸಂಸ್ಥೆಗಳಲ್ಲಿ ವೀರಶೈವರಿಗೆ ಸೂಕ್ತ ಸ್ಥಾನಮಾನ ನೀಡಿ ಸಮಾಜವನ್ನು ಗೌರವಯುತವಾಗಿ ನಡೆಸಿಕೊಂಡು ಬಂದಿದ್ದಾರೆ. ಇತರೆ ರಾಜಕಾರಣಿಗಳು ಕೇವಲ ಸಮಾಜವನ್ನು ಸ್ವಾರ್ಥಕ್ಕಾಗಿ ಬಳಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ಕೆ. ವೆಂಕಟೇಶ್ ನೇತೃತ್ವದ ನಾಯಕತ್ವಕ್ಕೆ ಹೆಚ್ಚಿನ ಬೆಂಬಲ ದೊರಕಲಿದೆ ಎಂದು ತಿಳಿಸಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಚ್.ಟಿ. ಪರಮೇಶ್ ಮಾತನಾಡಿ, ವೀರಶೈವ ಸಮಾಜಕ್ಕೆ ಈ ಹಿಂದಿನ ಚುನಾವಣೆಯಲ್ಲಿ ಸುಳ್ಳು ಮಾಹಿತಿ ನೀಡಿ ದಿಕ್ಕು ತಪ್ಪಿಸಿ ಮತ ಪಡೆದಿದ್ದಾರೆ. ಆದರೆ ಈ ಬಾರಿ ಸಮಾಜವು ಅತಿ ಸೂಕ್ಷ್ಮತೆಯಿಂದ ಎಲ್ಲಾ ಬೆಳವಣಿಗೆ ಗಮನಿಸುತ್ತಿದ್ದು ಮುಂದಿನ ಚುನಾವಣೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ಕಾಂಗ್ರೆಸ್ ಬೆಂಬಲಿಸಲಿದೆ ಎಂದು ತಿಳಿಸಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಆವರ್ತಿ ಚಂದ್ರಶೇಖರ್ ಮಾತನಾಡಿ, ತಾಲೂಕಿನಲ್ಲಿ ಎಲ್ಲೆಡೆ ಭ್ರಷ್ಟಾಚಾರ ಹೆಚ್ಚಾಗಿದ್ದು ಜನರು ಬೇಸತ್ತಿದ್ದಾರೆ ಮುಂದಿನ ಚುನಾವಣೆಯಲ್ಲಿ ಇದರ ಪರಿಣಾಮ ಎದುರಿಸಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ತಾ.ಪಂ. ಸದಸ್ಯೆ ಬಿ.ವಿ.ಅನಿತಾ, ರಾವಂದೂರು ಮಹೇಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸ್ಟುಡಿಯೋ ಆನಂದ್, ಕುಮಾರವಿಜಯ್ ಮತ್ತಿತರರು ಮಾತನಾಡಿದರು. ಕಾರ್ಯಕ್ರಮದಲ್ಲಿ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಪಿ.ಎನ್.ಚಂದ್ರಶೇಖರ್, ಮಾಜಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದ ಕೆ.ಹೊಲದಪ್ಪ, ಪುರಸಭೆ ಸದಸ್ಯರಾದ ಮಂಜುಳ, ಎಚ್.ಮಂಜುನಾಥ್, ಮಲ್ಲಿಕಾರ್ಜುನ, ರಾಹುಲ್‌ಗಾಂಧಿ ವಿಚಾರ್ ಮಂಚ್ ಅಧ್ಯಕ್ಷ ಮಂಜು, ತಾಲೂಕಿನ ವಿವಿಧ ಗ್ರಾಮಗಳಿಗೆ ಆಗಮಿಸಿದ ಮುಖಂಡರು ಭಾಗವಹಿಸಿದ್ದರು.

ಕನ್ನಡ, ಕರ್ನಾಟಕ ಕನ್ನಡಿಗನ 2 ಕಣ್ಣುಗಳಿದ್ದಂತೆ



ಸಾಲಿಗ್ರಾಮ, ಡಿ.7– ಕನ್ನಡ ಭಾಷೆ ಉಳಿಸಿ ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗರ ಆದ್ಯ ಕರ್ತವ್ಯ. ಕನ್ನಡ ಮತ್ತು ಕರ್ನಾಟಕ ಕನ್ನಡಿಗನ ಎರಡು ಕಣ್ಣುಗಳಿದ್ದಂತೆ ಎಂದು ಸಾಹಿತಿ ಡಾ.ಮಜ್ಜಿಗೆಪುರ ಕೆ.ಶಿವರಾಮು ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ಕನ್ನಡ ವಿಷಯದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ರಾಜ್ಯೋತ್ಸವ ನಾಡಿನ ಏಕತೆ, ಸಮಾನತೆ, ಸ್ವಾಭಿಮಾನ ಹಾಗೂ ಸಹಬಾಳ್ವೆಯ ಸಂಕೇತವಾಗಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಎಸ್.ಕೆ.ಮಧು ಚಂದ್ರ ಅಭಿಪ್ರಾಯಪಟ್ಟರು. ಇದೇ ವೇಳೆ ವಿದ್ಯಾರ್ಥಿಗಳು ನಡೆಸಿ ಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು.

ತಹಸೀಲ್ದಾರ್ ಮೋಹನ್ ಕುಮಾರ್, ನಿವೃತ್ತ ಉಪನ್ಯಾಸಕ ಎಸ್.ಆರ್.ರಾಮೇಗೌಡ, ಪ್ರಾಂಶುಪಾಲರಾದ ಡಾ.ಹಂಸವೇಣಿ, ಸಿಡಿಸಿ ಕಾರ್ಯಾಧ್ಯಕ್ಷ ಎಸ್.ಎನ್. ಬಾಹುಬಲಿ, ಸದಸ್ಯರಾದ ಸೋಮಶೇಖರ್, ನಂಜಪ್ಪಶೆಟ್ಟಿ, ಎಸ್.ಆರ್.ಪ್ರಕಾಶ್, ಅಯಾಜ್ ಅಹಮದ್, ಜ್ಯೋತಿ, ಗಾಯಕಿ ಬನುಮಾ ಗುರುದತ್, ಗ್ರಾಪಂ ಮಾಜಿ ಉಪಾಧ್ಯಕ್ಷೆ ಸುಧಾ, ಪ್ರಾಧ್ಯಾಪಕರಾದ ಸುಂದರ್, ರಾಜೇಶ್, ಮಧು, ರಾಘು, ರಾಜಶೇಖರ್ ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ತ್ರಿಬಲ್ ರೈಡಿಂಗ್ (ಕ): ಬೆ.10.30ಕ್ಕೆ, ಕಾಂತಾರ (ಕ): ಮ.1.35ಕ್ಕೆ, ಹಿಟ್: ದಿ ಸೆಕೆಂಡ್ ಕೇಸ್ (ತೆ): ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ತಿಮ್ಮಯ್ಯ & ತಿಮ್ಮಯ್ಯ (ಕ): ಬೆ.10.20ಕ್ಕೆ, ರಾ.10.10ಕ್ಕೆ, ಗಟ್ಟ ಕುಸ್ತಿ (ತ): ಮ.1.15ಕ್ಕೆ, ಡಿಎಸ್‌ಪಿ (ತ): ಸಂ.4.10ಕ್ಕೆ, ಗೋಲ್ಡ್ (ಮ): ರಾ.7ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.10ಕ್ಕೆ, ರಾ.7.05ಕ್ಕೆ, ತ್ರಿಬಲ್ ರೈಡಿಂಗ್ (ಕ): ಮ.1.05ಕ್ಕೆ, ಧರಣಿ ಮಂಡಲ ಮಧ್ಯದೊಳಗೆ (ಕ): ಸಂ.4.05ಕ್ಕೆ, ದಿ ಟೀಚರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಗಂಧದ ಗುಡಿ (ಕ): ಬೆ.11.10ಕ್ಕೆ, ಏನ್ ಆಕ್ಷನ್ ಹೀರೊ (ಹಿಂ): ಮ.1.20ಕ್ಕೆ, ರಾ.7.20ಕ್ಕೆ, ರಾ.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಭೇದಿಯಾ (3ಡಿ)(ಹಿಂ): ಬೆ.9.50ಕ್ಕೆ, ಮ.1ಕ್ಕೆ, ಮ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ತ್ರಿಬಲ್ ರೈಡಿಂಗ್ (ಕ): ಬೆ.9.55ಕ್ಕೆ, ಕಾಂತಾರ (ಕ): ಮ.1.05ಕ್ಕೆ, ರಾ.7.15ಕ್ಕೆ, ಇಟ್ಲು ಮರೆದುಮಿಲ್ಲಿ ಪ್ರಜಾನೀಕಂ (ತೆ): ಸಂ.4.10ಕ್ಕೆ, ದೃಶ್ಯಂ–2 (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ರೇಮೊ (ಕ): ಬೆ.10.30ಕ್ಕೆ, ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.4.50ಕ್ಕೆ, ಕಾಂತಾರ (ಕ): ರಾ.10.10ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.35ಕ್ಕೆ, ದೃಶ್ಯಂ–2 (ಹಿಂ): ಮ.1.40ಕ್ಕೆ, ತ್ರಿಬಲ್ ರೈಡಿಂಗ್ (ಕ): ಸಂ.4.35ಕ್ಕೆ, ರಾ.10.10ಕ್ಕೆ, ಸ್ಟ್ರೇಂಜ್ ವರ್ಲ್ಡ್ (3ಡಿ)(ಹಿಂ): ರಾ.7.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಿಎಸ್‌ಪಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫೋನ್ ಭೂತ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೆಡ್‌ಬುಷ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಹಿಟ್ ದಿ 2 ಕೇಸ್ (ತೆ)	4 ಪ್ರದರ್ಶನಗಳು
ಸಂಗಂ	
ಧರಣಿಮಂಡಲ ಮಧ್ಯದೊಳಗೆ (ಕ) ಗೋಲ್ಡ್ (ಮ)	2 ಪ್ರದರ್ಶನಗಳು
ಲಿಡೋ	
ಟ್ರಿಪಲ್ ರೈಡಿಂಗ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ಗಟ್ಟಿಕುಸ್ತಿ (ತ)	4 ಪ್ರದರ್ಶನಗಳು

ನೋಟು ಅಮಾನ್ಯೀಕರಣ: ತೀರ್ಪು ಕಾಯ್ದಿರಿಸಿದ ಸುಪ್ರೀಂ

ನವದೆಹಲಿ, ಡಿ.7– 500 ಮತ್ತು 1000 ರೂ.ಗಳ ಹಳೆಯ ನೋಟುಗಳನ್ನು ನಿಷೇಧಿಸಿದ ಕೇಂದ್ರ ಸರ್ಕಾರದ ಕ್ರಮದ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿದ್ದ ವಿವಿಧ ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿದ ಸುಪ್ರೀಂಕೋರ್ಟ್, ತೀರ್ಪು ಕಾಯ್ದಿರಿಸಲಾಗಿದೆ ಎಂದು ಬುಧವಾರ ಹೇಳಿದೆ.

ಸರ್ಕಾರದ ಪರ ಅಟಾರ್ನಿ ಜನರಲ್ ಆರ್ ವೆಂಕಟರಮಣಿ, ಆರ್‌ಬಿಐನ ವಕೀಲರು ಮತ್ತು ಹಿರಿಯ ವಕೀಲರಾದ ಪಿ ಚಿದಂಬರಂ ಹಾಗೂ ಶ್ಯಾಮ್ ದಿವಾನ್ ಸೇರಿದಂತೆ ಅರ್ಜಿದಾರರ ಪರ ವಕೀಲರ ವಾದವನ್ನು ಆಲಿಸಿದ ನ್ಯಾಯಮೂರ್ತಿ ಎಸ್‌ಎ ನಜೀರ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ, ಕೇಂದ್ರದ 2016ರ ನೋಟು ಅಮಾನ್ಯೀಕರಣ ಕ್ರಮ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ತೀರ್ಪನ್ನು ಕಾಯ್ದಿರಿಸಿದೆ.



ಕಂಪಲಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಅವರನ್ನು ಸನ್ಮಾನಿಸಲಾಯಿತು. ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ರವಿ, ಡೈರಿ ಅಧ್ಯಕ್ಷ ಕೃಷ್ಣೇಗೌಡ, ಕೆ.ಎಂ.ಲಕ್ಷ್ಮಣ್, ಪ್ರಭಾರ ಉಪ ವ್ಯವಸ್ಥಾಪಕ ನಿಶ್ಚಿತ್, ವಿಸ್ತರಣಾಧಿಕಾರಿ ನಂದಿನಿ, ಸಿಇಓ ಕಿಶೋರ್, ನಜೀಬ್, ಸ್ವಾಮಿ, ರಾಜೇಗೌಡ, ಕೃಷ್ಣ ಗಿರೀಶ್, ಸೂರಿ ಇತರರಿದ್ದರು.

ದೇಶದ ಆರ್ಥಿಕತೆಯಲ್ಲಿ ಕೃಷಿಯ ಪಾತ್ರ ಗಣನೀಯ

ಕುರಿ, ಮೇಕೆ, ಹಸು ಸಾಕಾಣಿಕೆ ಬಗ್ಗೆ ಒಂದು ದಿನದ ಉಚಿತ ತರಬೇತಿ

ತಿ.ನರಸೀಪುರ, ಡಿ.7– ಭಾರತ ಕೃಷಿ ಆಧಾರಿತ ದೇಶವಾಗಿದ್ದು, ದೇಶದ ಆರ್ಥಿಕತೆಯಲ್ಲಿ ಕೃಷಿಯ ಪಾತ್ರ ಗಣನೀಯವಾಗಿದೆ ಎಂದು ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಲಿಂಗರಾಜು ಹೇಳಿದರು.

ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ಮೈಸೂರಿನ ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್, ಕರ್ನಾಟಕ ಕುರಿ ಮತ್ತು ಉಣ್ಣೆ ನಿಗಮ ನಿಯಮಿತ ಹಾಗೂ ಪಟ್ಟಣದ ಪಶು ಸಂಗೋಪನಾ ಇಲಾಖೆ ಸಂಯಕ್ತಾಶ್ರಯದಲ್ಲಿ ನಡೆದ ಕುರಿ, ಮೇಕೆ ಮತ್ತು ಹಸು ಸಾಕಾಣಿಕೆ ಬಗ್ಗೆ ಒಂದು ದಿನದ ಉಚಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಅನಾದಿ ಕಾಲದಿಂದಲೂ ಕೃಷಿ ಮತ್ತು ಪಶು ಸಂಗೋಪನೆ ಚಟುವಟಿಕೆಗಳು ಒಂದೇ ನಾಣ್ಯದ ಎರಡು ಮುಖಗಳಂತಿದ್ದು, ಗ್ರಾಮೀಣ ಜನ ಜೀವನಕ್ಕೆ ಆರ್ಥಿಕ ಭದ್ರತೆ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಜಿಲ್ಲೆಯ ಗ್ರಾಮೀಣ ಜನತೆಯ ಪ್ರಮುಖ ಉದ್ಯೋಗ, ವ್ಯವಸಾಯ ಮತ್ತು ವ್ಯವಸಾಯ ಅವಲಂಬಿತ ಪಶು ಸಂಗೋಪನೆಗಳು ರೈತರ ಉಪಕಸುಬುಗಳಾಗಿದ್ದು, ಈ ಕಸುಬುಗಳ ನಿರ್ವಹಣೆಗೆ ಉಳುವ ಎತ್ತುಗಳು, ಗೊಬ್ಬರಕ್ಕಾಗಿ ಜಾನುವಾರುಗಳ ಮೇಲಿನ ಅವಲಂಬನೆ ನಿಚ್ಚಳವಾಗಿದೆ ಎಂದರು.



ಪಶುಪಾಲನೆ ಇಂದು ಕೇವಲ ಒಂದು ಕಸುಬಾಗಿ ಉಳಿಯದೆ ಉದ್ಯಮವಾಗಿ ಬೆಳೆದು ನಿಂತಿದೆ. ಪಶುಪಾಲನೆ ಈ ಹಂತಕ್ಕೇರಲು ಪಶುಪಾಲನೆ ಮತ್ತು ಪಶುವೈದ್ಯಸೇವಾ ಇಲಾಖೆಯ ಕೊಡುಗೆ ಅಪಾರ ಎಂದರು. ಗಂಗಾ ಚಾರಿಟಬಲ್ ಟ್ರಸ್ಟ್ ಏರ್ಪಡಿಸಿರುವ ತರಬೇತಿಯ ಉಪಯೋಗ ಪಡೆದು ಆರ್ಥಿಕ ಸ್ವಾವಲಂಬನೆ ಸಾಧಿಸುವಂತೆ ಸಲಹೆ ನೀಡಿದರು.

ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುರಿ ಮತ್ತು ಉಣ್ಣೆ ನಿಗಮದ ಸಹಾಯಕ ನಿರ್ದೇಶಕ ಡಾ. ಡಿ. ಎನ್. ನಾಗರಾಜು ಮಾತನಾಡಿ, ಪಶುಸಂಗೋಪನಾ ವಲಯವು ಕೃಷಿ ಆಧಾರಿತ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಚಟುವಟಿಕೆಗಳಲ್ಲಿ ಮುಖ್ಯವಾಗಿ ಹೈನುಗಾರಿಕೆ, ಕುರಿ ಸಾಕಾಣಿಕೆ, ಮೇಕೆ ಸಾಕಾಣಿಕೆ ಮತ್ತು ಕೋಳಿ ಸಾಕಾಣಿಕೆ ಒಳಗೊಂಡಿವೆ ಎಂದರು.

ಶ್ರೀಗಂಗಾ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ರಾಜ್ ಕಾಮಯ್ಯ ಮಾತನಾಡಿ, ಕಾರ್ಯಕ್ರಮದಲ್ಲಿ ಕುರಿ ಸಾಕಾಣಿಕೆ ಬಗ್ಗೆ ಹಾಗೂ ವ್ಯಾಕ್ಸಿನೇಷನ್ ಬಗ್ಗೆ ತರಬೇತಿ ನೀಡುವ ಜೊತೆಗೆ ಬ್ಯಾಂಕಿನಿಂದ ಸಾಲ ಪಡೆಯಲು ಸ್ವಾವಲಂಬಿಗಳಾಗಿ ಬದುಕಲು ಬೇಕಾದ ಸಹಾಯವನ್ನು ಟ್ರಸ್ಟ್ ಮಾಡುತ್ತದೆ. ತರಬೇತಿ ಪಡೆದ ಫಲಾನುಭವಿಗಳಿಗೆ ಬ್ಯಾಂಕಿನಿಂದ ಸಾಲ ದೊರಕಿಸಿಕೊಡಲು ಬೇಕಾಗುವ ದಾಖಲಾತಿಗಳನ್ನು ಸಿದ್ಧಪಡಿಸಿಕೊಳ್ಳುವ ಬಗ್ಗೆ ತರಬೇತಿ ಸಹ ನೀಡಲಾಗುತ್ತದೆ. ನಬಾರ್ಡ್‌ನಿಂದ ಉದ್ದೇಶಿತ ಕಾರ್ಯಕ್ಕೆ ಸಬ್ಸಿಡಿ ದೊರಕಲಿದ್ದು,ಎಲ್ಲ ರಾಷ್ಟ್ರೀಯ ಬ್ಯಾಂಕುಗಳಿಂದಲೂ ಸಾಲ ಸೌಲಭ್ಯ ದೊರಕಿಸಿಕೊಡಲು ಫಲಾನುಭವಿಗಳಿಗೆ ಟ್ರಸ್ ಸಹಕರಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗಂಗಾ ಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿ ದಿವ್ಯಶ್ರೀ, ನಿರ್ದೇಶಕರಾದ ಶಂಕರ್, ಚಂದ್ರಶೇಖರ್, ಶಿವರಾಮೇಗೌಡ, ಮರಿಗೌಡ, ಚಿಕ್ಕಲಿಂಗೇಗೌಡ, ಚನ್ನಪ್ಪ ರೆಡ್ಡಿ, ತಿರುಮಲ, ತಾಲೂಕು ಕುರುಬ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಕಾರ್ಯದರ್ಶಿ ಬಸವರಾಜು ಸೇರಿದಂತೆ ರೈತರು ಫಲಾನುಭವಿಗಳು ಹಾಜರಿದ್ದರು.

2023ರ ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆ

ಮೈಸೂರಲ್ಲಿ ರೌಡಿ ಚಟುವಟಿಕೆ ನಿಗ್ರಹಕ್ಕೆ ಪೊಲೀಸರ ಕಾರ್ಯತಂತ್ರ

● ಎಲ್ಲಾ ಪೊಲೀಸ್ ಠಾಣೆಗಳಿಂದ ರೌಡಿಶೀಟರ್‌ಗಳ ಮಾಹಿತಿ ಸಂಗ್ರಹ ● ಅವರಿಗೆ ಆಶ್ರಯ ನೀಡಿ ಪ್ರೋತ್ಸಾಹಿಸುವವರ ಮೇಲೂ ತೀವ್ರ ನಿಗಾ

ಮೈಸೂರು, ಡಿ.7(ಆರ್‌ಕೆ)–ಮುಂಬರುವ ರಾಜ್ಯ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ರೌಡಿಗಳ ಚಟುವಟಿಕೆಗಳನ್ನು ನಿಗ್ರಹಿಸಲು ಪೊಲೀಸರು ಕಾರ್ಯತಂತ್ರ ರೂಪಿಸಿದ್ದಾರೆ.

ರಾಜಕೀಯ ಪಕ್ಷಗಳು, ಚುನಾವಣೆ ಸಮೀಪಿಸುತ್ತಿರುವಂತೆಯೇ ರೌಡಿಗಳ ಪಕ್ಷಕ್ಕೆ ಸೇರಿಸಿಕೊಂಡು ಅವರಿಗೆ ಟಿಕೆಟ್ ನೀಡುವ ಸಂಬಂಧ ತೀವ್ರತರ ಚರ್ಚೆಗಳು ನಡೆದು, ವಿವಾದ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಚುನಾವಣಾ ವೇಳೆ ಸಂಭವಿಸಬಹುದಾದ ಘರ್ಷಣೆ, ರಾಜಕೀಯ ವೈಷಮ್ಯ, ಹಣ ಬಲ–ತೋಳ್ಬಲ ಪ್ರದರ್ಶನವನ್ನು ನಿಗ್ರಹಿಸಲು ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಕಾರ್ಯಮಗ್ನರಾಗಿದ್ದಾರೆ.

ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿಯವರ ನಿರ್ದೇಶನದಂತೆ ರಾಜ್ಯದ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ರೌಡಿಶೀಟರ್‌ಗಳು, ಪುಡಿ ರೌಡಿಗಳು, ಸಮಾಜಘಾತುಕ ಶಕ್ತಿಗಳ ಚಟುವಟಿಕೆಗಳ ಮಾಹಿತಿ ಸಂಗ್ರಹಿಸಿ, ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳು, ಅವರು ಸಕ್ರಿಯವಾಗಿರುವ ಬಗ್ಗೆ ಪರಿಶೀಲಿಸಿ ಸಂಬಂಧಿಸಿದ ಪೂರಕ ದಾಖಲೆಗಳೊಂದಿಗೆ ಆಯಾ ಜಿಲ್ಲೆಯ ಎಸ್ಪಿಗಳು ಹಾಗೂ ನಗರಗಳ



ನಜರ್‌ಬಾದ್‌ನಲ್ಲಿರುವ ಮೈಸೂರು ನಗರ ಪೊಲೀಸ್ ಕಮಿಷ್ನರ್ ಕಚೇರಿ. ಫೈಲ್ ಚಿತ್ರ

ಪೊಲೀಸ್ ಕಮಿಷ್ನರ್‌ಗಳಿಗೆ ವರದಿ ನೀಡುವ ಪ್ರಕ್ರಿಯೆ ಕಳೆದೊಂದು ವಾರದಿಂದ ಆರಂಭವಾಗಿದೆ. ಅದರಂತೆ ಪ್ರತೀ ಠಾಣಾ ವ್ಯಾಪ್ತಿಯಲ್ಲಿರುವ ರೌಡಿಶೀಟರ್‌ಗಳನ್ನು ಪಟ್ಟಿ ಮಾಡಿ, ಕಳೆದ 3 ವರ್ಷಗಳಿಂದೀಚೆಗೆ ಅವರು ಸಕ್ರಿಯರಾಗಿದ್ದಾರೆಯೇ, ಹೊಸದಾಗಿ ಅಪರಾಧ ಪ್ರಕರಣಗಳು ದಾಖಲಾಗಿವೆಯೇ, ಪ್ರಸ್ತುತ ಸ್ಥಿತಿ–ಗತಿ, ಗೊಂದಲ, ಗುಂಪು ಘರ್ಷಣೆ, ಸುಲಿಗೆ, ಹಲ್ಲೆ, ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿರುವರೇ, ಅವರಿಗೆ ಸಹಾನುಭೂತಿ ತೋರಿಸುವ, ಆಸರೆ ನೀಡುತ್ತಿರುವ, ಆರ್ಥಿಕ ನೆರವು ನೀಡುತ್ತಿರುವವರ್ಯಾರು, ಬರ್ತ್‌ಡೇ ನೆಪದಲ್ಲಿ ಔತಣಕೂಟ ನಡೆಸುತ್ತಿರುವುದೂ ಸೇರಿದಂತೆ ಇನ್ನಿತರ ರಿಯಲ್ ಎಸ್ಟೇಟ್, ಲೇವಾದೇವಿ ನಡೆಸುತ್ತಿರುವ ಬಗ್ಗೆ ಮಾಹಿತಿ ಸಂಗ್ರಹ, ರೌಡಿಗಳನ್ನು ಗಡಿಪಾರು ಮಾಡುವ ಇಲ್ಲವೇ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವಂತೆ ಉನ್ನತಾಧಿಕಾರಿಗಳು, ಠಾಣಾ ಇನ್ಸ್‌ಪೆಕ್ಟರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಸಿಬಿ ಘಟಕದ ಅಧಿಕಾರಿಗಳು, ರೌಡಿಗಳು, ಸಮಾಜ ಘಾತುಕ ಶಕ್ತಿಗಳ ಚಲನ–ವಲನಗಳ ಮೇಲೆ ನಿಗಾ ಇರಿಸಿದ್ದು, ರಾಜಕೀಯ ಪಕ್ಷಗಳ ಮುಖಂಡರು ಏರ್ಪಡಿಸುವ ಸಭೆ–ಸಮಾರಂಭಗಳಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವ ಬಗ್ಗೆ ಮಾಹಿತಿ, ಫೋಟೋ, ವಿಡಿಯೋ ಸಂಗ್ರಹಿಸಿ ಸಮಗ್ರ ವರದಿ ತಯಾರಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ.

ಕರ್ನಾಟಕ ಕಂಟ್ರೋಲ್ ಆಫ್ ಆರ್ಗನೈಸ್ಡ್ ಕ್ರೈಮ್ ಆಕ್ಟ್ (KCOCA) ಕಾನೂನು ಬಾಹಿರ ಚಟುವಟಿಕೆ ನಿಗ್ರಹ ಕಾಯ್ದೆ (UAPA), ಗೂಂಡಾ ಕಾಯ್ದೆಯಡಿ ಪ್ರಕರಣ ಹಾಗೂ ಈಗಲೂ ಈ ಕಾಯ್ದೆಗಳಡಿ ಬರುವ ಅಪರಾಧ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗಿಯಾಗಿರುವ ವ್ಯಕ್ತಿಗಳನ್ನು ಗಡಿಪಾರು ಮಾಡುವ ಅಥವಾ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಶಿಫಾರಸ್ಸು ಮಾಡಲು ಇನ್ಸ್‌ಪೆಕ್ಟರ್‌ಗಳು ವರದಿ ಸಿದ್ಧಪಡಿಸುತ್ತಿದ್ದಾರೆ. ಹೀಗೆ ಎಲ್ಲಾ ಠಾಣೆಗಳಿಂದ ವರದಿ ಬಂದ ಮೇಲೆ ಕಾನೂನು ತಜ್ಞರಿಂದ ಪರಿಶೀಲನೆ ನಡೆಸಿ ಅಗತ್ಯ ಕಾನೂನು ರೀತಿಯ ಕ್ರಮ ಕೈಗೊಳ್ಳುವ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ. ಜೊತೆಗೆ ಮೈಸೂರಿನ ಎಲ್ಲಾ 3 ಉಪ ವಿಭಾಗಗಳ ಎಸಿಪಿಗಳ ನೇತೃತ್ವದಲ್ಲಿ ಈಗಾಗಲೇ ಮೊದಲ ಹಂತದ ರೌಡಿ ಪರೇಡ್ ನಡೆಸಲಾಗಿದ್ದು, ಚುನಾವಣೆ ವೇಳೆ ತಮ್ಮ ಹಳೇ ಚಾಳಿ ಮುಂದುವರಿಸಿದರೆ ಘೋರ ಸ್ವರೂಪದ ಪ್ರಕರಣ ದಾಖಲಿಸಿ ಶಾಶ್ವತವಾಗಿ ಜೈಲಿಗೆ ಕಳುಹಿಸುತ್ತೇವೆ ಎಂಬ ಎಚ್ಚರಿಕೆ ನೀಡಿದ್ದಾರೆ. ರಾಜಕೀಯ ಪಕ್ಷದ ಮುಖಂಡರೊಂದಿಗೆ ಗುರ್ತಿಸಿಕೊಂಡು ಚುನಾವಣೆ ಬರುತ್ತಿದ್ದಂತೆಯೇ ತಮ್ಮ ರೌಡಿ ಚಟುವಟಿಕೆಗಳಲ್ಲಿ ತೊಡಗಿ, ಡೀಲ್ ಮಾಡುವ ರೌಡಿಶೀಟರ್‌ಗಳ ನಿತ್ಯ ಚಟುವಟಿಕೆಗಳ ಮೇಲೆ ನಿಗಾ ಇರಿಸಿ, ಎಚ್ಚರಿಕೆ ವಹಿಸಲು ಮೈಸೂರಿನ ಪೊಲೀಸರು ಸಜ್ಜಾಗಿದ್ದಾರೆ.

ದೆಹಲಿ ಮಹಾನಗರ ಪಾಲಿಕೆ ಚುನಾವಣೆ ಫಲಿತಾಂಶ ಪ್ರಕಟ

ಎಎಪಿಗೆ 134, ಬಿಜೆಪಿ 104, ಕಾಂಗ್ರೆಸ್‌ಗೆ 9 ಸ್ಥಾನ



ನವದೆಹಲಿ: ಮಹಾನಗರ ಪಾಲಿಕೆ (ಎಂಸಿಡಿ) ಚುನಾವಣೆ ಫಲಿತಾಂಶ ಬುಧವಾರ ಪ್ರಕಟಗೊಂಡಿದ್ದು, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷ ಸ್ಪಷ್ಟ ಬಹುಮತ ದೊಂದಿಗೆ ಮೊದಲ ಬಾರಿಗೆ ಅಧಿಕಾರದ ಗದ್ದುಗೆ ಏರಲಿದೆ. ಈ ಮೂಲಕ 15 ವರ್ಷಗಳ ಬಿಜೆಪಿ ಆಡಳಿತ ಅಂತ್ಯಗೊಂಡಿದೆ.

ತೀವ್ರ ಕುತೂಹಲ ಕೆರಳಿಸಿದ್ದ ಎಂಸಿಡಿ ಚುನಾವಣೆಯಲ್ಲಿ ಬಿಜೆಪಿ ಪೈಪೋಟಿಯ ಹೊರತಾಗಿಯೂ ದೆಹಲಿ ಮಹಾನಗರ ಪಾಲಿಕೆಯಲ್ಲಿ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಆಮ್ ಆದ್ಮಿ ಪಕ್ಷ ಯಶಸ್ವಿಯಾಗಿದೆ.

ಎಂಸಿಡಿಯ ಎಲ್ಲಾ 250 ವಾರ್ಡ್‌ಗಳ ಫಲಿತಾಂಶ ಪ್ರಕಟಿಸಲಾಗಿದ್ದು, ಎಎಪಿ 134 ಸ್ಥಾನ ಪಡೆಯುವ ಮೂಲಕ ಸ್ಪಷ್ಟ ಬಹುಮತ ಗಳಿಸಿದರೆ, ಬಿಜೆಪಿ 104 ಸ್ಥಾನ ಗಳಿಸಿದೆ. ಇನ್ನು ಕಾಂಗ್ರೆಸ್ ಕೇವಲ ಒಂಬತ್ತು ವಾರ್ಡ್‌ಗಳಲ್ಲಿ ಮಾತ್ರ ಗೆಲುವು ಸಾಧಿಸಿದೆ. ಈಶಾನ್ಯ ದೆಹಲಿಯ ಸೀಲಾಂಪುರದಿಂದ ಶಕೀಲಾ ಬೇಗಂ ಸೇರಿದಂತೆ ಮೂವರು ಪಕ್ಷೇತರ ಅಭ್ಯರ್ಥಿಗಳು ಗೆದ್ದಿದ್ದಾರೆ.

ದೆಹಲಿಯ 250 ವಾರ್ಡ್‌ಗಳ ಪೈಕಿ ಆಮ್ ಆದ್ಮಿ ಪಕ್ಷ 134 ವಾರ್ಡ್‌ಗಳಲ್ಲಿ ಜಯಭೇರಿ ಭಾರಿಸಿದ್ದು, ಬಹುಮತಕ್ಕೆ ಅಗತ್ಯವಿರುವ 126 ಸ್ಥಾನಗಳನ್ನು ಮೀರಿ ಇನ್ನೂ 8 ಹೆಚ್ಚುವರಿ ಸ್ಥಾನಗಳೊಂದಿಗೆ ಆಪ್ ಅಧಿಕಾರದ ಗದ್ದುಗೆ ಹಿಡಿಯಲಿದೆ. ತಮ್ಮ ಪಕ್ಷಕ್ಕೆ ಭರ್ಜರಿ ಬಹುಮತ ನೀಡಿದ ದೆಹಲಿ ಜನತೆಗೆ ಧನ್ಯವಾದ ಹೇಳಿದೆ ಅರವಿಂದ್ ಕೇಜ್ರಿವಾಲ್ ಅವರು, ಕೇಂದ್ರಾಡಳಿತ ಪ್ರದೇಶದಲ್ಲಿ ನಾಗರಿಕ ಸೌಕರ್ಯಗಳನ್ನು ಸುಧಾರಿಸಲು ಬಿಜೆಪಿ ಮತ್ತು ಕಾಂಗ್ರೆಸ್‌ನ ಸಹಕಾರ, ಕೇಂದ್ರ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಆಶೀರ್ವಾದ ಕೋರಿದ್ದಾರೆ.

ನಾವೆಲ್ಲರೂ ದೆಹಲಿಯ ಸ್ಥಿತಿಯನ್ನು ಸುಧಾರಿಸಬೇಕಾಗಿದೆ. ಹೀಗಾಗಿ ನನಗೆ ಬಿಜೆಪಿ ಮತ್ತು ಕಾಂಗ್ರೆಸ್ ಸೇರಿದಂತೆ ಎಲ್ಲರ ಸಹಕಾರ ಬೇಕು. ನಮಗೆ ಎಲ್ಲರ ಸಹಕಾರ ಬೇಕು, ವಿಶೇಷವಾಗಿ ಕೇಂದ್ರ ಮತ್ತು ಪ್ರಧಾನಿ ಮೋದಿ ಸಹಾಯ ಮತ್ತು ಆಶೀರ್ವಾದದ ಅಗತ್ಯವಿದೆ ಎಂದು ಕೇಜ್ರಿವಾಲ್ ತಮ್ಮ ವಿಜಯೋತ್ಸವ ಭಾಷಣದಲ್ಲಿ ಹೇಳಿದ್ದಾರೆ.

ತಲವಾರ್‌ನಿಂದ ಕೇಕ್ ಕತ್ತರಿಸಿ ರೌಡಿ ಬರ್ತ್‌ಡೇ! ಪೊಲೀಸರಿಂದ ತನಿಖೆ

ಮೈಸೂರು,ಡಿ.7(ಆರ್‌ಕೆ)–ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ರೌಡಿಶೀಟರ್ ಓರ್ವನ ಬರ್ತ್‌ಡೇ ಪಾರ್ಟಿಯಲ್ಲಿ ತಲವಾರ್‌ನಿಂದ ಕೇಕ್ ಕತ್ತರಿಸಿ, ಹುಟ್ಟುಹಬ್ಬ ಆಚರಿಸಲಾಗಿದೆ ಎಂಬ ಸಾಮಾಜಿಕ ಜಾಲತಾಣವೊಂದರ ಮಾಹಿತಿ ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಮೈಸೂರು ಮತ್ತು ಬೆಂಗಳೂರಿನಿಂದಲೂ ಬಂದಿದ್ದ ರೌಡಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ತಲವಾರ್‌ನಿಂದ ಭಾರೀ ಗಾತ್ರದ ಕೇಕ್ ಕತ್ತರಿಸಿ ಬರ್ತ್‌ಡೇ ಆಚರಿಸಿದ್ದು, ಅದನ್ನು ಆಯೋಜನೆ ಮಾಡಿದವರು, ಪಾಲ್ಗೊಂಡಿದ್ದವರು ಯಾರು, ಇದರ ಪ್ರಾಯೋಜಕರು ಯಾರು ಎಂಬುದರ ಬಗ್ಗೆ ಪೊಲೀಸರು, ರಾಜ್ಯ ಗುಪ್ತವಾರ್ತಾ ವಿಭಾಗದ ಅಧಿಕಾರಿಗಳು ಮಾಹಿತಿ ಕಲೆ ಹಾಕುತ್ತಿದ್ದಾರೆ. ಬರ್ತ್‌ಡೇ ಕಾರ್ಯಕ್ರಮದ ಫೋಟೋಗಳು, ವಿಡಿಯೋ ತುಣುಕುಗಳು ಕೆಲವೆಡೆ ಹರಿದಾಡುತ್ತಿದ್ದುದರ ಜಾಡು ಹಿಡಿದು ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು, ಇದಕ್ಕೆ ಸಾಥ್ ನೀಡಿದವರ ಮಾಹಿತಿಯನ್ನು ಕಲೆ ಹಾಕುತ್ತಿದ್ದಾರೆ.

ಕೆಎಸ್‌ಎಂಸಿಎನಿಂದ ಸಿಎಂ ಪರಿಹಾರ ನಿಧಿಗೆ ಕೋಟಿ ರೂ. ದೇಣಿಗೆ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಡಾ. ಮುರುಗೇಶ್ ಆರ್. ನಿರಾಣಿರವರಿಗೆ ಮೆ. ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಕಂಪನಿಯ ಅಧ್ಯಕ್ಷ ಎಂ.ಎಸ್.ಕರಿಗೌಡ್ರು ಸಂಸ್ಥೆಯ ಸುವರ್ಣ ಮಹೋತ್ಸವ ಸ್ಮರಣಾರ್ಥವಾಗಿ ಮುಖ್ಯಮಂತ್ರಿಯವರ ಪರಿಹಾರ ನಿಧಿ'ಗೆ ಒಂದು ಕೋಟಿ ರೂ. ಚೆಕ್ ನೀಡಿದರು.

ಬೆಂಗಳೂರು: ಸರ್ಕಾರದ ಜಾಹೀರಾತು ಸಂಸ್ಥೆಯಾದ ಮೆ|| ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ಕಂಪನಿಯು ತನ್ನ ಸುವರ್ಣ ಮಹೋತ್ಸವ ವರ್ಷದ (2021–22) ಸಾಲಿನ ತನ್ನ ಲಾಭಾಂಶದಿಂದ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ 1 ಕೋಟಿ ರೂಪಾಯಿಗಳ ದೇಣಿಗೆ ನೀಡಿದೆ.

ಕೋವಿಡ್–19ರ ಸೋಂಕಿನಿಂದ ಕಳೆದ ಸಾಲಿನಲ್ಲಿ ಎಲ್ಲಾ ವ್ಯವಹಾರಗಳೂ ತಟಸ್ಥವಾಗಿದ್ದರೂ ಕಂಪನಿಯು ತನ್ನ ಪರಿಶ್ರಮ ಮತ್ತು ಸಮರ್ಪಿತ ಸೇವೆಯಿಂದ ಲಾಭ ಗಳಿಕೆಯ ಪಥದಲ್ಲಿ ಮುನ್ನಡೆದಿತ್ತು. 2021–22ರ ಸಾಲಿನಲ್ಲಿ ಕಂಪನಿಯು ರೂ. 358.13 ಕೋಟಿ ವಹಿವಾಟು ನಡೆಸಿದ್ದು, 11.14 ಕೋಟಿ ನಿವ್ವಳ ಲಾಭ ಗಳಿಸಿದೆ.

ಕೈಗಾರಿಕಾ ಸಚಿವ ಡಾ. ಮುರುಗೇಶ್ ಆರ್. ನಿರಾಣಿ ಅವರ ಸಮ್ಮುಖದಲ್ಲಿ ಕಂಪನಿ ಅಧ್ಯಕ್ಷ ಎಂ.ಎಸ್. ಕರಿಗೌಡ್ರ ನೇತೃತ್ವದಲ್ಲಿ ಮತ್ತು ನಿರ್ದೇಶಕರಾದ ವೀರೇಶ್ ಸಂಗಳದ, ಎಚ್.ಆರ್. ತೀರ್ಥಲಿಂಗಪ್ಪ (ತೀರ್ಥೇಶ್), ಕೆ.ಜಿ.ವಸಂತಗೌಡ, ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರಿ, ಉಪಪ್ರಧಾನ ವ್ಯವಸ್ಥಾಪಕ ಪಿ.ಎಸ್.ನಂದೀಶ, ವ್ಯವಸ್ಥಾಪಕ ನಾಗಪ್ಪ ಕಿತ್ತೂರು ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿಯವರಿಗೆ ಚೆಕ್ ನೀಡಲಾಯಿತು. ಕಂಪನಿಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ಬಗ್ಗೆ ಹೊಂದಿರುವ ಕಾಳಜಿಯ ದ್ಯೋತಕ ಇದಾಗಿದೆ.

ಚಿಕ್ಕ ವಯಸ್ಸಲ್ಲೇ ವಿಶ್ವಮಾನವ ಮಾರ್ಗದಲ್ಲಿ ನಡೆದು ಇತರರಿಗೆ ಮಾದರಿಯಾದ ಡಾ.ದೊಡ್ಡರಂಗೇಗೌಡರು

● ಸುತ್ತೂರು ಶ್ರೀಗಳ ಪ್ರಶಂಸೆ ● ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ದೊಡ್ಡರಂಗೇಗೌಡರಿಗೆ ಮೈಸೂರಲ್ಲಿ ಅಭಿನಂದನೆ



ಮೈಸೂರು,ಡಿ.7(ಜಿಎ)–ವಿದ್ಯಾರ್ಥಿ ಜೀವನದ ಸಂದರ್ಭದಲ್ಲಿಯೇ ಜಾತಿಯಿಂದ ಹೊರ ಬಂದು, ವಿಶ್ವಮಾನವ ಮಾರ್ಗದಲ್ಲಿ ನಡೆದು ಡಾ.ದೊಡ್ಡರಂಗೇಗೌಡರು ಅನೇಕರಿಗೆ ಮಾದರಿಯಾಗಿದ್ದಾರೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ತಿಳಿಸಿದರು.

ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಡಾ. ದೊಡ್ಡರಂಗೇಗೌಡರಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಗೌಡರನ್ನು ಅಭಿನಂದಿಸಿ, ಶ್ರೀಗಳು ಮಾತನಾಡಿದರು.

ಡಾ.ದೊಡ್ಡರಂಗೇಗೌಡ ಅವರು ಮುಂದಿನ ತಿಂಗಳು ಅಧ್ಯಕ್ಷರಾಗಿ ಬೃಹತ್ ವೇದಿಕೆ ಏರಲಿದ್ದಾರೆ. ಸಾಹಿತ್ಯ ಕ್ಷೇತ್ರದ ಹಿರಿಯ ಸಾಧಕರು, ಸಮ್ಮೇಳನಕ್ಕೆ ಅಧ್ಯಕ್ಷರಾಗಿರುವುದು ಸಂತಸದ ವಿಚಾರ ಎಂದರು.

ಕೆಲ ದಿನಗಳ ಹಿಂದೆ ಬೆಂಗಳೂರಿನ ಕಸಾಪದಲ್ಲಿ ಭುವನೇಶ್ವರಿ ಭಾವಚಿತ್ರ ಅನಾವರಣ ಸಂದರ್ಭದಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಮಹೇಶ್ ಜೋಷಿ ಅವರೊಡನೆ ಮಾತನಾಡಿ ಮೈಸೂರಿನಲ್ಲಿ ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸುವಂತೆ ತಿಳಿಸಿದ್ದೆ. ಏಕೆಂದರೆ ಅವರು ಮೈಸೂರಿನ ಬಗ್ಗೆ ವಿಶೇಷ ಅಭಿಮಾನ ಇಟ್ಟುಕೊಂಡಿದ್ದಾರೆ.

ಮೈಸೂರು ಕುರಿತು ಅನೇಕ ಕವನಗಳನ್ನು ಬರೆದಿದ್ದಾರೆ. ಇವರನ್ನು ಅಭಿನಂದಿಸುತ್ತಿರುವುದು ಮೈಸೂರಿಗರ ಹೆಮ್ಮೆಯಾಗಿದೆ ಎಂದು ತಿಳಿಸಿದರು.

ಸಾಹಿತ್ಯ ಮನ ಮಿಡಿಯುವಂತಿರಬೇಕು. ಮುದ ನೀಡುವ ಅಂಶಗಳನ್ನೊಳಗೊಂಡಿರಬೇಕು. ಇವರ ಸಾಹಿತ್ಯದಲ್ಲಿ ಈ ರೀತಿಯ ಅಂಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದಾಗಿದೆ. ಇವರ ಸಾಹಿತ್ಯದಲ್ಲಿ ಗ್ರಾಮೀಣ ಸೊಬಗು ಹೆಚ್ಚಿರುವುದರಿಂದ ಅವರನ್ನು ಸಿನಿಮಾಗೆ ಅನೇಕರು ಬಳಸಿಕೊಂಡರು. ಅವರು ಎಂಎಲ್‌ಸಿ ಆಗಿದ್ದು, ಅದು ಅವರು ಬಯಸದೇ ಬಂದಿದ್ದು. ಹಾಗೆಯೇ ಬೃಂದಾವನ ಎಂಬ ಪತ್ರಿಕೆಯನ್ನು ಮಾಡಿ ಅದರ ಮೂಲಕವು ಕನ್ನಡವನ್ನು ಸಾರಿದರು. ಸರಳ ಜೀವನದ ಬಗ್ಗೆ ಅಪಾರ ನಂಬಿಕೆಯಿದ್ದು, ಹಾಗೇ ಜೀವನ ನಡೆಸುತ್ತಿದ್ದಾರೆ. ಟೀಕೆಗೆ ಒಳಗಾಗದ ಬದುಕು ಬದುಕೇ ಅಲ್ಲ ಎಂಬ ಮನಸ್ಥಿತಿ ಇಟ್ಟುಕೊಂಡು ಎಲ್ಲರ ಮಾತುಗಳನ್ನು ಆಲಿಸಿಕೊಳ್ಳುತ್ತಾರೆ. ಪಿಯುಸಿಯಲ್ಲಿ ಜಾತಿ ಎಂಬ ಕಾಲಂಗೆ ವಿಶ್ವಮಾನವ ಎಂದು ಬರೆಯುವ ಮೂಲಕ ಜಾತಿಯಿಂದ ಹೊರ ಬಂದು ವಿಶ್ವಮಾನವ ಮಾರ್ಗದಲ್ಲಿ ಸಾಗುತ್ತಿದ್ದಾರೆ. ಅವರ ನೇತೃತ್ವದಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನೆರವೇರಲಿದೆ ಎಂಬ ವಿಶ್ವಾಸವಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಂಕಣಕಾರ ಡಾ.ಗುಬ್ಬಿಗೂಡು ರಮೇಶ್ ಮಾತನಾಡಿ, ಮೈಸೂರನ್ನು ಸಾಂಸ್ಕೃತಿಕ ಮಹಾದ್ವಾರ ಎಂದು ಕರೆಯುತ್ತಾರೆ. ಅಂತಹ ಸ್ಥಳದಲ್ಲಿ ಡಾ.ದೊಡ್ಡರಂಗೇಗೌಡರನ್ನು ಶ್ರೀಗಳ ಸಮ್ಮುಖದಲ್ಲಿ ಅಭಿನಂದಿಸಿ, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಣಿ ಮುಕುಟದಂತಿರುವವರಿಗೆ ಕಂಕಣವನ್ನು ಕಟ್ಟಿ ಕಳುಹಿಸುತ್ತಿರುವುದು ಸಂತಸದ ಸಂಗತಿ ಎಂದರು. ಡಾ.ದೊಡ್ಡರಂಗೇಗೌಡರು ಸಾಹಿತ್ಯದ ಎಲ್ಲಾ ವಿಭಾಗಗಳಲ್ಲಿ ಕೆಲಸ ಮಾಡಿ 114ಕ್ಕೂ ಅಧಿಕ ಕೃತಿಗಳನ್ನು ನೀಡಿದ್ದಾರೆ. ಈಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿಕೊಂಡಿದ್ದಾರೆ. ಅವರು ಬರೆದಿರುವ ಭಾವಗೀತೆಗಳ ಸಿಡಿ 37 ಮಾರುಕಟ್ಟೆಯಲ್ಲಿ ಲಭ್ಯವಿದೆ. ಕನ್ನಡ ಗೀತ ಸಾಹಿತ್ಯಕ್ಕೆ ಬಹಳ ದೊಡ್ಡ ಕೊಡುಗೆ ನೀಡಿದ್ದಾರೆ. ಕನ್ನಡ ಗೀತ ಸಾಹಿತ್ಯವೂ ಅನೇಕರ ಕೊಡುಗೆಯಿಂದ ಅತ್ಯಂತ ಸಮೃದ್ಧಿಯಾಗಿ ಬೆಳೆದಿದ್ದು, ಅದರಲ್ಲೂ ಇವರ ಹೆಸರು ಹೇಳದೆ ಮುಂದೆ ಸಾಗಲು ಸಾಧ್ಯವಿಲ್ಲ ಎಂದರು. ಸಿನಿಮಾದಲ್ಲಿ ಸುಮ್ಮನೆ ಗೀತ ರಚನೆ ಮಾಡುವವರಿಗೂ ಹಾಗೂ ಸಾಹಿತ್ಯವನ್ನು ಅರಿತು ಗೀತೆ ರಚನೆ ಮಾಡುವವರಿಗೂ ಬಾರೀ ವ್ಯತ್ಯಾಸವಿದ್ದು, ಸಿನಿಮಾ, ಸಾಹಿತ್ಯ ಎರಡರಲ್ಲೂ ಕೆಲಸ ಮಾಡಿದರೆ, ಅವರು ಎರಡು ಕಡೆಗೂ ಸೂಕ್ತರಲ್ಲ ಎಂಬ ಮಾತುಗಳ ಕೇಳುತ್ತೇವೆ. ಆದರೆ, ಇವರು 700ಕ್ಕೂ ಹೆಚ್ಚು ಸಿನಿಮಾ ಗೀತೆ ಬರೆದು ಸೈ ಎನಿಸಿಕೊಂಡಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಕವಯಿತ್ರಿ ಡಾ.ಲತಾ ರಾಜಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದಶೇಖರ್, ಕಸಾಪ ನಗರಾಧ್ಯಕ್ಷ ಕೆ.ಎಸ್. ಶಿವರಾಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

PUBLIC NOTICE

Notice is hereby given that M/s. VIJAYA RAJA RAJESWARI CONSTRUCTIONS PVT.LTD., is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at Door No. 2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002, within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Property bearing Site No.161, situated at 2nd Main Road, Yadavagiri, Devaraja Mohalla, Mysore City, measuring East to West – 125 Feet and North to South – 90 Feet, totally measuring 11,250 Square Feet, bounded on: East – Road, West – Conservancy and thereafter Site No.149 and 150, North – Site No.160 and South – Site No.162.

Sd/- Dhirendra Kumar R. Mehta, Advocate
KEY-ANS LAW SOLUTIONS
Date: 07.12.2022
Place: Mysore

PUBLIC NOTICE

Notice is given to the general public at large that my client is negotiating and intending to purchase the property mentioned in the schedule below from its present owner Smt.jalajakshi H K wife of Mr. Krishnappa H B, Resident of Hanakodu village, Somwarpete taluk, Doddamolathe, Kodagu-571236. Any family Members, Individuals, banks, Financial institutions etc having any objections for my client entering into any transaction with the said owner is hereby required to communicate their objections in writing to my office with Documentary evidence within 07 days from the date of this publication. In the absence of any authenticated objections/claims, My Client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that Piece and parcel of land property bearing Site no. 184 Measuring East to West:12.00 Meter and North to South (17.80+17.70)/2 Meter admeasuring 213.00 Square Meter carved out of converted land bearing Survey No.25, 27/3, 29/4, 29/43, 29/2, 29/5 and 31/3 of K.Hemmanahalli Village, Yelwala Hobli, Mysuru Taluk and approved as residential Layout with Site Numbers 1 to 225 by the Mysuru urban Development Authority vide Sanctioned plan bearing number MYNAPRA/NAYOSHA/VINYASA/48/2016-17 dated 14-11-2016, layout Developed by M/s. Skytop Builders Private Limited, Mysuru and bounded by: East by : Site No. 185, West by: Site No: 183, North by Road, and South by : Site No, 187 & 186.

Sd/- Dinesh Solanki, B.Com, LL.M
Advocate KAR E.NO, 1822/2007 # 1197, 12/2, K.R.B. Road, behind Palyam printers, Chamarajapuram, Mysuru-570005. 9343430011

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ: 29.11.2022 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 9.12.2022 ಶುಕ್ರವಾರ ಬೆಳಗ್ಗೆ 9.15 ರಿಂದ 10.15 ಗಂಟೆಗೆ ಮೃತರ ಸ್ವಗೃಹ # 7, ಯರಗನಹಳ್ಳಿ, ಮೈಸೂರು ಇಲ್ಲಿ ಏರ್ಪಡಿಸುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಃಖತಪ್ತರು: ತಂದೆ - ತಾಯಿ, ಅಣ್ಣ-ತಮ್ಮ-ತಂಗಿಯರು ಹೊಸಹಳ್ಳಿ ಕುಟುಂಬವರ್ಗದವರು ಮತ್ತು ಯರಗನಹಳ್ಳಿ ಗ್ರಾಮಸ್ಥರು.

ಶ್ರೀ ಶಿವಲಿಂಗು ಎಂ

7ನೇ ವರ್ಷದ ಸವಿನೆನಪು



ಹೋಟೆಲ್ ಸ್ವಾಮಿ ಹುಲ್ಲಹಳ್ಳಿ

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ಆಶೀರ್ವಾದದಿಂದ ಮುನ್ನಡೆಯುತ್ತೇವೆ.

ದುಃಖತಪ್ತರು: ಪತ್ನಿ ಮತ್ತು ಮಕ್ಕಳು, ಹುಲ್ಲಹಳ್ಳಿ

ಮೈಸೂರು ಮಿತ್ರ ಓದುಗರ ಗಮನಕ್ಕೆ

43

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಭಾರತ ಸರ್ಕಾರ ಪರಮಾಣು ಇಲಾಖೆ ಭಾಭಾ ಪರಮಾಣು ಸಂಶೋಧನ ಕೇಂದ್ರ

ಅಂಚೆ ಪೆಟ್ಟಿಗೆ ಸಂಖ್ಯೆ -1, ಇಲವಾಲ ಪೋಸ್ಟ್ ಮೈಸೂರು – 571130

ಟೆಂಡರ್ ಪ್ರಕಟಣೆ

ಆನ್‌ಲೈನ್ ಐಟಂ ದರದ ಟೆಂಡರ್ ಅನ್ನು ಎರಡು ಭಾಗಗಳಲ್ಲಿ ಅಂದರೆ, ಭಾಗ-1- ಟೆಕ್ನೋ-ಕಮರ್ಷಿಯಲ್ ಕಮ್ ಪ್ರಿ-ಕ್ವಾಲಿಫಿಕೇಶನ್ ಬಿಡ್ ಮತ್ತು ಭಾಗ-2-ಹಣಕಾಸು ಬಿಡ್‌ಗಳನ್ನು ಇ-ಟೆಂಡರಿಂಗ್ ಮೋಡ್ ಮೂಲಕ ಭಾರತದ ರಾಷ್ಟ್ರಪತಿಗಳ ಪರವಾಗಿ ಅಧೀಕ್ಷಕ ಅಭಿಯಂತರರು, ಭಾಭಾ ಪರಮಾಣು ಕೇಂದ್ರ, ಮೈಸೂರು ಇವರು ಈ ಕೆಳಕಂಡ ಕಾರ್ಯನಿರ್ವಹಿಸಲು ಸಾಕಷ್ಟು ಅನುಭವ ಮತ್ತು ಸಾಮರ್ಥ್ಯಗಳನ್ನು ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಈ ಟೆಂಡರ್‌ನಲ್ಲಿ ವಿವರಿಸಿದಂತಹ ಪರಿಮಾಣವುಳ್ಳ ಕಾರ್ಯಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸುತ್ತಾರೆ.

ಟೆಂಡರ್ ಸಂಖ್ಯೆ	BARC/MYS/AMD/MDS/PVK/MECH/WT-01/2022-23 dtd.25.11.20222
ಕಾಮಗಾರಿಯ ಹೆಸರು	ಫೌಂಡೇಶನ್ ಪ್ಲೇಟನ ಅಸ್ತಿತ್ವದಲ್ಲಿರುವ ರಚನೆಗೆ ಫ್ಯಾಬ್ರಿಕೇಶನ್ ಮತ್ತು ವೆಲ್ಡಿಂಗ್ ಮಾಡುವುದು.
ಅಂದಾಜು ಮೊತ್ತ	ರೂ.70,00,000/– (ಎಪ್ಪತ್ತು ಲಕ್ಷ ರೂಗಳು ಮಾತ್ರ)
ಇ.ಎಮ್.ಡಿ ಮೊತ್ತ	ರೂ.1,40,000/– (ಒಂದು ಲಕ್ಷದ ನಲವತ್ತು ಸಾವಿರ ರೂಗಳು ಮಾತ್ರ)
ಕಾಮಗಾರಿಯ ಕಾಲಾವಧಿ	180 ದಿನಗಳು
ಟೆಂಡರ್ ಮಾರಾಟದ ಕಾಲಾವಧಿ	ಆನ್‌ಲೈನ್

ಬಿಡ್ ಫಾರಂಗಳು ಹಾಗೂ ಇತರ ವಿವರಗಳನ್ನು https://eprocure.gov.in /eprocure/app. ನಲ್ಲಿ ಪಡೆಯಬಹುದು. www.barc.gov.in ನಲ್ಲಿ ಎನ್‌ಐಟಿ ಲಭ್ಯವಿದೆ. ಎನ್‌ಐಟಿ ವಿವರಗಳಿಗಾಗಿ ಸಂಪರ್ಕಿಸಿ. vpraveen@barc.gov.in (0821-2406574/6201), deepthi@barc.gov.in (0821-2406477)

ಸಹಿ– ಅಧೀಕ್ಷಕ ಅಭಿಯಂತರರು, ಬಿಎಆರ್‌ಸಿ
ಭಾರತದ ರಾಷ್ಟ್ರಪತಿಗಳಿಗೆ ಹಾಗೂ ಅವರ ಪರವಾಗಿ

ಕರ್ನಾಟಕ ಸರ್ಕಾರ ಕಾರ್ಯಪಾಲಕ ಅಭಿಯಂತರರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ

ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:ಸಇಂ–1:2022–23 ದಿ:02.12.2022

ಅಲ್ಪಾವಧಿ ಟೆಂಡರ್/ಮರು ಟೆಂಡರ್ ಪ್ರಕಟಣೆ ಸಂಖ್ಯೆ 19/2022–23

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿರುವ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **(ಟೆಂಡರಿಗಿಟ್ಟ ಮೊತ್ತ ಕನಿಷ್ಠ ರೂ. 3.00 ಲಕ್ಷದಿಂದ ಗರಿಷ್ಠ ರೂ. 40.00 ಲಕ್ಷದವರೆಗಿನ ಮೊತ್ತದ ಒಟ್ಟು 13 ಕಾಮಗಾರಿಗಳು)**. ಟೆಂಡರ್‌ಗಳನ್ನು eprocurement portal: https://eproc.karnataka.gov.in; ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್ (eprocurement portal: https://eproc.karnataka.gov.in), ಪೋರ್ಟಲ್‌ನಲ್ಲಿ ದಿನಾಂಕ: **08.12.2022** ರಿಂದ ಪಡೆಯಬಹುದು. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ **ದಿನಾಂಕ 16.12.2022ರ ಸಂಜೆ 4.00 ಗಂಟೆವರೆಗೆ**. ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ ರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಎಂಸಿ&ಎ/508/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕಾಮಗಾರಿ ವಿಭಾಗ: ಮೈಸೂರು

ಸಂ: ಕರಾಸಾ/ಕಾನಿಅ/ಮೈ/ಕಿಅ/539/2022–23 ದಿನಾಂಕ: 07.12.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 23,24,25&26/2022–23

ಕರ್ನಾಟಕ ಲೋಕೋಪಯೋಗಿ ಇಲಾಖೆ/ ಸಿ.ಪಿ.ಡಬ್ಲ್ಯೂಡಿ ನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಸಂ.23,24,25 ಮತ್ತು 26 ಕ್ಕೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https://eproc.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಮುಂಗಡ ಠೇವಣಿ ಮೊತ್ತ
1.	ಕೊಳ್ಳೇಗಾಲ ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕ ಒದಗಿಸುವುದು.	ರೂ.17.75	ರೂ.44,375=00
2.	ಗುಂಡ್ಲುಪೇಟೆ ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕ ಒದಗಿಸುವುದು.	ರೂ.17.75	ರೂ.44,375=00
3.	ನಂಜನಗೂಡು ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕ ಒದಗಿಸುವುದು.	ರೂ.17.75	ರೂ.44,375=00
3.	ಚಾಮರಾಜನಗರ ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕ ಒದಗಿಸುವುದು.	ರೂ.17.75	ರೂ.44,375=00

1. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20–12–2022
2. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ: 13–12–2022 ರ ನಂತರ ಪಡೆಯಬಹುದು.
3. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕ.ರಾ.ರ.ಸಾ. ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ ಬನ್ನಿಮಂಟಪ, ಮೈಸೂರು ಇಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂ: 08021–2498828

ಸಹಿ/–
ಕಾರ್ಯ ನಿರ್ವಾಹಕ ಅಭಿಯಂತರರು
ಕ.ರಾ.ರ.ಸಾ.ನಿಗಮ: ಕಾಮಗಾರಿ ವಿಭಾಗ, ಮೈಸೂರು.

DIPR/CP/VCPL/3426/2022-23